ಸ್ಕೌಟಿಂಗ್ ಪರಿಚಯ

ಘನತೆವೆತ್ತ ರಾಷ್ಟ್ರಪತಿಗಳಿಂದ ಕರ್ನಾಟಕದ ಸ್ಕೌಟ್–ಗೈಡ್ ಪ್ರತಿನಿಧಿಗಳು
ರಾಷ್ಟ್ರಪತಿ ಸ್ಕೌಟ್/ಗೈಡ್ ಪ್ರಶಸ್ತಿಯನ್ನು ಸ್ವೀಕರಿಸುತ್ತಿರುವುದು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ರಾಜ್ಯ ಕೇಂದ್ರ ಕಾರ್ಯಾಲಯ, ಕೊಂಡಜ್ಜಿ ಬಸಪ್ಪ ರಸ್ತೆ
ಪ್ರೊ. . ಶಿವಶಂಕರ್ ವೃತ್ತ, ಕೋಟೆ
ಬೆಂಗಳೂರು–560 002. ದೂರವಾಣಿ: 2670 1227

ಡಾ॥ ಆನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಹಾಗೂ ಶಿಬಿರ ಕೇಂದ್ರ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದೊಡ್ಡಬಳ್ಳಾಪುರ
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ: 27622093



ಶಿಬಿರಕೇಂದ್ರದ ಆಡಳಿತ ಕಛೇರಿ ಮತ್ತು
ತರಬೇತಿ ಕೇಂದ್ರದಲ್ಲಿರುವ ವೀಕ್ಷಣಾ ಗೋಪುರ

ಈ ಶಿಬಿರ ಕೇಂದ್ರಕ್ಕೆ 75 ವರ್ಷಗಳ ದೀರ್ಘ ಚರಿತ್ರೆ ಇದೆ. ಇಡೀ ದಕ್ಷಿಣ ಭಾರತದಲ್ಲಿ ಸೆಂಟ್ರಲ್ ಟ್ರೈನಿಂಗ್ ಕ್ಯಾಂಪ್ ಎಂಬ ಪ್ರಖ್ಯಾತಿ ಇದರದು. ಎರಡು ದಶಕಗಳಿಂದೀಚೆಗೆ ಡಾ॥ಆನಿಬೆಸೆಂಟ್ ಪಾರ್ಕ್ ಎಂಬ ಹೆಸರು ಪಡೆದಿದೆ.

ಈ ಕೇಂದ್ರವು 106 ಎಕರೆ ವಿಸ್ತೀರ್ಣವಾಗಿದೆ. ಇಡೀ ದೇಶದಲ್ಲಿ ಅತಿ ವಿಶಾಲವಾದ, ಸುಸಜ್ಜಿತವಾದ, ಏಕಕಾಲದಲ್ಲಿ 1000ಕ್ಕೂ ಹೆಚ್ಚು ಜನರು, ತಂಬುಗಳಲ್ಲಿ ಶಿಬಿರಹೂಡಲು ವ್ಯವಸ್ಥೆ ಇರುವ ಪ್ರದೇಶವಾಗಿದೆ.

ಬೆಂಗಳೂರಿನ ಉತ್ತರಕ್ಕೆ ಬೆಂಗಳೂರಿನಿಂದ 48 ಕಿ.ಮೀ. ದೂರದಲ್ಲಿ ಬೆಂಗಳೂರು-ಹಿಂದೂಪುರ ಅಂತಾರಾಜ್ಯ ಹೆದ್ದಾರಿಯಿಂದ, ದೊಡ್ಡಬಳ್ಳಾಪುರ ರೈಲ್ವೇ ಸ್ಟೇಷನ್‌ನಿಂದ, 2 ಕಿ.ಮೀ. ಒಳಭಾಗದಲ್ಲಿದೆ.

ಕಣ್‌ತಣಿಯುವ ವನರಾಶಿ, ವಿಶ್ರಮಿಸಲು ಮರದ ಕುಟೀರಗಳೂ ಸೇರಿದಂತೆ ವಿವಿಧ ರೀತಿ ಆಶ್ರಯಗಳು, ಸಭಾಮಂಟಪಗಳು, ಉತ್ತಮ ರೀತಿಯ ನೀರಿನ ವ್ಯವಸ್ಥೆ, ಆಟಪಾಠಗಳಿಗೆ ಹೇಳಿ ಮಾಡಿಸಿದ ಮೈದಾನ, ವೀಕ್ಷಣೆಗಾಗಿ 65 ಅಡಿಗಳ ಗೋಪುರ, ಸಂಸ್ಥಾಪಕ ಬಿ. . ದಂಪತಿಗಳ ಪ್ರತಿಮೆ. ಹೀಗೆ ಶಿಬಿರಾರ್ಥಿಗಳನ್ನು ಕೈಬೀಸಿ ಕರೆಯುವ ಸುಂದರತಾಣ ಡಾ॥ಆನಿಬೆಸೆಂಟ್ ಪಾರ್ಕ್.

ಸ್ಕೌಟಿಂಗ್ ಪರಿಚಯ

ಕನ್ನಡ ಅನುವಾದ ಮತ್ತು ಪರಿಷ್ಕರಣೆ

ರಾ. ಚಂದ್ರಶೇಖರನ್, ಎಲ್.ಟಿ.(ಕಬ್ಸ್)

ಮಾಜಿ ಸ್ಥಾನಿಕ ಆಯುಕ್ತ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಪ್ರೊ|| ಪಿ ಶಿವಶಂಕರ್ ವೃತ್ತ, ಕೊಂಡಜ್ಜಿ ಬಸಪ್ಪ ರಸ್ತೆ

ಕೋಟೆ, ಬೆಂಗಳೂರು-560 002

ಪ್ರಕಾಶಕರು
ಕರ್ನಾಟಕ ರಾಜ್ಯ ಕೇಂದ್ರ ಕಾರ್ಯಾಲಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಪ್ರೊ|| ಪಿ ಶಿವಶಂಕರ್ ವೃತ್ತ,
ಕೊಂಡಜ್ಜಿ ಬಸಪ್ಪ ರಸ್ತೆ,
ಕೋಟೆ, ಬೆಂಗಳೂರು-560 002

© ಹಕ್ಕುಗಳನ್ನು ಕಾದಿರಿಸಲಾಗಿದೆ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್**

ಪುಟಗಳು : viii + 68 = 76

ಪ್ರಥಮ ಮುದ್ರಣ : 1996
ದ್ವಿತೀಯ ಮುದ್ರಣ : 2009
ತೃತೀಯ ಮುದ್ರಣ : 2013

ಬೆಲೆ : ರೂ. **15-00 (ಹದಿನೈದು ರೂಪಾಯಿಗಳು)**

ಮುದ್ರಣ :
ಸತ್ಯಶ್ರೀ
ಪ್ರಿಂಟರ್ಸ್ ಪ್ರೈ. ಲಿ.
ಬೆಂಗಳೂರು-26
ದೂ : 080-2674 8811
satyasriprn@gmail.com

ಮುನ್ನುಡಿ

ಉತ್ತಮ ಸಮಾಜದ ಬೆಳವಣಿಗೆಗೆ, ನಿರಂತರ ಜಾಗರೂಕತೆ, ಕಾರ್ಯ ಪ್ರವೃತ್ತತೆ ಮತ್ತು ಪೌರತ್ವಗಳು ಅತ್ಯಗತ್ಯ. ದೇಶದ ಎಲ್ಲ ಜನರೂ ಸ್ವ ಇಚ್ಛೆಯಿಂದ

ಶ್ರಮಜೀವನ, ಉತ್ತಮ ಮೌಲ್ಯಗಳು, ಉತ್ತಮಮಾರ್ಗ ಮತ್ತು ಜವಾಬ್ದಾರಿಯುತ ಪೌರತ್ವಗಳನ್ನು ಅವಲಂಬಿಸಬೇಕು. ಎಲ್ಲಾ ರಂಗಗಳಲ್ಲಿಯೂ ಶ್ರೇಷ್ಠತೆ, ದಕ್ಷತೆ ಹಾಗೂ ಅನಿವಾರ್ಯತೆಯ ಅರಿವಿರಬೇಕು. ಮನೆಯಲ್ಲಾಗಲೀ, ನೆರೆಹೊರೆಯಲ್ಲಾಗಲೀ, ಎಲ್ಲರೊಡನೆ ಒಲುಮೆಯಿಂದ ಬಾಳಬೇಕೆಂಬ, ನಿಷ್ಕಾಮಸೇವೆ ಸಲ್ಲಿಸಬೇಕೆಂಬ ಭಾವನೆಗಳನ್ನು ಹೊಂದಿರಬೇಕು. ಜಡತ್ವ, ನಿರಾಸಕ್ತತೆಗಳನ್ನು ಹೋಗಲಾಡಿಸಬೇಕು. ವಿಚಾರಶೀಲತೆಯ ಪ್ರವೃತ್ತಿ ಹೆಚ್ಚಬೇಕು. ನಾವು ಪಡೆದಷ್ಟನ್ನಾದರೂ, ದೇಶಕ್ಕೆ ಹಿಂತಿರುಗಿಸಿ, ಗುಣಾತ್ಮಕವಾಗಿ ಅಭಿವೃದ್ಧಿ ಪಡಿಸಬೇಕೆಂಬ ಅಪೇಕ್ಷೆಯು ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕು.

ಈ ರೀತಿಯ ಉದಾತ್ತ ಭಾವನೆಗಳನ್ನು ಅಭಿವೃದ್ಧಿಪಡಿಸಿ, ದೇಶದ ಸಾಮಾಜಿಕ ಹಾಗೂ ಸಾರ್ವಜನಿಕ ಕಲ್ಯಾಣಕ್ಕಾಗಿ ಕಾರ್ಯಪ್ರವೃತ್ತರಾಗಬೇಕಾದರೆ, ಸ್ವಹಿತ ಹಾಗೂ ಪರಹಿತ ರಕ್ಷಣೆಯ ಜವಾಬ್ದಾರಿಯನ್ನು ಹೊರಬೇಕಾದರೆ, ಸುವ್ಯವಸ್ಥೆಯ ರಕ್ಷಣೆ, ಶಾಂತಿ, ಸೌಹಾರ್ದತೆ ಮತ್ತು ಪರಿಸರ ಸೌಂದರ್ಯ ಇವುಗಳನ್ನು ಕಾಪಾಡಬೇಕಾದರೆ:

1. ಹಿರಿಯರು ತಮ್ಮ ದೃಷ್ಟಿಕೋನವನ್ನು ಬದಲಿಸಿಕೊಳ್ಳಬೇಕು.

2. ಇಂದಿನ ಯುವಜನಾಂಗಕ್ಕೆ ಉತ್ತಮ ಶಿಕ್ಷಣ ನೀಡಬೇಕು.

ಈ ರೀತಿಯ ಆದರ್ಶಯುತ ಬಾಳ್ವೆಗೆ ಶಿಕ್ಷಣ ನೀಡುವ, ವಿಶ್ವವ್ಯಾಪಕವಾದ ಏಕೈಕ ಯುವಸಂಸ್ಥೆ, ಸ್ಕೌಟಿಂಗ್/ಗೈಡಿಂಗ್–ನಮ್ಮ ದೇಶದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ.

ಯುವಜನತೆಗೆ ಉತ್ತಮ ಶಿಕ್ಷಣ ನೀಡಿ ತಿದ್ದುವ ಜವಾಬ್ದಾರಿ ಹಿರಿಯರದು. ವಿಶೇಷವಾಗಿ ಸ್ಕೌಟರ್, ಗೈಡರ್‌ಗಳದು. ಅವರಿಗೆ ನೀಡುವ ಶಿಕ್ಷಣವು ಪ್ರಭಾವಶಾಲಿಯಾಗಿ, ಸ್ಫೂರ್ತಿದಾಯಕವಾಗಿ ಪರಿಣಮಿಸಿದಾಗ, ಅದು ಬಾಲಕ ಬಾಲಕಿಯರಿಗೆ ಸ್ಫೂರ್ತಿಯನ್ನು ನೀಡುತ್ತದೆ ಹಾಗೂ ಪ್ರಭಾವಶಾಲಿಯಾಗುತ್ತದೆ.

ಸ್ಕೌಟರ್ ಗೈಡರ್‌ಗಳೂ, ಸ್ಕೌಟಿಂಗ್ ಬಗ್ಗೆ ಒಲವು ತೋರುವ ಹಿರಿಯರೂ, ಸಂಸ್ಥೆಯ ಬಗ್ಗೆ ಸಾಮಾನ್ಯ ತಿಳುವಳಿಕೆ ಪಡೆಯಬೇಕಾದುದು ಮೊದಲ ಹೆಜ್ಜೆ.

ಮಾಜಿ ರಾಜ್ಯ ಸ್ಥಾನಿಕ ಆಯುಕ್ತರೂ, ಅನುಭವಿ ತರಬೇತಿ ನಾಯಕರೂ ಆದ ಶ್ರೀ ರಾ. ಚಂದ್ರಶೇಖರನ್‌ರವರು, ಸಾಮಾನ್ಯ ತಿಳುವಳಿಕೆ ಪಡೆಯಲು ಅನುಕೂಲ ವಾಗುವಂತೆ. ಕೈಪಿಡಿಯನ್ನು 1996 ರಲ್ಲಿ ತಯಾರಿಸಿದ್ದು, ಅದನ್ನೀಗ ಸೋ॥ ಗಳಾದ ಶ್ರೀ ಟಿ.ಎಸ್. ಲೂಕಾಸ್, ಶ್ರೀ ಎನ್. ಶ್ರೀನಿವಾಸನ್, ಶ್ರೀ ಚಿನ್ನಸ್ವಾಮಿ ರೆಡ್ಡಿ ಮತ್ತು ಶ್ರೀ ಎ.ಎಂ. ಶಂಕರ್ ಇವರುಗಳ ಸಹಕಾರದಿಂದ ಪರಿಷ್ಕರಿಸಿರುತ್ತಾರೆ. ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಗೊ.ರು. ಚೆನ್ನಬಸಪ್ಪನವರು ಪರಿಶೀಲಿಸಿರುತ್ತಾರೆ. ಪ್ರಕಟನಾ ಸಮಿತಿಯ ಅಧ್ಯಕ್ಷರನ್ನು, ಸದಸ್ಯರುಗಳನ್ನು, ಲೇಖಕರನ್ನು ಅತ್ಯಲ್ಪಕಾಲದಲ್ಲಿ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟಿರುವ ಸತ್ಯಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಎಲ್. ಲಿಂಗಪ್ಪನವರನ್ನು ಅಭಿನಂದಿಸುತ್ತೇನೆ.

ಈ ಗ್ರಂಥದಲ್ಲಿ ವಿಷಯಸಂಪತ್ತನ್ನು ಕ್ರೋಢೀಕರಿಸಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ತಿಳಿಗನ್ನಡದಲ್ಲಿ ಬರೆದಿರುತ್ತಾರೆ. ಸ್ಕೌಟಿಂಗ್ ಇತಿಹಾಸವನ್ನು ಹೇಳುವಾಗ ಕರ್ನಾಟಕದ ಸ್ಕೌಟಿಂಗ್ ಚರಿತ್ರೆಯ ಹೆಗ್ಗಳಿಕೆಯನ್ನೂ ಸಂಗ್ರಹಿಸಿಕೊಡಲಾಗಿದೆ.

ಈ ಪುಸ್ತಕವು ತರಬೇತಿದಾರರಿಗೂ, ತರಬೇತಿ ಪಡೆಯುವ ಸ್ಕೌಟರ್, ಗೈಡರ್‌ಗಳಿಗೂ, ಸಂಸ್ಥೆಗೆ ಸೇರಬಯಸುವ ಎಲ್ಲರಿಗೂ ಉತ್ತಮ ರೀತಿಯ ಸ್ಫೂರ್ತಿದಾಯಕ ಸಾಧನವಾಗುವುದೆಂದು ನಂಬಿದ್ದೇನೆ. ಸಾಮಾನ್ಯ ತಿಳುವಳಿಕೆಗಾಗಿ ರಾಜ್ಯ ಸಂಸ್ಥೆಯ ಪ್ರಕಟಣಾ ವಿಭಾಗದಿಂದ ಪ್ರಸ್ತುತ ಪಡಿಸಿರುವ ಈ ಕೈಪಿಡಿಯ ಮೂರನೇ ಆವೃತ್ತಿಯನ್ನು ಬಿಡುಗಡೆಗೊಳಿಸಲು ಹರ್ಷಿಸುತ್ತೇನೆ. ಕೈಪಿಡಿಯು ಪೂರ್ಣ ಉಪಯೋಗವಾಗಲೆಂದೂ, ಉದ್ದೇಶಿತ ಸ್ಫೂರ್ತಿ ದೊರೆತು, ಸಂಸ್ಥೆಯ ಚಟುವಟಿಕೆಗಳು ಗಣನಾತ್ಮಕವಾಗಿಯೂ, ಗುಣಾತ್ಮಕವಾಗಿಯೂ ಅಭಿವೃದ್ಧಿ ಹೊಂದಲೆಂದೂ ಆಶಿಸುತ್ತೇನೆ.

ಬೆಂಗಳೂರು–560 002	**ಕೊಂಡಜ್ಜಿ ಬ. ಷಣ್ಮುಖಪ್ಪ**
22–04–2013	ರಾಜ್ಯ ಪ್ರಧಾನ ಆಯುಕ್ತರು

ನನ್ನ ಮಾತು

ಕಳೆದ 18ನೆಯ ಶತಮಾನದ ಉತ್ತರಾರ್ಧದಲ್ಲಿ ಮಹನೀಯರೊಬ್ಬರು ಜನಿಸಿದರು. ತಮ್ಮ ಬಾಲ್ಯವನ್ನು ಕಷ್ಟಕರ ವಾತಾವರಣದಲ್ಲಿ ಕಳೆದರು. ಪ್ರತಿಭಾನ್ವಿತ ವ್ಯಕ್ತಿಯಾದ ಅವರು ತಮ್ಮ ಬಾಲ್ಯ, ಯೌವನಗಳಲ್ಲಿ ಕಂಡ ಸಮಾಜದ ಅನೇಕ ನ್ಯೂನತೆಗಳನ್ನು ಸರಿಪಡಿಸಲು ಒಂದು ಯೋಜನೆಯನ್ನು ರೂಪಿಸಿದರು. ಮುಂದೆ ಅವರು ಸೈನ್ಯದಲ್ಲಿ ಅಧಿಕಾರಿಯಾದರು. ಭಾರತದಲ್ಲಿ ತಮ್ಮ ಸೈನ್ಯ ಜೀವನವನ್ನು ಪ್ರಾರಂಭಿಸಿದರು. ಸೈನ್ಯ ಜೀವನದ ಅನುಭವಗಳನ್ನು ಎರಕ ಹೊಯ್ದು, ಈ ಮುಂಚೆ ಕಲ್ಪಿಸಿಕೊಂಡ ಯೋಜನೆಯೊಡನೆ ಬೆರಸಿ ರೂಪಿಸಿದ ಯೋಜನೆಯೇ ಸ್ಕೌಟಿಂಗ್, "ಸಣ್ಣ ಬೀಜವೊಂದರಿಂದ ಹೆಮ್ಮರವಾಯ್ತು" ಎಂಬದು ನಾಣ್ನುಡಿ. ಅವರ ಜೀವಿತ ಕಾಲದಲ್ಲಿಯೇ ಹೆಮ್ಮರವಾದ ಸ್ಕೌಟಿಂಗ್, ಅವರು ಗತಿಸಿದ 72 ವರ್ಷಗಳ ಬಳಿಕವೂ ಇನ್ನೂ ಬೆಳೆಯುತ್ತಲೇ ಇದೆ. ಮಕ್ಕಳ ಪುರೋಭಿವೃದ್ಧಿಗಾಗಿ, ತಮ್ಮ ಸೈನ್ಯ ಜೀವನವನ್ನು 1910ರಲ್ಲಿ ತ್ಯಜಿಸಿ, ತಮ್ಮ 32 ವರ್ಷಗಳ ಶೇಷ ಜೀವನವನ್ನು ಸ್ಕೌಟಿಂಗ್‌ಗಾಗಿಯೇ ಅರ್ಪಿಸಿಕೊಂಡ ಆ ಧನ್ಯಜೀವಿಯೇ ಲಾರ್ಡ್ ಬೇಡನ್ ಪೋವೆಲ್.

1996 ರಲ್ಲಿ ಪುಸ್ತಕರೂಪವನ್ನು ಕಂಡ ನನ್ನ ಮೊದಲ ಕೃತಿ 'ಸ್ಕೌಟಿಂಗ್ ಪರಿಚಯ" ಪರಿಷ್ಕೃತವಾಗಿ, ಹೊಸರೂಪದಲ್ಲಿ, ಎರಡನೆಯ ಮುದ್ರಣ ಮುಗಿದು ಮೂರನೆಯ ಮುದ್ರಣದ ಪರಿಷ್ಕರಣೆ ನನ್ನ ಕೈಗೇ ಬಂದದ್ದು ನನಗೆ ಬಹಳ ಸಂತಸವನ್ನು ತಂದಿದೆ.

ನನ್ನ ಹಿಂದು ಮತ್ತು ಸ್ಕೌಟ್‌ದಳ ಮುಂದೆ ರೋವರ್-ಸ್ಕೌಟರ್ ಅವಧಿಗಳಲ್ಲಿ ಕೈ ಹಿಡಿದು ಮಾರ್ಗದರ್ಶನ ನೀಡಿದ ಕರ್ನಾಟಕ ಬಿ.ಪಿ. ಎಂದೇ ಪ್ರಖ್ಯಾತರಾಗಿದ್ದ ನನ್ನ ಪೂಜ್ಯ ತಂದೆ ದಿ॥ ಎಂ.ಹೆಚ್. ರಾಮಚಂದ್ರರಾವ್, ದಿವಂಗತರುಗಳಾದ ಎ.ವಿ.ಸುಬ್ರಹ್ಮಣ್ಯಂ, ಮು॥ ವೆಂಕಟಕೃಷ್ಣಪ್ಪ, ಮೇಜರ್ ವೈ.ವಿ.ಕೆ. ಮೂರ್ತಿ, ಬಿ.ಸಿ. ನಂಜುಂಡಯ್ಯ, ಕೆ. ಶ್ರೀಕಂಠಯ್ಯ ಮತ್ತು ಕೊಂಡಜ್ಜಿ ಬಸಪ್ಪ, ಆರ್.ಜಿ. ಪದಕಿ ಮತ್ತು ಸಾಂಬಶಿವನ್ ಇವರುಗಳನ್ನು ಅಶ್ರುಪೂರಿತವಾಗಿ ಸ್ಮರಿಸುತ್ತೇನೆ. ರಾಷ್ಟ್ರಕಛೇರಿಯ ಮಾಜಿ ನಿರ್ದೇಶಕ ಶ್ರೀ ರಂಗರಾವ್ ಅವರನ್ನು ಪಚಮಢಿಯ ರಾಷ್ಟ್ರೀಯ ಪ್ರಶಿಕ್ಷಣ ಕೇಂದ್ರದಲ್ಲಿ ಸೇವೆ ಕಲ್ಪಿಸಿಕೊಟ್ಟು, ನನ್ನ ತಿಳುವಳಿಕೆಯನ್ನು ಪರಿಪಕ್ವಗೊಳಿಸಿಕೊಳ್ಳಲು ಸಹಾಯ ಮಾಡಿದ್ದಕ್ಕಾಗಿ ಸ್ಮರಿಸುತ್ತೇನೆ.

ಈ ಲೇಖನ ಸಂಗ್ರಹದ ಪುನರ್ಮುದ್ರಣಕ್ಕೆ ಪ್ರೋತ್ಸಾಹಿಸಿ, ಕಾರಣಕರ್ತರಾದ ಶ್ರೀ ಗೊ.ರು. ಚನ್ನಬಸಪ್ಪ, ಪ್ರಕಟನಾ ಸಮಿತಿ ಅಧ್ಯಕ್ಷರು, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಪ್ರಧಾನ ಆಯುಕ್ತರು ಪರಿಷ್ಕರಣೆಯಲ್ಲಿ ಸಹಕರಿಸಿದ ಸೋ॥ ಟಿ.ಎಸ್. ಲೂಕಾಸ್, ರಾಜ್ಯ ಆಯುಕ್ತರು(ಸ್ಕೌಟ್ಸ್); ಶ್ರೀ ಎನ್. ಶ್ರೀನಿವಾಸನ್, ಶ್ರೀ ಎ.ಎಂ. ಶಂಕರ್ ಇವರುಗಳಿಗೆ ನನ್ನ ಅನಂತ ಧನ್ಯವಾದಗಳು.

ಪಚಮಢಿಗೇಟ್, ರಾಜಾನುಕುಂಟೆ
22-04-2013

ರಾ. ಚಂದ್ರಶೇಖರನ್
ಲೇಖಕ

ವಿಷಯಾನುಕ್ರಮಣಿಕೆ

ರಾಜ್ಯ ಮುಖ್ಯ ಆಯುಕ್ತರ ಮುನ್ನುಡಿ

ನನ್ನ ಮಾತು

1. ಸ್ಕೌಟಿಂಗ್ ಎಲ್ಲರಿಗೂ ತೆರೆದಿರುವ, ಬೆಳೆಯುತ್ತಲೇ ಇರುವ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆ 1
2. ಮುನ್ನೋಟ ಪತ್ರ, ಉದ್ದೇಶ 2
3. ಸ್ಕೌಟಿಂಗ್ ಎಂದರೇನು? 7
4. ಸ್ಕೌಟಿಂಗ್ ಒಂದರಿಂದ ಹತ್ತು 12
5. ಸ್ಕೌಟಿಂಗ್ – ಮೂಲ ತತ್ತ್ವಗಳು 14
6. ಸ್ಕೌಟ್ ಪ್ರತಿಜ್ಞೆ ಮತ್ತು ನಿಯಮ 16
7. ಸಂಸ್ಥೆಯ ವಿಭಾಗಗಳು, ವಿಧಾನಗಳು 18
8. ಸ್ಕೌಟುಗಳ ಪ್ರಗತಿಪರ ಯೋಜನೆ 27
9. ಬಿ.ಪಿ. ಜೀವನ ಚರಿತ್ರೆ 32
10 ಸ್ಕೌಟ್ ಸಂಸ್ಥೆಯ ಚರಿತ್ರೆ ಮತ್ತು ಬೆಳವಣಿಗೆ 41
11. ಸ್ಕೌಟಿಂಗ್ ಚರಿತ್ರೆಯಲ್ಲಿ ಕರ್ನಾಟಕದ ಹೆಗ್ಗಳಿಕೆ 47
12. ಸ್ಕೌಟರುಗಳ ತರಬೇತಿ 53
13. ಸಂಸ್ಥೆಯ ವ್ಯವಸ್ಥಿತ ರಚನೆ 56
14. ಸ್ಕೌಟಿಂಗ್ ಮತ್ತು ಸಮಾಜದ ನಡುವಣ ಬಾಂಧವ್ಯ 64
15. ಸ್ಕೌಟಿಂಗ್‌ನಲ್ಲಿ ಹಿರಿಯರ ಪಾತ್ರ 66

ಸ್ಕೌಟಿಂಗ್‌ನಲ್ಲಿ ನಾಯಕತ್ವ

ಸ್ಕೌಟಿಂಗ್ ಎಂದರೆ ನಾಯಕತ್ವ ಶಿಕ್ಷಣ ಎನ್ನುತ್ತಾರೆ.

ಸ್ಕೌಟ್ ಸಂಸ್ಥೆಯಲ್ಲಿ ನಾಯಕರುಗಳ ಸರಮಾಲೆಯೇ ಇದೆ. ಬಾಲಕರಲ್ಲಿ ಅವರ ನಾಯಕ ಪೆಟ್ರೋಲ್ ಲೀಡರು ಸಹಾಯಕರುಗಳಿಂದ ಹಿಡಿದು, ಗುಂಪುಗಳು, ಹಿಂಡು, ದಳ, ತಂಡಗಳು, ಸ್ಥಳೀಯ ಸಂಸ್ಥೆ, ಜಿಲ್ಲಾ ಸಂಸ್ಥೆ, ರಾಜ್ಯ ಸಂಸ್ಥೆ, ರಾಷ್ಟ್ರೀಯ ಸಂಸ್ಥೆಯವರೆಗೆ ಬೋಧಕರು ಪರೀಕ್ಷಕರು, ಆಯುಕ್ತರುಗಳು, ಪದಾಧಿಕಾರಿಗಳು, ಹೀಗೆ ಎಷ್ಟೋ ಜನರು ಅರ್ಪಣಾಭಾವದಿಂದ ಕಾರ್ಯನಿರತ ರಾಗಿದ್ದಾರೆ. ಇವರೆಲ್ಲರೂ ಸಂಸ್ಥೆಯ ರೀತಿ ನೀತಿಗಳಿಗೆ ಅನುಸಾರವಾಗಿ "ಪದವಿಯು ಸೇವೆ ಮಾಡುವ ಉದ್ದೇಶಕ್ಕಾಗಿಯೇ ಹೊರತು, ಸ್ವಾರ್ಥ ಸಾಧನೆ ಮತ್ತು ಸ್ವಹಿತಕ್ಕಲ್ಲ" ಎಂದು ಅರಿತು ನಡೆಯುವವರು. "ಸ್ವಹಿತಕ್ಕೆ ಧಕ್ಕೆ ಬರದಂತೆ ಪರಹಿತ ಸಾಧನೆ" ಮಾಡುವ ಕಡುಗಲಿಗಳು.

ನಾಯಕರುಗಳ ಪಾತ್ರವು ಗುರುತರವಾದುದು, ಜವಾಬ್ದಾರಿಯುತವಾದುದು ಮತ್ತು ಪ್ರಭಾವಶಾಲಿಯಾದುದು.

ನಾಯಕರುಗಳು ಮೊದಲಿಗೆ ತಮಗೆ ತಾವು ಕಲಿಯಬೇಕು. ಯಾವುದೇ ಕಾರಣಕ್ಕೂ ಸ್ವಹಿತಕ್ಕಾಗಿ ಇತರರ ಮೇಲೆ ಆಧಾರ ಪಡಬಾರದು. ಸೇವಾನಿರತರಾಗಿ ಪರಹಿತವನ್ನು ಕಾಯಬೇಕು. ತಮ್ಮ ಆದರ್ಶ ಜೀವನದಿಂದ ಇತರರಿಗೆ ಮಾದರಿ ಆಗಬೇಕು. ಮಾರ್ಕ್‌ಟ್ವೇನ್‌ರವರು ಹೇಳಿರುವಂತೆ "ಒಳ್ಳೆಯವರಾಗುವುದು ಉತ್ತಮ, ಆದರೆ ಇತರರಿಗೆ ಒಳ್ಳೆಯದನ್ನು ಕಲಿಸುವುದು ಉತ್ತಮತರವಾದುದು".

ಬಿ.ಪಿ. ರವರ ಮಾತಿನಲ್ಲಿ ಹೇಳುವುದಾದರೆ "....ನೀವು ಸ್ಕೌಟ್ ಘಟಕಗಳನ್ನು ಪ್ರಾರಂಭಿಸಲು ಅವಕಾಶಗಳು ಹೇರಳವಾಗಿವೆ. ಪರಿಣಾಮವು ಅದ್ಭುತವಾಗಿದೆ. ಏಕೆಂದರೆ ನೀವು ಬಾಲಕರನ್ನು ಉತ್ತಮ ಪೌರರನ್ನಾಗಿ ತಿದ್ದುತ್ತಿದ್ದೀರಿ. ಬಾಲಕರು ವಯಸ್ಸಾದಂತೆ, ನಿಮ್ಮ ಮಾರ್ಗದರ್ಶನದಂತೆ ಬೆಳೆಯುವುದನ್ನು ಕಾಣುತ್ತೀರಿ. ಇದು ದೇಶಕ್ಕೆ ನೀವು ನೀಡುಬಹುದಾದ ಅತ್ಯುನ್ನತ ಮೌಲ್ಯದ ಕೊಡುಗೆ ಆಗಿದೆ. ...... ಮಕ್ಕಳು, ಬಾಲಕರು, ಯುವಕರ ವಿಷಯದಲ್ಲಿ, ನಿಮ್ಮ ಆದರ್ಶ ನಡೆವಳಿಕೆಯ ಮೂಲಕ ಅವರ ಸಚ್ಚಾರಿತ್ರ್ಯ ಬೆಳವಣಿಗೆ ಮತ್ತು ಸನ್ಮಾರ್ಗ ಪ್ರವರ್ತನೆಗಳು ಅಭಿವೃದ್ಧಿ ಹೊಂದಿ ಅವರು ಜೀವನ ಪೂರಾ ನಿಮ್ಮನ್ನು ನೆನೆಯುತ್ತಾರೆ. ಇದರಿಂದ ಮಹತ್ಸಾಧನೆಯ ತೃಪ್ತಿ ನಿಮ್ಮದಾಗುತ್ತದೆ."

ಸ್ಕೌಟಿಂಗ್ ಪರಿಚಯ

ಸ್ಕೌಟಿಂಗ್ ಎಲ್ಲರಿಗೂ ತೆರೆದಿರುವ, ಬೆಳೆಯುತ್ತಲೇ ಇರುವ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸಂಸ್ಥೆ.

ಸ್ಕೌಟಿಂಗ್‌ನ ಮೂಲ ತತ್ತ್ವಗಳಿಗೆ ಒತ್ತಾಸೆ ನೀಡುವ ಯಾರೇ ಆಗಲಿ ಸ್ಕೌಟ್ ಸಂಸ್ಥೆಯ ಸದಸ್ಯರಾಗಬಹುದು. ಭಾಷೆ, ಸಂಸ್ಕೃತಿ, ಜನಾಂಗ, ಸಾಮಾಜಿಕ, ಅಂತಸ್ತು, ಧಾರ್ಮಿಕ ನಂಬಿಕೆ ಇವೆಲ್ಲವೂ ಸ್ಕೌಟಿಂಗ್‌ನಲ್ಲಿ ಸರಿಸಮಾನವೆನಿಸುತ್ತವೆ. ಸ್ಕೌಟ್ ಎಲ್ಲರಿಗೂ ಸ್ನೇಹಿತ ಮತ್ತು ಇತರ ಸ್ಕೌಟ್‌ಗಳಿಗೆ ಸಹೋದರ ಎನ್ನುವುದು ನಿಯಮ. ಆದಕಾರಣ ಯಾವುದೇ ರೀತಿಯ ಭೇದಭಾವನೆಗಳಿಗೂ ಅವಕಾಶವಿಲ್ಲ ದಂತೆ, ಒಂದೇ ಮನೆಯವರಂತೆ ಬಾಳುವುದನ್ನು ನಾವು ಸ್ಕೌಟಿಂಗ್‌ನಲ್ಲಿ ಕಾಣುತ್ತೇವೆ. ಆದ್ದರಿಂದ ಇದು **ಎಲ್ಲರಿಗೂ ತೆರೆದಿರುವ ಮುಕ್ತವಾದ ಸಂಸ್ಥೆ**ಯಾಗಿದೆ.

1907 ಕ್ಕೂ ಮುಂಚಿತವಾಗಿ, ಪತ್ರಿಕೆಯಲ್ಲಿ ಪಾಕ್ಷಿಕ ಪುರವಣಿಯಾಗಿ ಪ್ರಕಟ ಗೊಂಡು, ಬಾಲಕರಿಗೆ ಸ್ಫೂರ್ತಿ ನೀಡಿದ ಕಾರ್ಯಕ್ರಮ ಸ್ಕೌಟಿಂಗ್. ಬಾಲಕ ರಾದರೋ ತಾವೇ ತಾವಾಗಿ ಉತ್ಸಾಹಭರಿತರಾಗಿ ಸ್ಕೌಟಿಂಗ್ ನಡೆಸಲು ಉದ್ಯುಕ್ತರಾದರಾದರೂ, 1907 ರಲ್ಲಿ, ಸಂಸ್ಥಾಪಕ ಲಾರ್ಡ್ ಬೇಡನ್ ಪೋವೆಲ್ ರವರು, ಬ್ರೌನ್‌ಸೀ ದ್ವೀಪದಲ್ಲಿ ನಡೆಸಿದ ಪ್ರಾಯೋಗಿಕ ಶಿಬಿರದಿಂದ ಸ್ಕೌಟಿಂಗ್ ವಿಧಿವತ್ತಾಗಿ ಪ್ರಾರಂಭವಾಯಿತು ಎಂಬುದಾಗಿ ಹೇಳುತ್ತೇವೆ. ಆ ರೀತಿಯಲ್ಲಿ ಕೇವಲ 20 ಬಾಲಕರಿಂದ ಪ್ರಾರಂಭವಾದ ಸಂಸ್ಥೆ, ಇಂದು ವಿಶ್ವದಾದ್ಯಂತ 450 ದಶಲಕ್ಷಕ್ಕೂ ಮೀರಿದ ಸದಸ್ಯತ್ವವನ್ನು ಹೊಂದಿದೆ. ವರ್ಷೇ ವರ್ಷೇ ಹೆಚ್ಚು ಹೆಚ್ಚು ಬಾಲಕರು ಸಂಸ್ಥೆಗೆ ಸೇರುತ್ತಲೇ ಇರುತ್ತಾರೆ. ಹಾಗಾಗಿ, ಇದು **ಬೆಳೆಯುತ್ತಲೇ ಇರುವ ಸಂಸ್ಥೆ** ಯೆನಿಸುತ್ತದೆ.

ವಿಶ್ವಮಟ್ಟದಲ್ಲಿ 217 ಕ್ಕೂ ಹೆಚ್ಚು ರಾಷ್ಟ್ರ ಸಂಸ್ಥೆಗಳು, ವೋಸಂನಲ್ಲಿ ಸದಸ್ಯತ್ವ ಪಡೆದಿವೆ. ಈ ಸಂಸ್ಥೆಗಳು, ಮೂಲ ತತ್ತ್ವಗಳಿಗೆ ಧಕ್ಕೆಯುಂಟಾಗದಂತೆ, ತಮ್ಮ ತಮ್ಮ ದೇಶಗಳ ನಾಗರೀಕತೆ, ಭಾಷೆ, ಸಂಸ್ಕೃತಿ, ಸಂಪ್ರದಾಯ ಇತ್ಯಾದಿಗಳ ಹಿನ್ನೆಲೆಯಲ್ಲಿ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಸ್ಕೌಟ್ ನಿಯಮ ಮತ್ತು ಪ್ರತಿಜ್ಞೆಗಳನ್ನು ಆಚರಿಸಲು ಬದ್ಧರಾಗಿರುವುದರಿಮದ ಇದೊಂದು **ರಾಷ್ಟ್ರೀಯ ಸಂಸ್ಥೆ** ಎನಿಸುತ್ತದೆ.

ಪ್ರಾರಂಭದೆಸೆಯಲ್ಲಿ ಬ್ರಿಟಿಷ್ ದ್ವೀಪಗಳಿಗೆ ಸೀಮಿತವಾಗಿದ್ದ ಈ ಸಂಸ್ಥೆಯು, ಇಂದು ವಿಶ್ವದ ಮೂಲೆ ಮೂಲೆಗಳಲ್ಲಿ ಹರಡಿ, 217 ರಾಷ್ಟ್ರಗಳಲ್ಲಿ ಅಸ್ತಿತ್ವದಲ್ಲಿದೆ. ವಿಭಿನ್ನ ದೇಶಗಳಲ್ಲಿ, ವಿಭಿನ್ನ ರೀತಿಗಳಲ್ಲಿ ಸ್ಕೌಟಿಂಗ್ ನಡೆದಿದ್ದರೂ, ಅದರ ಮೂಲ ತತ್ತ್ವಗಳು ಒಂದೇ. ಉದ್ದೇಶ ಒಂದೇ. ಭಾವನಾತ್ಮಕವಾಗಿ ಎಲ್ಲರನ್ನೂ ಒಗ್ಗೂಡಿಸಿ, ವಿಶ್ವವೆಲ್ಲವೂ ಒಂದೇ, ಎಂದು ಏಕತೆಯನ್ನು ಸಾರುವ ಸಂಸ್ಥೆಯು ಇದಾದುದರಿಂದ, **ಸ್ಕೌಟಿಂಗ್ ಅಂತಾರಾಷ್ಟ್ರೀಯ ಸಂಸ್ಥೆ** ಆಗಿದೆ.

(1924 ರ ಆಗಸ್ಟ್‌ನಲ್ಲಿ ಕೋಪನ್ ಹೇಗನ್‌ನಲ್ಲಿ ನಡೆದ ದ್ವೈವಾರ್ಷಿಕ ಅಂತಾರಾಷ್ಟ್ರೀಯ ಸ್ಕೌಟ್ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದನ್ವಯ)

ಮುನ್ನೋಟ ಪತ್ರ

ವಿಶ್ವ ಸ್ಕೌಟ್ ಸಂಸ್ಥೆಯು ಶತಮಾನೋತ್ಸವವನ್ನು ಆಚರಿಸಿ ಐದು ವರ್ಷಗಳು ಕಳೆದುವು. ಭಾರತದಲ್ಲಿ ಅದೂ ಕರ್ನಾಟಕದಲ್ಲಿ ಸ್ಕೌಟಿಂಗ್ ಪ್ರಾರಂಭವಾಗಿ ಒಂದು ನೂರಾ ಮೂರು ವರ್ಷಗಳೇ ಸಂದುವು. ಇನ್ನೂ ಬೆಳೆಯುತ್ತಲೇ ಇರುವುದರಿಂದ ಮುಂದೆ ಹೇಗೆ? ಎನ್ನುವುದು ಸಹಜ. ಇಡೀ ವಿಶ್ವದಲ್ಲಿ ಆಗುತ್ತಿರುವ ಬದಲಾವಣೆಗಳಿಗೆ ತಕ್ಕಂತೆ ನಾವೂ ಬದಲಾಗಬೇಕು. ಹಾಗಾಗಿ ಮುನ್ನೋಟದ ಅವಶ್ಯಕತೆ. ಮುಂದೆ ಹೇಗೆಂಬ ಮುನ್ನೋಟ ಅಥವ ಪರಿಕಲ್ಪನೆಗೆ ಅನುಗುಣವಾಗಿ ನಮ್ಮ ಕಾರ್ಯಕ್ರಮಗಳು, ಸಮಾಜದೊಡನೆ ಬಾಂಧವ್ಯ, ನಮ್ಮ ನಮ್ಮಲ್ಲಿ ಹೊಂದಾಣಿಕೆ ಹಾಗೂ ನಮ್ಮ ಅಗಾಧವಾದ, ಸ್ವಯಂಸೇವಾ ತತ್ಪರರಾಗಿ ಕೆಲಸ ಮಾಡುವ, ಲಕ್ಷಾಂತರ ಕಾರ್ಯಕರ್ತರುಗಳು ವಿವಿಧ ರೀತಿ, ಸ್ತರಗಳಲ್ಲಿ ಒಗ್ಗೂಡಿ ಕೆಲಸ ಮಾಡಲು ಸಂಘಟನೆ ಮುಂತಾದ ರೂಪು ರೇಷೆಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ.

ವಿಶ್ವ ಸ್ಕೌಟಿಂಗ್ ಸಂಸ್ಥೆಯ (ವೋಸಂಸ) ಮುನ್ನೋಟ ಹೇಳಿಕೆ (ಪತ್ರ)

ವಿಶ್ವವ್ಯಾಪಕ ಆಂದೋಳನವಾಗಿರುವುದರಿಂದ "ವಿಶ್ವವನ್ನು ಉತ್ತಮ ಪಡಿಸುವುದು" ಅದರ ನೈಜ ಹಾಗೂ ಪೂರಕ ಕಾರ್ಯವಾಗಿರುತ್ತದೆ.

ಸ್ಕೌಟಿಂಗ್ ತನ್ನ ಎರಡನೆಯ ಶತಮಾನದಲ್ಲಿ ಮುನ್ನಡೆದಿರುವುದನ್ನು ಕಾಣುತ್ತಿದ್ದೇವೆ. ಮೌಲ್ಯಾಧಾರಿತ ಶೈಕ್ಷಣಿಕ ಆಂದೋಳನವಾಗಿ, ಪ್ರಭಾವಶಾಲೀ ಸಂಸ್ಥೆಯಾಗಿ, ತನ್ನ ಉದ್ದೇಶ ಸಾಧನೆಯಲ್ಲಿ ನಿರತವಾಗಿರುವುದನ್ನು ಕಾಣುತ್ತಿದ್ದೇವೆ.

ಈ ದಿಕ್ಕಿನಲ್ಲಿ ಹಿರಿಯರು ಸ್ವಯಂಪ್ರೇರಿತರಾಗಿ ಮುಂದೆ ಬಂದು, ತಮ್ಮ ಶೈಕ್ಷಣಿಕ ಪಾತ್ರವನ್ನು ನಿರ್ವಹಿಸುತ್ತಾ ಬೆಂಬಲ ನೀಡುತ್ತಿರುವುದನ್ನು ಕಾಣುತ್ತಿದ್ದೇವೆ. ಸ್ಕೌಟಿಂಗ್ ವಿಶ್ವವ್ಯಾಪೀ ಸಂಸ್ಥೆಯಾಗಿ, ಹೆಚ್ಚು ಹೆಚ್ಚು ಯುವಜನರನ್ನು ವಿಶೇಷವಾಗಿ ತರುಣ/ತರುಣಿಯರನ್ನು ತನ್ನಡೆಗೆ ಆಕರ್ಷಿಸುತ್ತಾ, ಸಮಾಜದ ವ್ಯಾಪಕ ಹಾಗೂ ಅಖಂಡ ಸ್ತರಗಳಿಂದ ಬಂದವರನ್ನು ಉಳಿಸಿಕೊಂಡು ಮುಂದುವರೆಯುತ್ತಿರುವು ದನ್ನು ಕಾಣುತ್ತಿದ್ದೇವೆ.

ಎಲ್ಲಾ ಸಂಸ್ಕೃತಿಗಳಿಂದಲೂ ಬಂದು, ಸಂಸ್ಥೆಯನ್ನು ಸೇರಿರುವ ವಯಸ್ಕರು–ಪುರುಷರು ಹಾಗೂ ಮಹಿಳೆಯರು, ಸ್ಕೌಟಿಂಗ್‌ನ ಆಕರ್ಷಣೆಗೆ ಒಳಪಟ್ಟವರಾಗಿ, ಯುವಜನರೊಡಗೂಡಿ ಸ್ಕೌಟಿಂಗ್ ಮೂಲಕ ಸಮಾಜಕ್ಕೆ ಮಹತ್ವಪೂರ್ಣ ಕೊಡುಗೆಯನ್ನು ನೀಡಬಹುದೆಂದು ಮನಗಂಡಿರುವುದನ್ನು ಕಾಣುತ್ತಿದ್ದೇವೆ.

ಸ್ಕೌಟ್ ಚಳವಳಿಯು ಕ್ರಿಯಾತ್ಮಕವಾದುದೂ, ತನ್ನ ಮೂಲರೂಪವನ್ನು ಬಿಡದೆ ಕಾಪಾಡಿಕೊಂಡು ಕಾಲಕ್ಕೆ ತಕ್ಕಂತೆ ಬದಲಾಗುತ್ತಿರುವುದೂ, ಸಾಕಷ್ಟು ಸಂಪನ್ಮೂಲಗಳಿಂದ ಕೂಡಿರುವುದೂ, ಸರಳ ರೀತಿಯ ವ್ಯವಸ್ಥೆಯಿರುವುದೂ ಆಗಿದೆ. ಸಂಸ್ಥೆಯಲ್ಲಿ ಪ್ರಜಾಸತ್ತಾತ್ಮಕವಾಗಿ ತೀರ್ಮಾನ ಕೈಗೊಳ್ಳುವ ರಚನೆಯಿದೆ. ಹಾಗಾಗಿ ಸಂಘಟನೆ, ಆಡಳಿತ ನಿರ್ವಹಣೆ, ವಿಚಾರವಿನಿಮಯ, ಸಂಪರ್ಕ ವಿಧಾನಗಳು ಎಲ್ಲಾ ಸ್ತರಗಳಲ್ಲಿಯೂ, ಸಮರ್ಥರೀತಿಯಲ್ಲಿ ಮುನ್ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ.

ಸ್ಕೌಟಿಂಗ್‌ನ ಧ್ಯೇಯ/ಉದ್ದೇಶ

ಸ್ಕೌಟ್ ಪ್ರತಿಜ್ಞೆ ಮತ್ತು ನಿಯಮದ ಆಧಾರದ ಮೇಲೆ, ಯುವಜನರಿಗೆ ಮೌಲ್ಯರೂಪ ಪದ್ಧತಿಯಲ್ಲಿ ಶಿಕ್ಷಣವನ್ನೊದಗಿಸುವುದೇ ಸ್ಕೌಟಿಂಗ್‌ನ ಧ್ಯೇಯವಾಗಿದೆ. ಆ ಮೂಲಕ ಜನರು ಸ್ವಾವಲಂಬಿಗಳಾಗಿ, ಸಮಾಜದಲ್ಲಿ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಗೊಂಡು, ಉತ್ತಮ ವಿಶ್ವವನ್ನು ರೂಪಿಸುವ ವ್ಯಕ್ತಿಗಳನ್ನಾಗಿ ಪರಿವರ್ತಿಸಲು ಸಹಾಯಕವಾಗಿರುವುದು ಮುಖ್ಯ ಗುರಿಯಾಗಿದೆ.

ಸಾಧನಾ ತಂತ್ರಗಳು

* ಯುವಜನರನ್ನು, ಅವರ "ಬೆಳವಣಿಗೆಯ ಅವಧಿ" ಪೂರಾ 'ಅನೌಪಚಾರಿಕ ಶಿಕ್ಷಣ' (Non-formal educational system) ದಲ್ಲಿ ತೊಡಗಿಸುವುದು.
* ಪ್ರತಿ ವ್ಯಕ್ತಿಯೂ ಸ್ವಾವಲಂಬಿಯಾಗಿ, ಜವಾಬ್ದಾರಿಯುಳ್ಳವನಾಗಿ, ವಚನಬದ್ಧ ವ್ಯಕ್ತಿಯಾಗಿ, ದಕ್ಷತೆಯಿಂದ ಕೂಡಿದವನಾಗಿ, ತಾನಾಗಿ ವಿಕಾಸಗೊಳ್ಳಲು ವಿಶೇಷ ಪದ್ಧತಿಯನ್ನು ಅನುಸರಿಸುವುದು.
* ಪ್ರತಿಜ್ಞೆ ಮತ್ತು ನಿಯಮಗಳಲ್ಲಿ ನಿಹಿತವಾಗಿರುವ ಆಧ್ಯಾತ್ಮಿಕ, ಸಾಮಾಜಿಕ ಮತ್ತು ವೈಯಕ್ತಿಕ ವಿಧಿ, ನಿಯಮಗಳಿಗನುಸಾರವಾಗಿ, ತಾನಾಗಿ ಮೌಲ್ಯಾಧಾರಿತ ಪದ್ಧತಿಯನ್ನು ರೂಪಿಸಿಕೊಳ್ಳಲು ಸಹಾಯ ಮಾಡುವುದು.

ಈ ಮೂರು ಮೂಲ ಸಾಧನಾತಂತ್ರಗಳ ಮೂಲಕ ಉದ್ದೇಶಗಳನ್ನು ಸಾಧಿಸಲಾಗುವುದು.

ಮುಂದುವರೆದು, ಈ ಮುನ್ನೋಟ ಪತ್ರದ ಉದ್ದೇಶ-ಗುರಿ ಸಾದನೆ.

1999 ರಲ್ಲಿ ದರ್ಬಾನ್‌ನಲ್ಲಿ ನಡೆದ ಸಭೆಯಲ್ಲಿ ಅಂಗೀಕೃತವಾದ, ಈ ಸಾಧನಾತಂತ್ರವು ವಿಶ್ವ ಸ್ಕೌಟಿಂಗ್‌ನ ಒಂದು ಮೈಲಿಗಲ್ಲಾಗಿದೆ. ಸಂಸ್ಥೆಯ ಉದ್ದೇಶ ಸಾಧನೆಗಾಗಿ ಆರು ಸವಾಲುಗಳನ್ನು ಗುರುತಿಸಲಾಗಿದೆ.

1. **ಔಚಿತ್ಯ:** (Relevance)	ಯುವಜನರ ಅವಶ್ಯಕತೆಗಳು, ಆಶೋತ್ತರಗಳನ್ನು ಈಡೇರಿಸುವುದು.
2. **ಪೂರಕ ಸ್ವಭಾವ :** (Complementary nature)	ಯುವಜನರ ಶಿಕ್ಷಣಕ್ಕೆ ಪೂರಕವಾಗಿ, ಸ್ಕೌಟ್ ವಿಧಾನದ ಮೂಲಕ, ಶಿಕ್ಷಣ ಕ್ಷೇತ್ರದಲ್ಲಿ ಸ್ಕೌಟಿಂಗ್ ನೀಡಬಹುದಾದ ವಿಶೇಷ ಕೊಡುಗೆಯ ಬಗ್ಗೆ ನಮ್ಮ ಪ್ರಯತ್ನವನ್ನು ಕೇಂದ್ರೀಕರಿಸುವುದು.
3. **ಸದಸ್ಯತ್ವ:** (Membership)	ಹೆಚ್ಚು ಹೆಚ್ಚು ಯುವಕರಿಗೆ ಸ್ಕೌಟಿಂಗ್ ತಲುಪುವಂತೆ ಮಾಡುವುದು.
4. **ವಯಸ್ಕರು** (Adults)	ನಮ್ಮ ಅವಶ್ಯಕತೆಗನುಗುಣವಾಗಿ, ವಯಸ್ಕರನ್ನು ಆಕರ್ಷಿಸುವುದು ಮತ್ತು ಅವರನ್ನು ಮಧ್ಯೆ ಬಿಡದಂತೆ (Retaining) ನೋಡಿಕೊಳ್ಳುವುದು.
5. **ಬಾಂಧವ್ಯ ಮತ್ತು ಸಹಭಾಗಿತ್ವ :** (Relationship and Partnership)	ಇತರರ ಸಹಯೋಗದೊಂದಿಗೆ ಯುವಜನರಿಗೆ ಉತ್ತಮವಾಗಿ ಸೇವೆ ಸಲ್ಲಿಸುವುದು.

6. **ಐಕ್ಯತೆ :** (Unity) — ಎಲ್ಲಾ ಸ್ತರಗಳಲ್ಲಿಯೂ ಸಮಾನ ರೀತಿಯ ಗುರಿಯನ್ನು ಅನುಸರಿಸುವುದು.

ಮೂರು ಪ್ರಮುಖ ಕಾರ್ಯ ತಾಂತ್ರಿಕ ಕ್ಷೇತ್ರಗಳು

(The Three Strategic Areas)

ಮೇಲ್ಕಾಣಿಸಿರುವ ಆರು ಸವಾಲುಗಳನ್ನೆದುರಿಸಲು ಈ ಕೆಳಗಿನ ಮೂರು ತಾಂತ್ರಿಕ ಕ್ಷೇತ್ರಗಳು ಒದಗಿಬರುತ್ತದೆ.

1. **ಯುವಜನರು :** ಹೆಚ್ಚು ಯುವಜನರಿಗೆ – ವಿಶೇಷವಾಗಿ ತರುಣರಿಗೆ– ಉತ್ತಮ ಸ್ಕೌಟಿಂಗ್ ತಲುಪಬೇಕಾದರೆ, ಸಂಸ್ಥೆಯ ಔಚಿತ್ಯ (Relevance), ಪೂರಕ ಸ್ವಭಾವ ಮತ್ತು ಸದಸ್ಯತ್ವಗಳ ಬಗ್ಗೆ ಗಮನಹರಿಸಬೇಕಾಗುತ್ತದೆ.

2. **ವಯಸ್ಕರು :** ನಮಗೆ ಬೇಕಾಗುವಂತಹ ವಯಸ್ಕನಾಯಕರುಗಳನ್ನು ಸಂಸ್ಥೆಗೆ ಆಕರ್ಷಿಸುವ ಹಾಗೂ ಅವರುಗಳು ಸಂಸ್ಥೆಯನ್ನು ಬಿಡದಂತೆ ನೋಡಿಕೊಳ್ಳುವ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಅವರುಗಳು ಸ್ವಯಂಪ್ರೇರಿತರಾಗಿ ಸೇವೆ ಮಾಡುವ ಬಗ್ಗೆ ಒತ್ತು ನೀಡಬೇಕಾಗುತ್ತದೆ.

3. **ಸಂಘಟನೆ ಮತ್ತು ವಿಧಾನಗಳು:** ಬಾಂಧವ್ಯ, ಸಹಭಾಗಿತ್ವ ಹಾಗೂ ಐಕ್ಯತೆಗಳ ಬಗ್ಗೆ ಗಮನಹರಿಸಬೇಕಾಗುತ್ತದೆ. ಯುವಜನರ ಏಳಿಗೆಗಾಗಿ, ಇತರರ ಸಹಯೋಗದೊಂದಿಗೆ ಕಾರ್ಯ ನಿರ್ವಹಿಸುವುದು ಬಹು ಮುಖ್ಯ ಅಂಶವಾಗಿದೆ. ಎಲ್ಲಾ ಸ್ತರಗಳಲ್ಲಿಯೂ ಸಮಾನ ರೀತಿಯ ಉದ್ದೇಶ ಸಾಧನೆಗಾಗಿ ಶ್ರಮಿಸುವುದು ಅತ್ಯವಶ್ಯಕ. ಈ ಎರಡು ಸವಾಲುಗಳ (ಭಾಂಧವ್ಯ ಮತ್ತು ಸಹಭಾಗಿತ್ವ ಹಾಗೂ ಐಕ್ಯತೆ) ಸೂಕ್ತ ಕಾರ್ಯನಿರ್ವಹಣೆಯಿಂದ ಸಂಸ್ಥೆಯ ಸಮಗ್ರ ರೀತಿಯ ಪ್ರಭಾವವು ಎದ್ದು ಕಾಣಬೇಕಾಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುನ್ನೋಟವು, ವಿಶ್ವಸಂಸ್ಥೆಯ ಮುನ್ನೋಟಕ್ಕನುಗುಣವಾಗಿಯೇ ಇದೆ.

ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮುನ್ನೋಟವೂ ಅದೇ ಆಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮುನ್ನೋಟ ಪತ್ರ

ದೇಶದ ಅತ್ಯಂತ ವ್ಯಾಪಕ ಯುವಚಳುವಳಿಯಾಗಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು 2013 ರ ವೇಳೆಗೆ ಸ್ವಾವಲಂಬಿಯಾಗಿರುತ್ತದೆ. ಮೌಲ್ಯಾಧಾರಿತವೂ, ಉತ್ತಮ ಗುಣಮಟ್ಟವುಳ್ಳದ್ದಾಗಿಯೂ ಆಗಿರುತ್ತದೆ. ಉತ್ತಮ ರೀತಿಯಲ್ಲಿ ನಿರ್ವಹಿಸಲ್ಪಡುತ್ತಿರುತ್ತದೆ. (well managed). ಯುವಜನರ ಆಸೆ ಆಕಾಂಕ್ಷೆಗಳಿಗನು ಗುಣವಾಗಿ ನವೀಕರಣಗೊಂಡ (innovative) ಸವಾಲುಗಳಿಂದ ಕೂಡಿದ (challenging) ಕಾರ್ಯಕ್ರಮಗಳನ್ನು ಒದಗಿಸುತ್ತದೆ.

ಸ್ಕೌಟಿಂಗ್‌ನ ಏಕರೀತಿಯ ಉದ್ದೇಶ

ತರುಣರು/ಯುವಕರು, ಬೌದ್ಧಿಕ, ದೈಹಿಕ, ಸಾಮಾಜಿಕ ಮತ್ತು ಆಧ್ಯಾತ್ಮಿಕವಾಗಿ ತಮ್ಮ ಸುಪ್ತ ಶಕ್ತಿಗಳ ಪೂರ್ಣವಿಕಾಸವನ್ನು ಸಾಧಿಸಿ, ಅವರು ಸ್ಥಾನಿಕವಾಗಿ, ರಾಷ್ಟ್ರೀಯವಾಗಿ, ಅಂತಾರಾಷ್ಟ್ರೀಯವಾಗಿ, ಸಮಾಜದ ಉತ್ತಮ ಪೌರರಾಗಿ ಜೀವಿಸಲೂ, ಜವಾಬ್ದಾರಿಯುತರಾಗಿ ಬಾಳಲೂ ಸಹಾಯ ಮಾಡುವುದು ಸಂಸ್ಥೆಯ ಉದ್ದೇಶವಾಗಿದೆ. ಇದು ವಿಶ್ವದ ಎಲ್ಲಾ ಸದಸ್ಯ ರಾಷ್ಟ್ರ ಸಂಸ್ಥೆಗಳ ಉದ್ದೇಶವೂ ಆಗಿದೆ.

ಸ್ಕೌಟಿಂಗ್ ಸುಖ ಜೀವನ ನಡೆಸಲು ಅವಶ್ಯಕವಾದ ಶಿಕ್ಷಣವನ್ನು ಕೊಡುತ್ತದೆ.

ನೈತಿಕ ಮೌಲ್ಯಗಳ ನೆಲಗಟ್ಟು : ಸಾಮಾಜಿಕ ಕರ್ತವ್ಯಗಳ ಬಗ್ಗೆ ಅರಿವು; ಜೀವನೋಪಯುಕ್ತವಾದ ಅನೇಕ ರೀತಿಯ ಕೌಶಲಗಳು; ದೈಹಿಕ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳು; ಬುದ್ಧಿವಿಕಾಸಕ್ಕೆ ಬೇಕಾದ ಸ್ಫೂರ್ತಿದಾಯಕ, ವೈವಿಧ್ಯಮಯ, ಪ್ರಗತಿಪರ ಶಿಕ್ಷಣ; ಎಲ್ಲವುಗಳಲ್ಲಿಯೂ ಬಾಲಕರ ಅಭಿರುಚಿ ಮತ್ತು ಶಕ್ತಿ, ಸಾಮರ್ಥ್ಯಗಳಿಗೆ ಹೊಂದುವಂತಹ, ಆಯ್ಕೆ ಮಾಡಿಕೊಳ್ಳಬಹುದಾದಂತಹ ಚಟುವಟಿಕೆಗಳು, ಇವುಗಳ ಹಿನ್ನೆಲೆಯಲ್ಲಿ ಶಿಕ್ಷಣ ಪಡೆದ ಸ್ಕೌಟ್ ಬಾಲಕರು, ತಮ್ಮ ಜೀವನದಲ್ಲಿ ಎಂತಹ ಕಠಿಣ ಪರಿಸ್ಥಿತಿಯನ್ನಾದರೂ ನಗುನಗುತ್ತಾ ಎದುರಿಸುತ್ತಾರೆ. ಎಲ್ಲರೊಡನೆ ಪ್ರೇಮ ವಿಶ್ವಾಸಗಳಿಂದ ಬೆರೆತು ಸಮರಸಜೀವನವನ್ನು ನಡೆಸುತ್ತಾರೆ. ಸ್ವಾವಲಂಬಿಯಾಗಿರುತ್ತಾರೆ. ಪ್ರಾಮಾಣಿಕ, ನಿಷ್ಠಾವಂತ ವ್ಯಕ್ತಿಯಾಗಿ ಬಾಳುತ್ತಾರೆ. ಇತರರಿಗೆ ಅನುಕರಣೀಯರಾಗಿರುತ್ತಾರೆ. ಈ ರೀತಿಯ ಜೀವನದ ರೀತಿ, ನೀತಿಗಳನ್ನು ಕಲಿತು ಬಾಳುವ ಅವರು ತಾವೂ ಸುಖವಾಗಿರುತ್ತಾರೆ. ಇತರರಿಗೂ ಸುಖಜೀವನ ನಡೆಸಲು ಪ್ರೇರಕ ವ್ಯಕ್ತಿಯಾಗುತ್ತಾರೆ. ಒಟ್ಟಿನಲ್ಲಿ ಅವರಿಗೆ ಸುಖವಾಗಿ ಬಾಳಲು ಅವಶ್ಯಕವಾದ ಶಿಕ್ಷಣವು ಸ್ಕೌಟಿಂಗ್‌ನಿಂದ ದೊರಕುತ್ತದೆ.

ಸ್ಕೌಟಿಂಗ್ ಎಂದರೇನು? ಮತ್ತು ಅದರ ವೈಶಿಷ್ಟ್ಯತೆ

ಸ್ಕೌಟಿಂಗ್‌ನ್ನು ಸಚ್ಚಾರಿತ್ರ್ಯವನ್ನು ಕಲಿಸುವ ಶಿಕ್ಷಣವೆನ್ನುತ್ತಾರೆ: ಸ್ಕೌಟಿಂಗ್ ವೈಜ್ಞಾನಿಕವಾಗಿ ರೂಪಿತವಾದ ಹೊರಾಂಗಣ ಶಿಕ್ಷಣವೆನ್ನುತ್ತಾರೆ; ಬಾಲಕರ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಶಿಕ್ಷಣವೆನ್ನುತ್ತಾರೆ; ಶೈಕ್ಷಣಿಕ ಸಂಸ್ಥೆಯೆನ್ನುತ್ತಾರೆ; ಕ್ರೀಡೆಯುನ್ನುತ್ತಾರೆ; ಯೋಜನೆ ಎನ್ನುತ್ತಾರೆ: ಒಂದು ವಿಧಾನವೆನ್ನುತ್ತಾರೆ; ಒಂದು ಕಾರ್ಯಕ್ರಮವೆನ್ನುತ್ತಾರೆ. ಇವೆಲ್ಲವೂ ಅನ್ವರ್ಥ ಹೇಳಿಕೆಗಳೇ ಸರಿ.

ಸ್ಕೌಟಿಂಗ್‌ನ ಹೊರಾಂಗಣ ಚಟುವಟಿಕೆಗಳು ಹಲವಾರು; ಕಲಿಸುವ ಕೌಶಲಗಳು ಹತ್ತಾರು; ಯಾವುದೇ ಕ್ಷೇತ್ರದಲ್ಲಿಯೂ ಕಲಿಯುವ ಅವಕಾಶಗಳು ನೂರಾರು. ಎಲ್ಲಾ ಕಾರ್ಯಕ್ರಮಗಳೂ ಸ್ಫೂರ್ತಿದಾಯಕವಾದುವುಗಳು; ಮನಸ್ಸಿಗೆ ಉಲ್ಲಾಸ, ನೆಮ್ಮದಿ ನೀಡುವಂತಹವು; ದೇಹಕ್ಕೆ ಕೆಲಸ ಕೊಟ್ಟು ಶಕ್ತಿ ನೀಡುವಂತಹವು; ಸಮಾಜದ ಒಳಿತಿಗಾಗಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳು ಹೇಳಿಕೊಳ್ಳುವಷ್ಟು. ಹೀಗಾಗಿ ಕಲಿಸುವ, ಕಲಿಯುವ, ಇತರರಿಗೆ ನೆರವಾಗುವ ವಿಷಯವ್ಯಾಪ್ತಿ ವಿಶಾಲವಾದುದು. ಈ ಎಲ್ಲಾ ಕಾರ್ಯಕ್ರಮಗಳಿಗೂ ಆಧ್ಯಾತ್ಮಿಕ ಹಿನ್ನೆಲೆ ಹಾಗೂ ನೈತಿಕ ನೆಲೆಗಟ್ಟು ಇರುವುದು ಸ್ಕೌಟಿಂಗ್‌ನ **ವೈಶಿಷ್ಟ್ಯತೆ.**

ಮೇಲೆ ಹೇಳಿರುವ ಕೆಲವು ಸ್ಥೂಲ, ಅನ್ವರ್ಥ ಹೇಳಿಕೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸೋಣ.

ಸಚ್ಚಾರಿತ್ರ್ಯವನ್ನು ಕಲಿಸುವ ಶಿಕ್ಷಣ

ಸ್ಕೌಟಿಂಗ್‌ನ ಪ್ರವೇಶಕ್ಕೆ ಮೊದಲ ಹೆಜ್ಜೆಯೆಂದರೆ, ಸ್ಕೌಟ್ ನಿಯಮ ಮತ್ತು ಪ್ರತಿಜ್ಞೆಗಳನ್ನು ಅರ್ಥಮಾಡಿಕೊಂಡು, ಜೀವನದಲ್ಲಿ ಅಳವಡಿಸಿಕೊಂಡು, ಅದರಂತೆ ನಡೆದುಕೊಳ್ಳಲು ವಚನಬದ್ಧರಾಗಿರುವುದು, ಈ ವಚನಬದ್ಧತೆಯು ಇತರರ ಮೆಚ್ಚಿಕೆಗಾಗಿಯಲ್ಲದೆ, ಆತ್ಮತೃಪ್ತಿಗಾಗಿ, ನಮ್ಮ ಅಸ್ತಿತ್ವಕ್ಕೆ ಕಾರಣನಾದ ಆ ಭಗವಂತನಿಗೆ, ಋಣಾತ್ಮಕವಾಗಿಯೆನ್ನಿ, ಕೃತಜ್ಞತಾಪೂರ್ವಕವೆನ್ನಿ – ಮಾತಿನಂತೆ ನಡೆದುಕೊಳ್ಳುವುದು, ಮಾತು ತಪ್ಪದಿರುವುದು ಮುಖ್ಯ.

ಸ್ಕೌಟ್ ನಿಯಮ ಮತ್ತು ಪ್ರತಿಜ್ಞೆಗಳಲ್ಲಿ ಮಾನವೀಯ ಮೌಲ್ಯಗಳು, ಜೀವನ ಮೌಲ್ಯಗಳು ಅಡಕವಾಗಿವೆ. ಇವು ಸಚ್ಚಾರಿತ್ರ್ಯ/ನಡತೆಗೆ ಮೂಲ ಅಂಶಗಳು. ಹಾಗಾಗಿ **ಸ್ಕೌಟಿಂಗ್ ಸಚ್ಚಾರಿತ್ರ್ಯವನ್ನು ಕಲಿಸುವ ಶಿಕ್ಷಣ** ಎನಿಸುತ್ತದೆ.

ಸ್ಕೌಟಿಂಗ್ ವೈಜ್ಞಾನಿಕ ಹೊರಾಂಗಣ ಶಿಕ್ಷಣ

ಸ್ಕೌಟಿಂಗ್ ಕಾರ್ಯಕ್ರಮದ ಶೇಕಡಾ ತೊಂಭತ್ತು ಭಾಗವು ಹೊರಾಂಗಣದಲ್ಲಿ ನಡೆಯುತ್ತದೆ. ಶಿಬಿರ ವಾಸಕ್ಕೆ ಹೆಚ್ಚು ಒತ್ತು ನೀಡುತ್ತದೆ. ಕ್ರಿಯಾಶೀಲವಾಗಿ ಜೀವನ ಮೌಲ್ಯಗಳನ್ನು ರೂಢಿಸಿಕೊಳ್ಳುವುದು; ಇತರರೊಡನೆ ಹೊಂದಿಕೊಂಡು ಬಾಳುವುದು; ಸ್ವಾವಲಂಬನೆ; ಅವಲೋಕನೆ; ಅದ್ಭುತ ದೈವಸೃಷ್ಟಿಯ ಬಗ್ಗೆ ಮನನ ಮಾಡಿಕೊಳ್ಳುವುದು ಮತ್ತು ಆ ಸೃಷ್ಟಿಯ ಅನಂತತೆಗೆ ತಲೆಬಾಗುವುದು; ಸಮಯಪ್ರಜ್ಞೆ; ದೇಹದಾರ್ಢ್ಯತೆ; ಬಾಂಧವ್ಯ ಬೆಳವಣಿಗೆ–ಇವೇ ಮುಂತಾದ ಹೊರಾಂಗಣ ಶಿಕ್ಷಣದ ಕೊಡುಗೆಯ ಜೊತೆಗೆ, ಪ್ರಾಣಿ ಮತ್ತು ಸಸ್ಯವರ್ಗ, ಜೀವಿಗಳಿಂದ ಕಲಿಯುವ ಪಾಠಗಳು (ಗಾಳಿ, ನೀರು, ಆಹಾರಸೇವನೆ ಮುಂತಾದ ಸಹಜ ಕ್ರಿಯೆಗಳು) ಅತ್ಯವಶ್ಯಕ, ಆದರೆ ಅವೇ ಮುಖ್ಯವಲ್ಲ. "ನಮ್ಮಿಂದ ಇತರರಿಗೆ ಉಪಯೋಗವಾಗುವ ಕ್ರಿಯೆಗಳ ಬಗ್ಗೆ ನಾವು ಹೆಚ್ಚು ಗಮನಕೊಡಬೇಕಾಗುತ್ತದೆ" ಎಂಬುದು ಮುಖ್ಯ. ಹೀಗಾಗಿ **ಸ್ಕೌಟಿಂಗ್ ವೈಜ್ಞಾನಿಕ ಹೊರಾಂಗಣ ಶಿಕ್ಷಣ**ವೆನಿಸುತ್ತದೆ.

ಸ್ಕೌಟಿಂಗ್ ಬಾಲಕರ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಶಿಕ್ಷಣ

ಮಾನವನ ಬೆಳವಣಿಗೆಯಲ್ಲಿ ವಿವಿಧ ಪ್ರಮಾಣಗಳಲ್ಲಿ ಐದು ವಿವಿಧ ಕ್ಷೇತ್ರಗಳ ಬೆಳವಣಿಗೆಯು ಬಹು ಮುಖ್ಯವಾದುದು. ಆ ಐದು ಕ್ಷೇತ್ರಗಳು ಹೀಗಿವೆ. 1. ದೈಹಿಕ, 2. ಬೌದ್ಧಿಕ, 3. ಸಾಮಾಜಿಕ, 4. ಭಾವನಾತ್ಮಕ, 5. ಆಧ್ಯಾತ್ಮಿಕ. ಮೊದಲ ಮೂರು ಕ್ಷೇತ್ರಗಳು ಶೇಕಡ 95 ಭಾಗದ ವರೆಗೆ ಅವಶ್ಯಕ. ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳ ಬೆಳವಣಿಗೆಯು ಶೇ 5 ಭಾಗ ಮಾತ್ರವಾದರೂ ಅವುಗಳ ಪ್ರಭಾವವು, ಮಾನವನ ಸುಖಕರ ಜೀವನಕ್ಕೆ ಅತ್ಯಮೂಲ್ಯವಾದುವು. ಮೊದಲ ಮೂರು ಕ್ಷೇತ್ರಗಳಲ್ಲಿ ಬೆಳವಣಿಗೆಯು ಕುಂಠಿತವಾದರೂ ಸಹ, ಈ ಶೇ 5 ಭಾಗ ಬೆಳವಣಿಗೆಯು ಸರಿಯಾಗಿದ್ದರೆ ಜೀವನವು ಖಂಡಿತ ಸುಖಮಯವಾಗಿರುತ್ತದೆ.

ಸ್ಕೌಟಿಂಗ್ ಕಾರ್ಯಕ್ರಮದಲ್ಲಿ ಈ ಐದೂ ಕ್ಷೇತ್ರಗಳು ಸೂಕ್ತವಾದ ರೀತಿಯಲ್ಲಿ ಬೆಳವಣಿಗೆ ಹೊಂದಲು ಒತ್ತು ನೀಡಲಾಗುತ್ತದೆಯಾದ ಕಾರಣ **ಸ್ಕೌಟಿಂಗ್ ಬಾಲಕರ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾದ ಶಿಕ್ಷಣ**ವೆಂದು ಹೇಳಲಾಗುತ್ತದೆ.

ಸ್ಕೌಟಿಂಗ್ ಒಂದು ಕ್ರೀಡೆ

ಹೌದು, ಸ್ಕೌಟಿಂಗ್ ಒಂದು ಶೈಕ್ಷಣಿಕ ಕ್ರೀಡೆ. ಅದಕ್ಕೆ ತನ್ನದೇ ಆದ ವಿಶೇಷ ಗುಣಗಳಿವೆ, ಆಟಗಳ ಮೂಲಕ ಬಾಲಕರ ಬಹುಮುಖ ಬೆಳವಣಿಗೆಗೆ ಪೂರಕವಾದ

ಶಿಕ್ಷಣವು ದೊರಕುತ್ತದೆ. ಬಾಲಕರ ಬೆಳವಣಿಗೆಗೆ ಆಟಗಳ ಪಾತ್ರವು ವಿಶಿಷ್ಟವಾದುದು. ಈ ಬೆಳವಣಿಗೆಯು ಸ್ಕೌಟ್ ದಳದಲ್ಲಿ, ಶಾಲೆಗಳಲ್ಲಿ, ಮನೆಗಳಲ್ಲಿ, ಸಮಾಜದಲ್ಲಿ ಸತತವಾಗಿ ನಡೆಯುತ್ತಲೇ ಇರುತ್ತದೆ.

ಆಟಗಳಿಂದ ಬಾಲಕರಿಗೆ ಆನಂದವೂ ದೊರಕುತ್ತದೆ. ತನಗೆ ತಿಳಿದಿದ್ದನ್ನು ಇತರರಿಗೆ ಹೇಳುವ; ತಿಳಿಯದುದನ್ನು ಇತರರಿಂದ ಕೇಳಿ ತಿಳಿಯುವ ಶಕ್ತಿಯು ಹೆಚ್ಚುತ್ತದೆ. ತನಗೂ ಇತರರಿಗೂ ಉಪಯೋಗಕ್ಕೆ ಬರುವ ವಸ್ತುಗಳನ್ನು ತಯಾರಿಸಲೂ, ಕೆಲಸಗಳನ್ನು ಮಾಡಲೂ ಬರುತ್ತದೆ. ಆತ್ಮವಿಶ್ವಾಸವು ಮೂಡುತ್ತದೆ. ಆತ್ಮಸ್ಥೈರ್ಯವು ಬೆಳೆಯುತ್ತದೆ. ಗೆಲುವಿನಲ್ಲಿ ಬೀಗುವ, ಇತರರಿಗೆ ಮನನೋಯಿಸುವ ಅಥವಾ ಸೋಲಿನಲ್ಲಿ ಕುಂದಿಹೋಗುವ ಭಾವನೆಗಳನ್ನೂ ಮೆಟ್ಟಿ ಎರಡನ್ನೂ ಸಮವಾಗಿ ಭಾವಿಸುವ, ಜೀವನದಲ್ಲಿ ಅತ್ಯವಶ್ಯಕವಾದ **ಕ್ರೀಡಾ ಮನೋಭಾವನೆಯು** ಬೆಳೆಯುತ್ತದೆ. ಈ ಕಾರಣಗಳಿಂದ **ಸ್ಕೌಟಿಂಗ್ ಒಂದು ಕ್ರೀಡೆ** ಎನಿಸುತ್ತದೆ.

ಸ್ಕೌಟಿಂಗ್ ಒಂದು ಯೋಜನೆ

ಸ್ಕೌಟಿಂಗ್‌ನ ಉದ್ದೇಶಗಳನ್ನು ಹಂತಹಂತವಾಗಿ, ಸಾಧಿಸಲು ಅನುಕೂಲ ವಾಗುವಂತೆ, ಶಿಕ್ಷಣವನ್ನು ರೂಪಿಸಿರುವುದರಿಂದ ಇದನ್ನು ಒಂದು ಯೋಜನೆ ಎನ್ನಬಹುದು. ಬಾಲಕರು ಐದು ವಿವಿಧ ರಂಗಗಳಲ್ಲಿ ಬೆಳವಣಿಗೆ ಹೊಂದಬೇಕು. ಆ ಬೆಳವಣಿಗೆಯಿಂದ ಅವರ ವ್ಯಕ್ತಿತ್ವವು ವಿಕಾಸವಾಗಬೇಕು. ಆಗುತ್ತದೆ. ಆ ಐದು ರಂಗಗಳು ಹೀಗಿದೆ.

1. ಸಚ್ಚಾರಿತ್ರ್ಯ (ನಡತೆ) 2. ದೇಹದಾರ್ಢ್ಯತೆ 3. ಕರಕುಶಲತೆ 4. ಸೇವೆ 5. ದೇವರಿಗೆ ಕರ್ತವ್ಯ.

ಈ ಯೋಜನೆಯು ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತದೆ. ಸಚ್ಚಾರಿತ್ರ್ಯವೂ, ವ್ಯಕ್ತಿತ್ವ ವಿಕಾಸವೂ ಉಂಟಾಗುತ್ತದೆ. ಬಲಗೊಳ್ಳುತ್ತದೆ. ಪ್ರಲೋಭನೆಗಳಿಗೆ ಮಾರು ಹೋಗದಂತೆ. ಅವನ ಸಾತ್ತ್ವಿಕಶಕ್ತಿಯು ವೃದ್ಧಿಸುತ್ತದೆ. ಜೀವನ ಕೌಶಲಗಳು ರೂಢಿಗೆ ಬರುತ್ತವೆ. ಆತ್ಮಸ್ಥೈರ್ಯವು ಹೆಚ್ಚುತ್ತದೆ. ಪರಸೇವಾ ಭಾವನೆಯು ವೃದ್ಧಿಯಾಗುತ್ತದೆ. ಧಾರ್ಮಿಕ ಭಾವನೆಯು ಹೊಮ್ಮುತ್ತದೆ. ಸಚ್ಚಾರಿತ್ರ್ಯವುಳ್ಳವರನ್ನು, ಒಳ್ಳೆಯ ನಡೆವಳಿಕೆಯುಳ್ಳವರನ್ನು ಎಲ್ಲರೂ ಗೌರವಿಸುತ್ತಾರೆ.

ಸ್ಕೌಟಿಂಗ್‌ನಲ್ಲಿ ಸಚ್ಚಾರಿತ್ರ್ಯದ ಬಗ್ಗೆ ಬಾಲಕರು ಕಲಿಯುತ್ತಾರೆ. ದೇಹದಾರ್ಢ್ಯವನ್ನು ಹೆಚ್ಚಿಸುವ ಚಟುವಟಿಕೆಗಳಿವೆ. ಕರಕುಶಲತೆಯನ್ನು

ಅಭಿವೃದ್ಧಿಪಡಿಸುವ ಕಾರ್ಯಕ್ರಮಗಳಿವೆ. ಇತರರಿಗೆ ಸೇವೆ ಸಲ್ಲಿಸುವ, ದೇವರಿಗೆ ತಮ್ಮ ಕರ್ತವ್ಯವನ್ನು ಪಾಲಿಸುವ ಕಾರ್ಯಕ್ರಮಗಳು ಸಕ್ರಿಯವಾಗಿ ನಡೆಯುತ್ತವೆ. ವಯಸ್ಸಿಗೆ ತಕ್ಕಂತೆ ಬದಲಾಗುವ ಆಸಕ್ತಿ–ಅಭಿಲಾಷೆಗಳನ್ನೂ, ಆಸೆ-ಆಕಾಂಕ್ಷೆಗಳನ್ನೂ ಲೆಕ್ಕಕ್ಕೆ ತೆಗೆದುಕೊಂಡು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಈ ಯೋಜನೆಯ ಉದ್ದೇಶ ಸಾಧನೆಯಾಗಿರುವುದು, ಬಾಲಕರು ದೊಡ್ಡವರಾಗಿ ತಮ್ಮ ಜೀವನದಲ್ಲಿ ನೆಲೆಗೊಂಡಾಗ ಕಾಣಬರುತ್ತದೆ. ಸ್ಕೌಟುಗಳಾಗಿ ಬೆಳೆದವರಿಗೂ, ಅಲ್ಲದವರಿಗೂ ಇರುವ ವ್ಯತ್ಯಾಸವು ಎದ್ದು ಕಾಣುತ್ತದೆ. ಹಾಗಾಗಿ **ಸ್ಕೌಟಿಂಗ್ ಒಂದು ಯೋಜನೆ** ಎನಿಸುತ್ತದೆ.

ಸ್ಕೌಟಿಂಗ್ ಒಂದು ವಿಧಾನ

ಅದರದೇ ರೀತಿಯಲ್ಲಿ ಸ್ಕೌಟಿಂಗ್ ಒಂದು ವಿಧಾನವೆನಿಸುತ್ತದೆ. ಈ ಕೆಳಕಂಡ ಅಂಶಗಳು ಆ ವಿಧಾನದ ಆಧಾರವಾಗಿವೆ.

1. ಪ್ರತಿಯೊಬ್ಬರೂ ಸ್ವಪ್ರೇರಿತರಾಗಿ ಭಾಗವಹಿಸುವುದು.
2. ಕ್ರಿಯಾತ್ಮಕ, ಪ್ರಗತಿಶೀಲ, ಸ್ಪರ್ಧಾತ್ಮಕ ನಿರ್ವಹಣೆ.
3. ಗುಂಪುಗಳ ಪದ್ಧತಿ
4. ಹೊರಾಂಗಣ, ಬಯಲು ಚಟುವಟಿಕೆಗಳು
5. ಪರೋಕ್ಷವಾದ ಹಿರಿಯರ ಸಹಭಾಗಿತ್ವ

ಇವುಗಳು ಸ್ಕೌಟಿಂಗ್‌ನ ವಿಶಿಷ್ಟ ವಿಧಾನಗಳಾಗಿವೆ. ಹಾಗಾಗಿ **ಸ್ಕೌಟಿಂಗ್ ಒಂದು ವಿಧಾನ** ವೆನಿಸುತ್ತದೆ.

ಸ್ಕೌಟಿಂಗ್ ಒಂದು ಕಾರ್ಯಕ್ರಮ

1. ಈ ಕಾರ್ಯಕ್ರಮವು ಸ್ಕೌಟ್ ವಿಧಾನವನ್ನು ಪ್ರಯೋಗಿಸಲು ಅನುಕೂಲ ವಾಗುತ್ತದೆ.
2. ಇದರ ಮೂಲಕ ಯೋಜನೆಯು ಕಾರ್ಯಗತವಾಗುತ್ತದೆ.
3. ಇದರ ಪ್ರಭಾವದಿಂದ ಉದ್ದೇಶ ಸಾಧನೆ ಆಗುತ್ತದೆ.

ಉದ್ದೇಶ ಸಾಧನೆಯೆಂದರೆ ಇಂದಿನ ಮಕ್ಕಳನ್ನು ದೇಶದ ಉತ್ತಮರಾದ ಭಾವಿ ಪೌರರನ್ನಾಗಿ ಮಾಡುವುದು. ಸ್ಥಳೀಯ, ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಸ್ತರಗಳಲ್ಲಿ, ಜವಾಬ್ದಾರಿಯುತ ಕ್ರಿಯಾಶೀಲ ವ್ಯಕ್ತಿಗಳನ್ನಾಗಿ ರೂಪಿಸುವುದು.

ಸಂಸ್ಥೆಯ ಮೂರು ವಿಭಾಗಗಳಿಗೂ (ಮರಿಗಳ ಹಿಂಡು, ಸ್ಕೌಟ್ ದಳ, ರೋವರ್ ತಂಡ ಅವುಗಳದೇ ಆದ ವಿಶೇಷ ರೀತಿಯ ಕಾರ್ಯಕ್ರಮಗಳಿರುತ್ತವೆ.

ಮರಿಗಳ ಹಿಂಡು (ಕಬ್ ಪ್ಯಾಕ್)	ಸ್ಕೌಟ್ ದಳ (ಸ್ಕೌಟ್ ಟ್ರೂಪ್)	ರೋವರ್ ತಂಡ (ರೋವರ್ ಕ್ರೂ)
– ನಟನೆ ಮಾಡುವ ಎಳೆ ವಯಸ್ಸು	– ತರುಣಾವಸ್ಥೆ	– ಯೌವನಾವಸ್ಥೆ
–ಕಲ್ಪನಾ ಪ್ರಪಂಚದಲ್ಲಿ ವಿಹಾರ	– ಸಹಜ ಬೆಳವಣಿಗೆಗೆ ಒತ್ತಾಸೆಯಿರುತ್ತದೆ	– ವಯಸ್ಕ ಸಮಾಜದೊಡನೆ ಬೆರೆಯಲು ಸೀದಾ ಪ್ರಯತ್ನ.
–ತಾನಾಗಿ ಅಭಿವ್ಯಕ್ತ ಪಡಿಸಲು ಮತ್ತು ಸ್ವತಂತ್ರ ಭಿನ್ನತೆಯಿಲ್ಲದ ಸಹಾಯಕವಾದ ಚಟು ’ವಟಿಕೆಗಳು	– ಇದಕ್ಕೆ ಪೂರಕವಾಗಿ * ಪೆಟ್ರೋಲ್ ಪದ್ಧತಿ * ಆಟಗಳು * ಬೋಧನೆ * ಹೊರಾಂಗಣ * ಸವಾಲನ್ನೆದುರಿಸಲು ಸಿದ್ಧತೆ ಇವುಗಳನ್ನು ಪ್ರಯೋಗ ಮಾಡಲಾಗುತ್ತದೆ.	–ತನ್ನ ತನದ ಸ್ಥಿರೀಕರಣ ಸ್ಪರ್ಧಾತ್ಮಕ ಕ್ರಿಯೆಗಳು ಕಾರ್ಯಚಟುವಟಿಕೆಗಳು
–ಇಬ್ಬರ ನಡುವಣ ಸಂಬಂಧವನ್ನು ತೊರೆದು ಹಲವರೊಡನೆ ಬಾಂಧವ್ಯವನ್ನು ಬೆಳೆಸಲು ಅನುಕೂಲವಾಗುತ್ತದೆ.		

ಸ್ಕೌಟಿಂಗ್ ಕಾರ್ಯಕ್ರಮವು ಆಕರ್ಷಕವಾದುದು. ಈ ಆಕರ್ಷಣೆಗೆ ಪೂರಕ ವಾದ ಅಂಶವೆಂದರೆ ಪ್ರಗತಿಪರವಾದ–ಒಟ್ಟು ಆರು ಹಂತಗಳಲ್ಲಿ–ಪ್ರವೇಶ್‌ನಿಂದ ಹಿಡಿದು ರಾಷ್ಟ್ರಪತಿ ಪ್ರಶಸ್ತಿವರೆಗೆ, ಸ್ಪರ್ಧಾತ್ಮಕವಾದ ಪದಕ ಪದ್ಧತಿ. ಅಂತರ ಗುಂಪುಗಳ ಭೇಟಿ, ರ‍್ಯಾಲಿಗಳು, ಮೇಳಗಳು, ಜಾಂಬೊರೆಟ್‌ಗಳು, ಸ್ಪರ್ಧೆಗಳು ಇತ್ಯಾದಿ ಕಾರ್ಯಕ್ರಮಗಳು – ವಿವಿಧ ಸೋಪಾನಗಳನ್ನೇರಲೂ, ಹೆಚ್ಚು ಪದಕಗಳನ್ನು ಸಂಪಾದಿಸಲೂ ಪ್ರಚೋದನೆ ನೀಡುತ್ತವೆ.

ಮೇಲಿನ ಸ್ಥೂಲವಾದ ವಿವರಣೆಯು **ಸ್ಕೌಟಿಂಗ್ ಒಂದು ಕಾರ್ಯಕ್ರಮ** ವೆಂಬುದನ್ನು ತೋರಿಸುತ್ತದೆ.

ಸ್ಕೌಟಿಂಗ್ ಒಂದರಿಂದ ಹತ್ತು

1. ಸ್ಕೌಟಿಂಗ್ ವಿಶ್ವವ್ಯಾಪಿ ಸಂಸ್ಥೆ, ಇಡೀ ವಿಶ್ವಕ್ಕೆ ಪ್ರತಿಜ್ಞೆ ಒಂದೇ – ಪ್ರತಿಜ್ಞೆ			ಒಂದು
2. ಆಧಾರತತ್ತ್ವಗಳು	i ದೇವರಲ್ಲಿ ನಂಬಿಕೆ (ಅವನು ಜಗತ್ತಿನ ತಂದೆ) ii ಮಾನವರು ಸೋದರರು	ಆಧಾರ ತತ್ತ್ವಗಳು	ಎರಡು
3. ಪ್ರತಿಜ್ಞೆಯಲ್ಲಿ ನಿಹಿತವಾಗಿರುವ ತತ್ವಗಳು	i ದೇವರಿಗೆ ಕರ್ತವ್ಯ ii ಇತರರಿಗೆ ಕರ್ತವ್ಯ iii ಸ್ವ ಕರ್ತವ್ಯ	ಮೂಲ ತತ್ತ್ವಗಳು	ಮೂರು
4. ಸೋದರತೆಯನ್ನು ಬೆಸೆಯುವ ಅಂಶಗಳು	i ಸ್ಕೌಟ್ ಗುರುತು ii ಸ್ಕೌಟ್ ವಂದನೆ iii ಹಸ್ತಲಾಘವ iv ಧ್ಯೇಯ	ವಿಶ್ವ ಸೋದರತೆಯ ಬೆಸುಗೆ ಅಂಶಗಳು	ನಾಲ್ಕು
5. ಯೋಜನೆಯ ಉದ್ದೇಶ	i ಸಚ್ಚಾರಿತ್ರ್ಯ (ನಡತೆ) ii ದೇಹದಾರ್ಢ್ಯ (ಆರೋಗ್ಯ) iii ಕರಕುಶಲತೆ iv ಸೇವೆ/ಪರೋಪಕಾರ ಬುದ್ಧಿ v ದೇವರ ಬಗ್ಗೆ ಕರ್ತವ್ಯ ಪಾಲನೆ	ಇವು ಬಾಲಕರಿಗೆ ದೊರಕುವ ಲಾಭಾಂಶಗಳು	ಐದು
6. ಕಲಿಕೆಯ ಕ್ಷೇತ್ರಗಳು	i ಆರೋಗ್ಯ ii ಜೀವನ(ಮಾನವೀಯ) ಮೌಲ್ಯಗಳು iii ಸಾಹಸಮಯ ಜೀವನ iv ಸಂಸ್ಕೃತಿಯ ಅರಿವು v ಸಮಾಜಕಾರ್ಯ ತತ್ಪರತೆ vi ನಿಯಮ ಪಾಲನೆ	ಬಾಲಕರು ಕಲಿಯುವ ಕ್ಷೇತ್ರಗಳು	ಆರು
7. ವಿಶಿಷ್ಟವಾದ ವಿಧಾನಗಳು	i ನಿಯಮ, ಪ್ರತಿಜ್ಞೆಗಳ ಸ್ವಪ್ರೇರಿತ ಪಾಲನೆ ii ಮಾಡುತ್ತ ಕಲಿಯುವುದು iii ಸಣ್ಣ ಗುಂಪುಗಳಲ್ಲಿ ಕಲಿಕೆ iv ಸ್ವಪ್ರೇರಿತ ಜವಾಬ್ದಾರಿ ನಿರ್ವಹಣೆ v ಆಟಗಳ ಮೂಲಕ ಕಲಿಕೆ vi ಸ್ಫೂರ್ತಿದಾಯಕ, ಪ್ರಗತಿಪರ, ಸ್ಪರ್ಧಾತ್ಮಕ ಪದಕ ಪದ್ಧತಿ vii ಹೊರಾಂಗಣ ಶಿಕ್ಷಣ (ಪ್ರಕೃತಿಯ ಸಾನ್ನಿಧ್ಯದಲ್ಲಿ)	ಸ್ಕೌಟ್ ವಿಧಾನಗಳು	ಏಳು
8. ಸ್ಕೌಟಿಂಗ್ ನ ಉದ್ದೇಶ ಸಾಧನೆಗೆ ಸಂಪನ್ಮೂಲಗಳು	i ಪ್ರೇರಣೆ, ದೈವಬಲ		

	ii ತಾಯಿ, ತಂದೆಯರಲ್ಲಿ ಮಕ್ಕಳ ಏಳಿಗೆಯ ಬಗ್ಗೆ ಅಭಿಲಾಷೆ iii ಮಕ್ಕಳಲ್ಲಿ ಉನ್ನತ ಸಾಧನೆಯ ಹಂಬಲ, ಉತ್ಸಾಹ, ಪ್ರಯತ್ನ iv ಸ್ಕೌಟರುಗಳಲ್ಲಿ ಮಕ್ಕಳ ಏಳಿಗೆಯ ಬಗ್ಗೆ ಹಂಬಲ, v ಕಾರ್ಯಕ್ರಮ ನಿರ್ವಹಣೆಗೆ ಪ್ರಾಕೃತಿಕ, ಇತರ ಕ್ಷೇತ್ರಗಳು vi ಅವಶ್ಯಕ ಜ್ಞಾನ ಸಂಪನ್ನತೆಗೆ ಪುಸ್ತಕಗಳು, ಅನುಭವೀ ವ್ಯಕ್ತಿಗಳು vii ಸಾರ್ವಜನಿಕರು, ಸರಕಾರ (ಆರ್ಥಿಕ, ನೈತಿಕ ಬೆಂಬಲ, ಸಹಕಾರ, ಪ್ರೋತ್ಸಾಹ) viii ಕಾರ್ಯ ಚಟುವಟಿಕೆಗಳು ಪ್ರಕಾಶಮಾನವಾಗಲು ಮಾಧ್ಯಮ	ಸಂಪನ್ಮೂಲ ಗಳು	ಎಂಟು
9. ಸ್ಕೌಟ್ ನಿಯಮದಲ್ಲಿ ನಿಹಿತವಾಗಿರುವ ಅಂಶಗಳು	i ಪ್ರಾಮಾಣಿಕತೆ ii ನಿಷ್ಠೆ iii ಮೈತ್ರಿ ಮತ್ತು ಸೌಹಾರ್ದತೆ iv ವಿನಯಶೀಲತೆ v ಪ್ರಾಣಿ ಸ್ನೇಹ, ನಿಸರ್ಗ ಪ್ರೇಮ vi ಶಿಸ್ತು, ಸಾರ್ವಜನಿಕ ಸಂಪತ್ತು ರಕ್ಷಣೆ vii ಧೈರ್ಯ viii ಮಿತವ್ಯಯತೆ ix ಕಾಯಾ ವಾಚಾ ಮನಸಾ ಪರಿಶುದ್ಧತೆ	ನಿಯಮ ನಿಹಿತ ಮಾನವ ಮೌಲ್ಯ ಸಂಪನ್ನ ಅಂಶಗಳು	ಒಂಭತ್ತು
10. ಸ್ಕೌಟಿಂಗ್‌ನ ವಿಶೇಷತೆಯನ್ನು ಸಾರುವ ಅಂಶಗಳು	i ದೇವರಲ್ಲಿ ನಂಬಿಕೆ ii ದೇಶಪ್ರೇಮ, ನಿಷ್ಠೆ iii ಸ್ವಪ್ರೇರಿತ ಸದಸ್ಯತ್ವ iv ವಿಶ್ವ ಭ್ರಾತೃತ್ವ v ಹೊರಾಂಗಣ ಕಾರ್ಯಕ್ರಮ ಮತ್ತು ಪದಕ ಪದ್ಧತಿ vi ಪೆಟ್ರೋಲ್ ಪದ್ಧತಿ		

vii ನಿಯಮ ಪ್ರತಿಜ್ಞೆಗಳಿಗೆ ಬದ್ಧತೆ ಆಚರಣೆ (ಸ್ವಪ್ರೇರಿತ)	ವಿಶೇಷತೆಯನ್ನು ಸಾರುವ ಅಂಶಗಳು	
viii ಸ್ವತಃ ಮಾಡಿ ಕಲಿಯುವುದು, ಸ್ವಾವಲಂಬನೆ, ಸ್ವಶಿಕ್ಷಣ	ಇವನ್ನು ನೆಲಗಟ್ಟು	ಹತ್ತು
ix ಪರೋಪಕಾರ, ಸೇವೆ	ಎನ್ನುತ್ತಾರೆ	
x ಪಕ್ಷ / ರಾಜಕೀಯದಿಂದ ದೂರವಿರುವುದು.		

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮೂಲಭೂತ ಅಂಶಗಳು

ಅ. ನಿರೂಪಣೆ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ಸ್ವಪ್ರೇರಿತ ಸದಸ್ಯತ್ವವುಳ್ಳ, ರಾಜಕೀಯ ವಲ್ಲದ, ಯುವಜನರ ಶೈಕ್ಷಣಿಕ ಸಂಸ್ಥೆಯಾಗಿದೆ. ಇದು ದೇಶ, ಜನಾಂಗ ಅಥವಾ ಧರ್ಮಗಳ ಭೇದಭಾವವಿಲ್ಲದ, ಎಲ್ಲರಿಗೂ ಮುಕ್ತವಾದ ಸಂಸ್ಥೆಯಾಗಿದೆ. ಮತ್ತು 1907 ರಲ್ಲಿ ಸಂಸ್ಥಾಪಕ ಲಾರ್ಡ್ ಬೇಡನ್ ಪೊವೆಲ್‌ರವರು ಪರಿಕಲ್ಪನೆ ಮಾಡಿದ ಉದ್ದೇಶ, ತತ್ತ್ವಗಳು ಮತ್ತು ವಿಧಾನಗಳಿಗೆ ಅನುಗುಣವಾಗಿದೆ.

ಆ. ಉದ್ದೇಶ

ದೈಹಿಕವಾಗಿಯೂ, ಬೌದ್ಧಿಕವಾಗಿಯೂ, ಸಾಮಾಜಿಕವಾಗಿಯೂ, ಆಧ್ಯಾತ್ಮಿಕವಾಗಿಯೂ, ಯುವಜನರು ತಮ್ಮ ನಿಹಿತ ಪ್ರತಿಭೆಗಳು ಸಂಪೂರ್ಣವಾಗಿ ವಿಕಾಸ ಹೊಂದುವಂತೆ ಸಾಧಿಸಲು ಸಹಾಯವಾಗುವುದು ಹಾಗೂ ಅವರು ವೈಯಕ್ತಿಕವಾಗಿ, ಜವಾಬ್ದಾರಿಯುತ ಪೌರರಾಗಿ, ಸ್ಥಳೀಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಮುದಾಯದ ಸದಸ್ಯರಾಗಿ ಬಾಳುವಂತೆ ಸಹಾಯ ಮಾಡುವುದು.

ಸ್ಕೌಟಿಂಗ್‌ನ ಮೂಲತತ್ತ್ವಗಳು :

1. ದೇವರಿಗೆ ಕರ್ತವ್ಯ: ಆಧ್ಯಾತ್ಮಿಕ ತತ್ತ್ವಗಳ ಆಚರಣೆ, ಯಾವ ಧರ್ಮವನ್ನು ಪಾಲಿಸಲು ಸಂಪ್ರದಾಯ ಬದ್ಧರಾಗಿರುವರೋ, ಆ ಧರ್ಮದಲ್ಲಿ ನಿರೂಪಿಸಿರುವ ಆಧ್ಯಾತ್ಮಿಕ ತತ್ತ್ವಗಳ ಬಗ್ಗೆ ನಿಷ್ಠೆಯಿಂದಿರಬೇಕು. ತದನುಸಾರವಾಗಿ ಒದಗಿಬರುವ ಕರ್ತವ್ಯಗಳನ್ನು ಒಪ್ಪಿಕೊಳ್ಳಬೇಕು; ಆಚರಿಸಬೇಕು.

2. ಇತರರಿಗೆ ಕರ್ತವ್ಯ: ತನ್ನ ದೇಶದ ಬಗ್ಗೆ ನಿಷ್ಠೆಯಿಂದಿರಬೇಕು. ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಸ್ತರಗಳಲ್ಲಿ ಶಾಂತಿ ಸೌಹಾರ್ದತೆ ಮತ್ತು ಸಹಕಾರಗಳನ್ನು ರೂಢಿಸಿಕೊಳ್ಳಬೇಕು.

ಸಮಾಜದ ಪ್ರತಿ ವ್ಯಕ್ತಿಯ ಘನತೆ ಗೌರವಗಳಿಗೂ, ಪ್ರಾಕೃತಿಕ ವಿಶ್ವದ ಸಮಗ್ರತೆಗೂ ಮಾನ್ಯತೆ ನೀಡಿ, ಸಮಾಜದ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು.

3. ಸ್ವಕರ್ತವ್ಯ : ತಾನಾಗಿ ಶ್ರಮಿಸಿ ಜೀವನದಲ್ಲಿ ಮುಂದುವರೆಯುವ ಬಗ್ಗೆ ಜವಾಬ್ದಾರಿಯುತವಾಗಿ ಮುಂದುವರೆಯಬೇಕು.

ಈ ಮೂರು ತತ್ತ್ವಗಳು ಒಂದಕ್ಕೊಂದು ಪೂರಕವಾದವುಗಳು. ದೇವರಿಗೆ ಕರ್ತವ್ಯ ಎಂದೊಡನೆ ಎರಡು ಅಂಶಗಳು ಸ್ಪಷ್ಟವಾಗುತ್ತದೆ. 1. ದೇವರಲ್ಲಿ ಅಚಲ ವಿಶ್ವಾಸ. 2) ನಾವು ನಂಬಿದ ದೇವರು ಬಗ್ಗೆ ನಮ್ಮ ಕರ್ತವ್ಯವನ್ನು ಇತರರಿಗೆ ಉಪಕಾರ ಮಾಡುವ ಮೂಲಕ ಸಲ್ಲಿಸುವುದು.

"ನರಸೇವೆಯೇ ನಾರಾಯಣ ಸೇವೆ"; "ಜನಸೇವೆಯೇ ಜನಾರ್ಧನ ಸೇವೆ"; "ದೇಶಸೇವೆಯೇ ಈಶಸೇವೆ" ಎಂಬ ಮಾತುಗಳನ್ನು ಮನನ ಮಾಡಿಕೊಳ್ಳಿ.

ಇತರರಿಗೆ ಸೇವೆ ಎಂದ ಕೂಡಲೇ, ಅದಕ್ಕೆ ಪೂರಕವಾಗಿ ಇರಬೇಕಾದ ಮೂರನೆಯ ಅಂಶ ನಮ್ಮ ಶಕ್ತಿ, ಸಾಮರ್ಥ್ಯಗಳು. ಎಂದರೆ ನಮ್ಮ ದೈಹಿಕ, ಬೌದ್ಧಿಕ, ಮಾನಸಿಕ, ಆರ್ಥಿಕ ಮತ್ತು ಸಾಮಾಜಿಕ ಶಕ್ತಿಗಳನ್ನು ನಮಗೆ ನಾವು ಸಂಪಾದಿಸಿಕೊಳ್ಳಬೇಕು. ಇದು ಸ್ವಕರ್ತವ್ಯ.

ಸ್ವಪ್ರೇರಿತರಾಗಿ, ಸ್ಕೌಟ್ ಪ್ರತಿಜ್ಞೆ ಮತ್ತು ನಿಯಮಗಳಿಗೆ ಬದ್ಧರಾಗಿರುವುದು

ಈ ಅಂಶವು ಸಂಸ್ಥೆಯ ಸದಸ್ಯರು, ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಲೇ ಬೇಕಾದ ಮೌಲ್ಯಗಳ ಬಗ್ಗೆ ಒತ್ತಿ ಹೇಳುತ್ತದೆ. ಇಡೀ ವಿಶ್ವಕ್ಕೆ ನಿಯಮ, ಪ್ರತಿಜ್ಞೆಗಳು ಒಂದೇ ರೀತಿಯಲ್ಲಿರುತ್ತದೆ. ವಿಶ್ವ ಸ್ಕೌಟ್ ಸಂಸ್ಥೆಯಲ್ಲಿ ನೋಂದಿತವಾದ ರಾಷ್ಟ್ರೀಯ ಸಂಸ್ಥೆಗಳು, ತಮ್ಮ ತಮ್ಮ ದೇಶಗಳ ನಾಗರೀಕತೆ, ಸಂಸ್ಕೃತಿ, ಸಂಪ್ರದಾಯ, ಭಾಷೆ ಇವುಗಳ ಹಿನ್ನೆಲೆಯಲ್ಲಿ ನಿಯಮ ಮತ್ತು ಪ್ರತಿಜ್ಞೆಗಳನ್ನು ರೂಪಿಸಿಕೊಂಡು, ವಿಶ್ವ ಸ್ಕೌಟ್ ಸಂಸ್ಥೆ (WOSM) ಯಿಂದ ಅನುಮೋದನೆ ಪಡೆಯುತ್ತಾರೆ. ಈ ರೀತಿಯಲ್ಲಿ ಅನುಮೋದನೆ ಪಡೆದ ನಿಯಮ, ಪ್ರತಿಜ್ಞೆಗಳನ್ನು ಸ್ವಪ್ರೇರಿತರಾಗಿ ಆಚರಿಸಲು ಬದ್ಧರು ಎಂಬುದೊಂದು ಕಟ್ಟುಪಾಡು.

ಈ ರೀತಿಯಲ್ಲಿ ರೂಪಿಸಿ ವೋಸಂನ ಅನುಮೋದನೆ ಪಡೆಯುವ ನಿಯಮ, ಪ್ರತಿಜ್ಞೆಗಳು, ಮೂಲತಃ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪೋವೆಲ್ ರವರು 1907 ರಲ್ಲಿ ರೂಪಿಸಿದ ನಿಯಮ, ಪ್ರತಿಜ್ಞೆಗಳಿಂದ ಸ್ಫೂರ್ತಿಗೊಂಡವುಗಳಾಗಿದ್ದು, ಇಡೀ ವಿಶ್ವದಲ್ಲಿ ಏಕರೀತಿಯವಾಗಿರುತ್ತವೆ.

ಸ್ಕೌಟಿಂಗ್‌ನ ಮೂಲತತ್ತ್ವಗಳಾದ ದೇವರಿಗೆ ಕರ್ತವ್ಯ, ಇತರರಿಗೆ ಕರ್ತವ್ಯ ಮತ್ತು ಸ್ವಕರ್ತವ್ಯ-ಇವುಗಳು, ಸ್ಕೌಟ್ ನಿಯಮ ಮತ್ತು ಪ್ರತಿಜ್ಞೆಯಲ್ಲಿ ನಿಹಿತವಾಗಿವೆ.

ಸ್ಕೌಟ್ ಪ್ರತಿಜ್ಞೆ ಮತ್ತು ನಿಯಮ

ಸ್ಕೌಟ್ ಪ್ರತಿಜ್ಞೆ

'ನಾನು ನನ್ನ ಕೈಲಾದಮಟ್ಟಿಗೆ,
ದೇವರಿಗೆ ಮತ್ತು ನನ್ನ ದೇಶಕ್ಕೆ ನನ್ನ ಕರ್ತವ್ಯವನ್ನು ಮಾಡುತ್ತೇನೆ;
ಇತರರಿಗೆ ಸಹಾಯ ಮಾಡುತ್ತೇನೆ; ಮತ್ತು
ಸ್ಕೌಟ್ ನಿಯಮದಂತೆ ನಡೆಯುತ್ತೇನೆ"

– ಎಂದು ನನ್ನ ಗೌರವಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತೇನೆ.

(ಅಪೇಕ್ಷಿಸುವವರು 'ದೇವರು' ಪದಕ್ಕೆ ಬದಲು 'ಧರ್ಮ' ಪದವನ್ನು ಬಳಸಬಹುದು)

ಸ್ಕೌಟ್ ನಿಯಮ

ಸ್ಕೌಟ್ ನಿಯಮ ಒಂದು. ಅದರಲ್ಲಿ ನಿಹಿತ ಅಂಶಗಳು ಒಂಭತ್ತು.

1. ಸ್ಕೌಟ್ ವಿಶ್ವಾಸಾರ್ಹನು

2. ಸ್ಕೌಟ್ ನಿಷ್ಠಾವಂತನು

3. ಸ್ಕೌಟ್ ಎಲ್ಲರಿಗೂ ಸ್ನೇಹಿತನು ಮತ್ತು ಇತರ ಸ್ಕೌಟುಗಳಿಗೆ ಸಹೋದರನು.

4. ಸ್ಕೌಟ್ ವಿನಯಿ

5. ಸ್ಕೌಟ್ ಪ್ರಾಣಿಮಿತ್ರನು ಮತ್ತು ಪ್ರಕೃತಿ ಪ್ರೇಮಿ.

6. ಸ್ಕೌಟ್ ಶಿಸ್ತುಳ್ಳವನು ಮತ್ತು ಸಾರ್ವಜನಿಕ ಅಸ್ತಿಯನ್ನು ರಕ್ಷಿಸಲು ನೆರವಾಗುವನು.
7. ಸ್ಕೌಟ್ ಧೈರ್ಯಶಾಲಿ
8. ಸ್ಕೌಟ್ ಮಿತವ್ಯಯಿ
9. ಸ್ಕೌಟ್ ಮನಸ್ಸಿನಲ್ಲಿ, ಮಾತಿನಲ್ಲಿ ಮತ್ತು ಕೃತಿಯಲ್ಲಿ ಪರಿಶುದ್ಧನು.

ಮರಿಗಳ ಪ್ರತಿಜ್ಞೆ

(ಮರಿಗಳ ವಿಭಾಗಕ್ಕೆ ಪ್ರತಿಜ್ಞೆ ಮತ್ತು ನಿಯಮಗಳು ಸರಳವಾಗಿ ಈ ರೀತಿ ಇದೆ.)

"ನಾನು ನನ್ನ ಕೈಲಾದಮಟ್ಟಿಗೆ,
ದೇವರಿಗೆ ಮತ್ತು ನನ್ನ ದೇಶಕ್ಕೆ ನನ್ನ ಕರ್ತವ್ಯವನ್ನು ಮಾಡುತ್ತೇನೆ;
ಇತರರಿಗೆ ಸಹಾಯ ಮಾಡುತ್ತೇನೆ;
ಮರಿಗಳ ನಿಯಮದಂತೆ ನಡೆಯುತ್ತೇನೆ ಮತ್ತು
ಪ್ರತಿದಿನವೂ ಒಂದು ಉಪಕಾರ ಮಾಡುತ್ತೇನೆ"

(ಅಪೇಕ್ಷಿಸುವವರು 'ದೇವರು' ಪದಕ್ಕೆ ಬದಲು 'ಧರ್ಮ' ಪದವನ್ನು ಬಳಸಬಹುದು.)

ಮರಿಗಳ ನಿಯಮ

1. ಮರಿಯು ಹಿರಿಯರಿಗೆ ವಿಧೇಯನು
2. ಮರಿಯು ನಿರ್ಮಲನು ಮತ್ತು ವಿನಯಿ.

ಸ್ಕೌಟ್ ಸಂಸ್ಥೆಯ ಸದಸ್ಯರಾದವರು ನಿಯಮ ಮತ್ತು ಪ್ರತಿಜ್ಞೆಗಳನ್ನು ಮನನ ಮಾಡಿಕೊಂಡು ಸ್ವಯಂಪ್ರೇರಿತ ಆಚರಿಸುವವರಾಗಿ, ಪ್ರಗತಿಪರವಾಗಿ ಸ್ವ-ಶಿಕ್ಷಣ (ಆತ್ಮಶಿಕ್ಷಣ-ಸೆಲ್ಫ್ ಎಜ್ಯುಕೇಷನ್) ವನ್ನು ಪಡೆಯುತ್ತಾರೆ.

ಸ್ಕೌಟ್ ವಿಧಾನಗಳು:

1. ಪ್ರತಿಜ್ಞೆ ನಿಯಮ : ಇದರ ಮನನ, ಆಚರಣೆ ಮೊದಲ ವಿಧಾನ, (ಇದನ್ನು ಕೂಲಂಕಷವಾಗಿ ಚರ್ಚಿಸಿ ವಿವರಿಸುವ ಪುಸ್ತಕವನ್ನು ಓದಿಕೊಳ್ಳಿ.)

2. ಮಾಡುತ್ತಾ ಕಲಿಯುವುದು : ಸ್ಕೌಟುಗಳು ಕಲಿಯುವ ಎಲ್ಲಾ ಅಂಶಗಳಲ್ಲಿಯೂ, ಮಾಡಿ ತೋರಿಸಬೇಕು; ಉಪಯೋಗಗಳನ್ನು ತಿಳಿಯುವಂತೆ ಕಾಣಿಸಬೇಕು, ಹೀಗೆ ಎಲ್ಲವನ್ನೂ ಅವರು ಮಾಡಿ, ಕಲಿತು, ಪ್ರದರ್ಶಿಸಬೇಕು. ಎಂದು ಹೇಳುತ್ತದೆ.

3. ಸಣ್ಣ ಗುಂಪುಗಳಲ್ಲಿ ಕಲಿಕೆ : ಸ್ಕೌಟಿಂಗ್ ವಿಶಿಷ್ಟತೆಯೇ "ಪಟಾಲಂ ಪದ್ಧತಿ". 6–8 ಬಾಲಕರು ತಮ್ಮ ಸಣ್ಣ ಗುಂಪಿನಲ್ಲಿ ಪರಸ್ಪರ ಕಲಿಯುವ, ಕಲಿಸುವ ಮೂಲಕ, ಸಹಬಾಳ್ವೆ, ಸಹಕಾರ, ಸ್ವಾವಲಂಬನೆ, ಪರಸ್ಪರ ಸಹಾಯ, ಐಕಮತ್ಯ– ಇವೇ ಮುಂತಾದ ಜೀವನ ಮೌಲ್ಯಗಳನ್ನು ಕಲಿಯುತ್ತಾರೆ.

4. ಸ್ವಪ್ರೇರಿತ ಜವಾಬ್ದಾರಿಯ ನಿರ್ವಹಣೆ: ಪಟಾಲಂಗಳಲ್ಲಿ ಬಾಲಕರು ಜವಾಬ್ದಾರಿಗಳನ್ನು ಸ್ವಪ್ರೇರಿತರಾಗಿ ಹಂಚಿಕೊಂಡು ಕಾರ್ಯನಿರ್ವಹಣೆ ಮಾಡುತ್ತಾರೆ. ಅಂತರ ಪಟಾಲಂ ಸ್ಪರ್ಧೆಗಳು ಅವರ ಜವಾಬ್ದಾರಿ ನಿರ್ವಹಣಾ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ.

5. ಆಟಗಳ ಮೂಲಕ ಕಲಿಕೆ: ಆಟಗಳ ಮೂಲಕ ಬಾಲಕರಲ್ಲಿ 'ಕ್ರೀಡಾಮನೋಭಾವನೆಯ; ತಾವು ಕಲಿಯುವ, ಇತರರಿಗೆ ಕಲಿಸುವ; ಆತ್ಮಸ್ಥೈರ್ಯವನ್ನು ಬೆಳೆಸಿಕೊಂಡು ಪ್ರದರ್ಶಿಸುವ; ಇತರರಿಗೆ ಸಹಾಯ ಮಾಡುವ– (ಉದಾ: ಪ್ರಥಮ ಚಿಕಿತ್ಸೆ) ಆತ್ಮವಿಶ್ವಾಸದಿಂದ ಉತ್ತಮ ರೀತಿಯಲ್ಲಿ ಸಾಧಿಸುವ ಇವೇ ಮುಂತಾದ ಭಾವನಾತ್ಮಕ ಅಂಶಗಳ ಬೆಳವಣಿಗೆ

ಆಗುತ್ತದೆ. ಬುದ್ಧಿಮತ್ತೆಯು ವಿಕಾಸ ಹೊಂದುತ್ತದೆ. ದೇಹಾದಾರ್ಢ್ಯತೆಯು ವೃದ್ಧಿಸುತ್ತದೆ. ಬಾಲಕರು ಲವಲವಿಕೆಯಿಂದ, ನಗುನಗುತ್ತಾ ಓಡಾಡಲು ಸಹಾಯವಾಗುತ್ತದೆ.

6. ಪದಕ ಪದ್ಧತಿ : ಇದು ಸ್ಫೂರ್ತಿದಾಯಕವೂ, ಪ್ರಗತಿಪರವೂ, ಸ್ಪರ್ಧಾತ್ಮಕವೂ ಆಗಿರುತ್ತದೆ. ಪದಕಗಳಲ್ಲಿ "ಪ್ರವೇಶ್" ನಿಂದ "ರಾಷ್ಟ್ರಪತಿ ಪ್ರಶಸ್ತಿ" ವರೆಗಿನ 6 ಹಂತಗಳ ಪ್ರಗತಿಪರ ಪದಕಗಳೂ, ಐಚ್ಛಿಕವಾಗಿ ಪ್ರವೀಣತಾ ಪದಕಗಳೂ ಇವೆ. ಸ್ಕೌಟುಗಳು ತಮ್ಮ ಸಹಜ ಪ್ರವೃತ್ತಿಗಳಿಗೆ ಅನುಸಾರವಾಗಿ ಪದಕಗಳನ್ನು ಗಳಿಸಬಹುದು. ಪ್ರಗತಿಪರಸೋಪಾನ ಗಳನ್ನು ಏರಲು, ಕೆಲವಾರು ಪರೀಕ್ಷಾಂಶಗಳು ಕಡ್ಡಾಯವಾಗಿ ಕಂಡುಬಂದರೂ, ಬಹುತೇಕ ಅಂಶಗಳು ಐಚ್ಛಿಕವಾಗಿಯೇ ಇವೆ. ಪದಕ ಪದ್ಧತಿಯು ಬಾಲಕರಲ್ಲಿ "ಉನ್ನತಮಾರ್ಗ" ವನ್ನನುಸರಿಸಲು ಪ್ರೇರಣೆ ನೀಡಿ ಅವರ ಅಭಿವೃದ್ಧಿಗೆ, ಪ್ರೋತ್ಸಾಹಿಸುತ್ತದೆ. ಇದು ಸ್ಕೌಟಿಂಗ್‌ನ ವೈಶಿಷ್ಟ್ಯಗಳಲ್ಲೊಂದು.

7. ಹೊರಾಂಗಣ ಶಿಕ್ಷಣ : ಸ್ಕೌಟಿಂಗ್‌ನಲ್ಲಿ ಹೊರಾಂಗಣ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಶಿಬಿರವಾಸ, ಚಾರಣ, ಪ್ರಕೃತಿ ಸಂಚಾರ, ಪರ್ವತಾರೋಹಣ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳು ಬಾಲಕರಲ್ಲಿ ಸೌಹಾರ್ದತೆ, ಅವಲೋಕನೆ, ದೇಹದಾರ್ಢ್ಯ ಪಟ್ಟುಹಿಡಿದು ಸಾಧಿಸುವುದು, ಪ್ರಕೃತಿ ವೈವಿಧ್ಯ ಮತ್ತು ಸೃಷ್ಟಿಕರ್ತನ ಚತುರತೆಯ ಅರಿವು, ವಿಶಾಲ ಮನೋಭಾವನೆ ಮುಂತಾದ ಗುಣಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ.

ಸ್ಕೌಟ್ ಧ್ಯೇಯ

"ಸದಾ ಸಿದ್ಧನಾಗಿರು" (Be prepared) ಇದು ಸ್ಕೌಟ್ ಧ್ಯೇಯ. ಎಲ್ಲಾ ತುರ್ತು ರೀತಿಯ ಸಂದರ್ಭಗಳಲ್ಲಿಯೂ ಸ್ಕೌಟುಗಳು ಮಾನಸಿಕವಾಗಿ, ದೈಹಿಕವಾಗಿ, ಸೇವೆ ಮಾಡಲು ಸಿದ್ಧರಾಗಿರಬೇಕೆಂಬುದು ಇದರ ಅರ್ಥ. ಸಂದರ್ಭಾನುಸಾರವಾಗಿ ಸೇವೆಗೆ ಅವಶ್ಯಕವಾದ ತಿಳುವಳಿಕೆ, ಕೌಶಲ್ಯಗಳನ್ನು ಕಲಿತು, ತಿಳಿದು, ಸಂದರ್ಭಾನು ಸಾರವಾಗಿ ಸೇವೆಗೆ ಅವಶ್ಯಕವಾದ ತಿಳುವಳಿಕೆ, ಕೌಶಲ್ಯಗಳನ್ನು ಕಲಿತು, ತಿಳಿದು, ತಯಾರಾಗಿರಬೇಕೆಂಬುದು ಇದರ ಅರ್ಥ. ಇದು ಎಲ್ಲಾ ವಿಭಾಗಗಳಿಗೂ ಅನ್ವಯ ವಾದರೂ ಮರಿಗಳ ವಿಭಾಗಕ್ಕೆ "ನೀವ್ ಸಾಧಿಸಿ" (Do your best) ಎಂದೂ, ರೋವರ್ ವಿಭಾಗಕ್ಕೆ "ಸೇವೆ" (Service) ಎಂದೂ ಧ್ಯೇಯ ವಾಕ್ಯಗಳಿವೆ.

ಸ್ಕೌಟ್ ಸದಸ್ಯತ್ವ ಪದಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಯುಕ್ತ ಸಂಸ್ಥೆಯಾದುದರಿಂದ, ನಮ್ಮ ಪದಕದಲ್ಲಿ ಎರಡೂ ಲಾಂಛನಗಳಿವೆ. ತ್ರಿದಳ ಕಮಲವು ಸ್ಕೌಟ್ ಲಾಂಛನ. ತ್ರಿಭುಜ ಪತ್ರವು. ಗೈಡ್ಸ್ ಲಾಂಛನ. ಗೈಡ್ಸ್ ಲಾಂಛನವನ್ನು ಸ್ಕೌಟ್ ಲಾಂಛನದೊಳಗೆ ಅಳವಡಿಸಲಾಗಿದೆ. ಮಧ್ಯೆ ಭಾರತದ ಲಾಂಛನ ಅಶೋಕಚಕ್ರವಿದೆ. ಹಸಿರು ಒಡಲಿನ ಮೇಲೆ ಮೇಲ್ಕಾಣಿಸಿರುವಂತೆ, ಹಳದಿಯ ಬಣ್ಣದಲ್ಲಿ ಲಾಂಛನಗಳಿವೆ.

ವಿಶ್ವ ಸ್ಕೌಟ್ ಲಾಂಛನವಾದ ತ್ರಿದಳಕಮಲದಲ್ಲಿ ಪಕ್ಕಗಳ ದಳಗಳಲ್ಲಿ ನಕ್ಷತ್ರಗಳೂ, ಮಧ್ಯೆ ದಿಕ್ಸೂಚಿಯ ಮುಳ್ಳೂ ಇರುತ್ತದೆ. ಲಾಂಛನವು ಬಿಳಿಯ ಬಣ್ಣದಲ್ಲಿ ನೇರಳೆ ಒಡಲಿನ ಮೇಲಿರುತ್ತದೆ ವಿಶ್ವ ಗೈಡ್ಸ್ ಪದಕದಲ್ಲಿ ತ್ರಿದಳ ಕಮಲದ ಬದಲು ತ್ರಿಭುಜ ಪತ್ರ (ಮೇಪಲ್ ಮರದ ಎಲೆ) ವಿರುತ್ತದೆ.

ಕಮಲದ ಮೂರು ದಳಗಳು ಪ್ರತಿಜ್ಞೆಯ ಮೂರು ತತ್ತ್ವಗಳನ್ನು ಸದಾ ನೆನಪಿಗೆ ತರುತ್ತದೆ.

ಸ್ಕೌಟ್ ಗುರುತು ಮತ್ತು ವಂದನೆ

ಬಲತೋಳು, ಭೂಮಿಗೆ ಸಮಾನಾಂತರವಾಗಿ ಮೇಲೆತ್ತಿರಬೇಕು. ಇದು ಸ್ಕೌಟ್ ಗುರುತು. ವಂದನೆ ಮಾಡುವಾಗ ಕಿರುಬೆರಳನ್ನು ಹೆಬ್ಬೆರಳು ಒತ್ತಿರಬೇಕು. ಉಳಿದ ಮೂರು ಬೆರಳುಗಳು ಒಂದಕ್ಕೊಂದು ಸೇರಿದಂತೆ ನೇರವಾಗಿರಬೇಕು. (ಚಿತ್ರವನ್ನು ನೋಡಿ), ತೋರು ಬೆರಳ ತುದಿ 45^0ಯಲ್ಲಿದ್ದು, ಬಲ ಹುಬ್ಬು ಹೊರತುದಿಯನ್ನು ತಗುಲಿರಬೇಕು. ಹಿರಿಯರು, ಕಿರಿಯರೆಂಬ ಬೇಧವಿಲ್ಲದೆ, ಯಾರು ಮೊದಲು ಕಂಡರೆ ಅವರು ವಂದಿಸಬೇಕು. ವಂದನೆಯ ಬದಲು, ತೋಳು ಸಮಾನಾಂತರ ವಾಗಿದ್ದು ಮುಂತೋಳು 90^0 ನೇರವಾಗಿದ್ದರೆ ಅದು ಸ್ಕೌಟ್ ಗುರುತು ಎನಿಸುತ್ತದೆ. ಪ್ರತಿಜ್ಞೆ ಮಾಡುವಾಗ ಅಥವಾ ದೂರದಿಂದ ತಿಳಿದವರನ್ನು ಗುರುತಿಸಿದಾಗ ಸ್ಕೌಟ್ ಗುರುತು ಮಾಡಲಾಗುತ್ತದೆ.

ಗಮನಿಸಿ : ಮರಿಗಳು ವಂದಿಸುವಾಗ ಎರಡು ಬೆರಳುಗಳನ್ನು ಮಾತ್ರ ಉಪಯೋಗಿಸುತ್ತಾರೆ.



ಸ್ಕೌಟ್ ಹಸ್ತಲಾಘವ

ಸ್ಕೌಟ್ ಸಂಸ್ಥೆಯ ಎಲ್ಲಾ ಸದಸ್ಯರೂ, ಎಡಗೈನಿಂದ ಹಸ್ತಲಾಘವ ನೀಡುತ್ತಾರೆ. ಇದು ಮೈತ್ರೀ ಭಾವನೆಯ ಸಂಕೇತ.



ಸಂಸ್ಥೆಯ ವಿಭಾಗಗಳು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಸಂಸ್ಥೆ



ವಿ.ಸೂ.: ಇಷ್ಟೇ ಅಲ್ಲದೆ ಅಂಗವಿಕಲತೆ, ಬುದ್ಧಿಮಾಂದ್ಯ ಮುಂತಾದ ನ್ಯೂನತೆಗಳುಳ್ಳವರಿಗಾಗಿ **"ವಿಸ್ತರಿಸಿದ ಸ್ಕೌಟಿಂಗ್ ವಿಭಾಗ"**, ಶಾಲಾ ಪೂರ್ವ ಪುಟಾಣಿ ಮಕ್ಕಳಿಗೆ **"ಬನ್ನಿ" ವಿಭಾಗ** ಇದೆ. ವಿಶೇಷತೆಯ ಹೆಸರೂ ಮತ್ತು ಕೆಲವಾರು ಬದಲೀ ಪರೀಕ್ಷಾಂಶಗಳೂ ಬಿಟ್ಟರೆ ಬಾಲ, ಬಾಲೆಯರು ಮತ್ತು ಹಿರಿಯರು ಮೇಲೆ ತಿಳಿಸಿರುವ ವಿಭಾಗಗಳಲ್ಲಿ ಒಂದಾಗುತ್ತಾರೆ.

ಸ್ಕೌಟ್‌ಗಳ ಸರ್ವಧರ್ಮ ಪ್ರಾರ್ಥನೆ

ಇದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ನವರು ರೂಪಿಸಿರುವ, ಸಮಾಜದಲ್ಲಿ ಸಮರಸ ಜೀವನಕ್ಕೆ ಪೂರಕವಾಗಿರುವ, ಒಂದು ವಿಶೇಷ ಕಾರ್ಯಕ್ರಮವಾಗಿರುತ್ತದೆ. ಇದನ್ನು ಪೂರ್ಣ ವಿವರಣೆಯೊಂದಿಗೆ ಬೇರೆಯದೇ ಕಿರು ಪುಸ್ತಕವಾಗಿ ಪ್ರಕಟಿಸಲಾಗಿದೆ.

ಸ್ಕೌಟುಗಳು, ಆಧ್ಯಾತ್ಮಿಕ ಕ್ಷೇತ್ರದಲ್ಲಿ ವಿಕಾಸ ಹೊಂದಲೂ, ಸಮಾಜದಲ್ಲಿ ಎಲ್ಲರೊಡನೆ ಹೊಂದಿಕೊಂಡು ಸಮರಸ ಜೀವನ ನಡೆಸಲೂ ಈ ಕಾರ್ಯಕ್ರಮವು ನೆರವಾಗುತ್ತದೆ.

ಸಂಸ್ಥೆಯ ವಿಭಾಗಗಳು ಮತ್ತು ವಿಧಾನಗಳು

"ಬನ್ನಿ"ಗಳ ವಿಭಾಗ

ಇದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅತ್ಯಂತ ಕಿರಿಯ ಶಾಖೆ. 'ಬನ್ನಿ'ಗಳು ಅಥವಾ ಪ್ರೀತಿಯ ಮೊಲದ ಮರಿಗಳ ಶಾಖೆಯು, ಸಂಸ್ಥೆಯ ಅತಿಕಿರಿಯ ಮಕ್ಕಳಿಗಾಗಿ–(3 ರಿಂದ 5 ವಯೋಮಿತಿ), ರೂಪಿಸಲ್ಪಟ್ಟಿದೆ. ದಿ॥ ಮು. ವೆಂಕಟಕೃಷ್ಣಪ್ಪ, ಶಿಡ್ಲಘಟ್ಟ, ರವರು ತಮ್ಮ ಕೆನಡಾ ಪ್ರವಾಸ ಕಾಲದಲ್ಲಿ, ಈ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ತಂದು, ಭಾರತದಲ್ಲಿ ಈ ಶಾಖೆಯನ್ನು ತೆರೆಯಲು ಕಾರಣರಾದರು. ಪೂರ್ವ ಪ್ರಾಥಮಿಕ ವಯೋಮಿತಿಯ ಮಕ್ಕಳಿಗಾಗಿ (ಬಾಲಬಾಲೆಯರ ಭೇದವಿಲ್ಲ) ರೂಪಿತವಾಗಿರುವ, ಈ ಶಾಖೆಯಲ್ಲಿ ಅಭಿನಯ, ಆಟ, ಹಾಡು, ಕುಣಿತಗಳಿಗೇ ಪ್ರಾಮುಖ್ಯತೆ; ಉಲಿವು–ನಲಿವುಗಳೇ ಜೀವಾಳ. ದೇಶದ ನಾನಾ ರಾಜ್ಯಗಳಲ್ಲಿ, ಕರ್ನಾಟಕವೂ ಸೇರಿದಂತೆ 'ಬನ್ನಿ' ಘಟಕಗಳಿವೆ.

ಬಾಲಕ, ಬಾಲಿಕೆಯರಿಗೆ ನೀಡುವ ಶಿಕ್ಷಣದ ಮೂಲ ವಿಧಾನಗಳು ಒಂದೇ ಆದರೂ ವಯೋಮಿತಿಗನುಸಾರವಾಗಿ ರೂಪಿಸಿರುವ ವಿಭಾಗಗಳಲ್ಲಿ ಅನುಸರಿಸುವ ವಿಧಾನಗಳಲ್ಲಿ ವ್ಯತ್ಯಾಸವಿದ್ದು ಆಯಾ ವಯಸ್ಸಿನ ಮಾನಸಿಕ ಮತ್ತು ದೈಹಿಕ ಅವಶ್ಯಕತೆಗಳಿಗನುಸಾರವಾಗಿ ರೂಪಿತವಾಗಿರುತ್ತದೆ.

ಈಗ ವಿಧಾನಗಳನ್ನು ವಿಭಾಗೀಯ ದೃಷ್ಟಿಯಿಂದ ಪರಿಶಿಲಿಸೋಣ.

ಮರಿಗಳ ವಿಭಾಗ

– ಷಟ್ಕ ಪದ್ಧತಿ	ಮರಿಗಳನ್ನು ಆರು ಆರು ಬಾಲಕರ ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಆ ಸಣ್ಣ ಗುಂಪೇ ಷಟ್ಕ.
– ಕತೆಗಳನ್ನು	ರಡ್ಯಾರ್ಡ್ ಕಿಪ್ಲಿಂಗ್‌ರವರ ಕಾಡಿನ ಕತೆಗಳು;
ಹೇಳುವುದು	ಈಸೋಪನ ಕತೆಗಳು; ಪಂಚತಂತ್ರ; ನೀತಿಕತೆಗಳು; ಪೌರಾಣಿಕ ಕತೆಗಳು ಇತ್ಯಾದಿ. ಮಕ್ಕಳ ಕಲ್ಪನಾಶಕ್ತಿಯನ್ನು ಹೊಮ್ಮಿಸುವುದು ಮತ್ತು ಮೌಲ್ಯಗಳ ಶಿಕ್ಷಣ ಇದರ ಉದ್ದೇಶ.
– ನಾಟಕ, ಅಭಿನಯ	ಸಣ್ಣ ಸಣ್ಣ ನಾಟಕಗಳು, ಪ್ರಸಂಗಗಳು, ನೃತ್ಯರೂಪಕಗಳು ಇತ್ಯಾದಿ.
– ಆಟಗಳು	ಆಟಗಳು ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗೆ ಅತ್ಯವಶ್ಯಕ.
– ಕಾಯಕದ ಮೂಲಕ ಕಲಿಕೆ (ಮಾಡಿ ಕಲಿಯುವುದು)	ಬಾಲಕರು ಪ್ರಗತಿಪರ ಪದಕಗಳು ಮತ್ತು ಪ್ರವೀಣತಾ ಪದಕಗಳನ್ನು ಸಂಪಾದಿಸಲು ಪ್ರಚೋದನೆ ನೀಡುವುದರ ಮೂಲಕ ಇದನ್ನು ಸಾಧಿಸಲಾಗುತ್ತದೆ.

ಸ್ಕೌಟ್ಸ್ ವಿಭಾಗ

– ಪಟಾಲಂ ಪದ್ಧತಿ	6 ರಿಂದ 8 ಬಾಲಕರನ್ನುಳ್ಳ ಸಣ್ಣ ಸಣ್ಣ ಗುಂಪುಗಳನ್ನು ಪಟಾಲಂ (ಅಷ್ಟಕ) ಎನ್ನುತ್ತೇವೆ. ಈ ಗುಂಪುಗಳಲ್ಲಿ ಅವರದೇ ನಾಯಕತ್ವ, ಕಲಿಯುವುದಕ್ಕಾಗಿ ಅವರವರಲ್ಲಿಯೇ ಸಾಧನೆ. ಸ್ಕೌಟ್ ಮಾಸ್ಟರು ಅವರಿಗೆ ಮಾರ್ಗದರ್ಶಿ ಮಾತ್ರ.
– ಕಾಯಕದ ಮೂಲಕ ಕಲಿಕೆ	ಬಾಲಕರು ಪ್ರಗತಿಪರ ಹಾಗೂ ಪ್ರವೀಣತಾ ಪದಕಗಳಿಗೆ ಸಂಬಂಧಪಟ್ಟ ವಿಷಯಗಳು, ಕೌಶಲಗಳು ಇವುಗಳನ್ನು ಕ್ರಿಯಾಶೀಲವಾಗಿ ಕಲಿಯುತ್ತಾರೆ.

– ಜವಾಬ್ದಾರಿಗಳ ನಿರ್ವಹಣೆ	ಬಾಲಕರು ತಮ್ಮ ಪಟಾಲಂಗಳು ಹಾಗೂ ದಳದ ಗೌರವ, ಪ್ರತಿಷ್ಠೆಗಳನ್ನು ಕಾಪಾಡಲು, ಜವಾಬ್ದಾರಿಗಳನ್ನು ತಮ್ಮ ತಮ್ಮಲ್ಲಿ ಹಂಚಿಕೊಂಡು, ಹೊಣೆಗಾರಿಕೆ ಯಿಂದ ನಡೆದುಕೊಳ್ಳುತ್ತಾರೆ. ಹಾಗಾಗಿ ಅದು ಸ್ವಪ್ರೇರಿತ ವೆನಿಸುವ ಜವಾಬ್ದಾರಿ ನಿರ್ವಹಣೆ ಆಗುತ್ತದೆ.
– ಸಮಾಜದ ಒಳತಿಗಾಗಿ ಕಲಿಕೆಯ ಉಪಯೋಗ	ತಾವು ಕಲಿತ ವಿಷಯಗಳನ್ನೂ, ಕೌಶಲಗಳನ್ನೂ ಸಮಾಜದ ಒಳಿತಿಗಾಗಿ ಉಪಯೋಗಿಸಲು ಅವಕಾಶ ಗಳನ್ನು ನೀಡಲಾಗುತ್ತದೆ.

ರೋವರ್ ವಿಭಾಗ

– ಸ್ವ ಶಿಕ್ಷಣ	ತಮ್ಮ ತಮ್ಮ ಅಭಿರುಚಿಗಳನ್ನನುಸರಿಸಿ, ವಿಷಯಗಳನ್ನು ವಿಶ್ಲೇಷಿಸಿ, ಗ್ರಹಿಸಿ, ಅವಶ್ಯಕ ಕೌಶಲಗಳನ್ನು ಕಲಿಯು ತ್ತಾರೆ. ಪರಸ್ಪರ ಚರ್ಚಿಸಿ. ಮನನ ಮಾಡಿಕೊಳ್ಳುತ್ತಾರೆ.
– ಒಡನಾಟದ ಕೆಲಸ	ಒಬ್ಬರಿಗೊಬ್ಬರು ಹೊಂದಿಕೊಂಡು, ಜೊತೆಗೂಡಿ ಕೆಲಸಗಳನ್ನು ಮಾಡುತ್ತಾರೆ. ಯಾವುದೇ ರೀತಿಯ ಭೇದಭಾವವಿಲ್ಲದೆ ಸಾಗುತ್ತಾರೆ. ಮುನ್ನಡೆಯುತ್ತಾರೆ.
– ಸಾಮಾಜಿಕ ಶಿಕ್ಷಣ	ತಂಡದ ಎಲ್ಲರೂ ಒಟ್ಟುಸೇರಿ, ತಾವು ಕಲಿತ ಮತ್ತು ಪ್ರಸ್ತುತ ವಿಷಯಗಳ ವಿನಿಮಯ ಮಾಡಿಕೊಂಡು ಪರಸ್ಪರ ಅರಿವು ಮೂಡಿಸಿಕೊಂಡು, ಶಿಕ್ಷಣ ಪಡೆದವ ರಾಗುತ್ತಾರೆ.
– ಜವಾಬ್ದಾರಿಗಳ ಹಂಚಿಕೆ	ಸ್ಕೌಟುಗಳಂತೆಯೇ ರೋವರ್‌ಗಳೂ ಸಹ, ಆದರೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಜವಾಬ್ದಾರಿಗಳನ್ನು ಹಂಚಿಕೊಂಡು, ಹೊಣೆಗಾರಿಕೆಯಿಂದ ವರ್ತಿಸುತ್ತಾರೆ.
– ಸಮಾಜದ ಒಳಿತಿಗಾಗಿ ಕೌಶಲಗಳ ಉಪಯೋಗ	ತಾವೇ ಹೆಚ್ಚಿಸಿಕೊಂಡ ಜ್ಞಾನಸಂಪತ್ತು ಮತ್ತು ಕೌಶಲ ಗಳನ್ನು ಸಮಾಜದ ಒಳಿತಿಗಾಗಿ ವಿಸ್ತೃತ ರೀತಿಯಲ್ಲಿ ಒದಗಿಬರುವಂತೆ, ತಾವೇ ಯೋಜನೆಗಳನ್ನು ತಯಾರಿಸಿ ಕಾರ್ಯಗತ ಮಾಡುತ್ತಾರೆ. ಉದಾ: ಏಡ್ಸ್ ಜಾಗೃತಿ ಕಾರ್ಯಕ್ರಮ, ಪಾಕೀಜುಪದ್ಧತಿ ಇತ್ಯಾದಿ.

ಮರಿಗಳಾಗಿ ಕಲಿತು, ಸ್ಕೌಟ್‌ಗಳಾಗಿ ಹಿರಿಯರ ಮಾರ್ಗದರ್ಶನದಲ್ಲಿ ಕಲಿತಿದ್ದನ್ನು ಉಪಯೋಗಿಸಲು ಸಮರ್ಥರಾಗಿ, ರೋವರ್‌ಗಳಾದಾಗ ಕಲಿತದ್ದೆಲ್ಲ ವನ್ನೂ ಜೀವನದಲ್ಲಿ ರೂಢಿಸಿಕೊಂಡು ಸಮಾಜದ ಉಪಯೋಗಕ್ಕಾಗಿ ತಮ್ಮ ತಿಳುವಳಿಕೆ, ಸಾಮರ್ಥ್ಯಗಳನ್ನು ಉಪಯೋಗಿಸಿಕೊಳ್ಳುತ್ತಾರೆ.

ಮರಿಯಾಗಲೀ, ಸ್ಕೌಟ್ ಆಗಲೀ, ರೋವರ್ ಆಗಲೀ ಎಲ್ಲಾ ಚಟುವಟಿಕೆ ಗಳಲ್ಲಿಯೂ ಕ್ರಿಯಾಶೀಲವಾಗಿ ಭಾಗವಹಿಸುತ್ತಾರೆ. "ಮಾಡುವುದನ್ನು ಉತ್ತಮ ರೀತಿಯಲ್ಲಿ ಮಾಡಿ ಸಾಧಿಸಬೇಕು" ಎಂಬುದು ಅವರ ಗುರಿ. ಹಾಗಾಗಿ ಆಯಾ ವಿಭಾಗಗಳ ಧ್ಯೇಯವಾಕ್ಯಗಳು ಹೀಗಿವೆ;

1. ಮರಿಗಳು

   ಶಿವ್ ಸಾಧಿಸಿ. (Do Your Best)

2. ಸ್ಕೌಟ್‌ಗಳು

   ಸಿದ್ಧನಾಗಿರು (Be Prepared)

3. ರೋವರ್‌ಗಳು

   ಸೇವೆ (Service)

ಸ್ಕೌಟ್‌ಗಳ ಪ್ರಗತಿಪರ ಯೋಜನೆ

ಬಾಲಕರಿಗೆ ಶಿಕ್ಷಣ ನೀಡುವುದಕ್ಕಾಗಿ ಸ್ಕೌಟ್ ಸಂಸ್ಥೆಯಲ್ಲಿ ಬಳಸುವ ವಿಶಿಷ್ಟ ರೀತಿಯ ವಿಧಾನಗಳನ್ನು ಈ ಮುಂಚೆ ತಿಳಿಸಲಾಯಿತು. ಆ ವಿಧಾನಗಳಲ್ಲಿ "ಸ್ಫೂರ್ತಿದಾಯಕ ಹಾಗೂ ಪ್ರಗತಿಪರವಾದ ಕಾರ್ಯಕ್ರಮ"ಗಳನ್ನು ಸ್ಕೌಟಿಂಗ್‌ನಲ್ಲಿ ಅಳವಡಿಸಿಕೊಂಡು, ಬಾಲಕರು ಇನ್ನೂ ಉತ್ತಮರೆನಿಸಿಕೊಳ್ಳಲು ಸಹಾಯ ಮಾಡುವ ಯೋಜನೆಯೂ ಒಂದು. ಈ ಕಾರ್ಯಕ್ರಮಗಳು ಬಾಲಕರಿಗೆ ಸ್ಫೂರ್ತಿಯನ್ನು ನೀಡುತ್ತವೆ. ಹಂತಹಂತವಾಗಿ ವಿಷಯಗಳನ್ನು ತಿಳಿಯಲು ಸಹಾಯ ಮಾಡುತ್ತವೆ. ಕೌಶಲಗಳನ್ನು ಅಭ್ಯಾಸ ಮಾಡಲು ಪ್ರಚೋದಿಸುತ್ತವೆ. ಇತರರೊಡನೆ ಹೊಂದಿಕೊಂಡು ಕೆಲಸ ಮಾಡಲು ವಿಫುಲವಾದ ಅವಕಾಶಗಳನ್ನು ಒದಗಿಸುತ್ತವೆ. ಈ ರೀತಿಯಲ್ಲಿ ಅವರು ಉತ್ತಮ ಬಾಲಕರಾಗಲು ಕಾರಣವಾಗುತ್ತದೆ.

ಈ ಯೋಜನೆಯಲ್ಲಿ, ಮಕ್ಕಳು ಉತ್ತಮಗೊಳ್ಳಲು, ನಾವು ಅವರಲ್ಲಿ ಆಶಿಸುವ, ಮುಂದೆ ಅವರು ಬೆಳೆದು ದೊಡ್ಡವರಾದಾಗ ಅವರ ಜೀವನದಲ್ಲಿ ಉಪಯೋಗಕ್ಕೆ ಬರುವ 14 ಆದರ್ಶ ಅಂಶಗಳು ಅಥವಾ ಮಾನವೀಯ ಮೌಲ್ಯಗಳನ್ನು ಜೋಡಿಸಲಾಗಿದೆ. ಮರಿಗಳು ಹಿರಿಯರನ್ನು ಅನುಕರಿಸುವುದರ ಮೂಲಕ, ಸ್ಕೌಟುಗಳು ಹಿರಿಯರ ಮಾರ್ಗದರ್ಶನದಲ್ಲಿ ಅನುಷ್ಠಾನಕ್ಕೆ ತರುವುದರ ಮೂಲಕ, ರೋವರ್‌ಗಳು ಪರೋಕ್ಷವಾಗಿ ಹಿರಿಯರ ಸಹಾಯ ಪಡೆದು, ತಾವೇ ಯೋಜನೆಯನ್ನು ತಯಾರಿಸಿ, ಕಾರ್ಯಗತ ಮಾಡುವುದರ ಮೂಲಕ, ಈ ಆದರ್ಶಗಳನ್ನು ಕ್ರಿಯಾತ್ಮಕವಾಗಿ ಕಲಿಯುತ್ತಾರೆ.

ಬಾಲಕರ ವಯಸ್ಸಿಗನುಗುಣವಾದ; ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆಗೆ ಅವಶ್ಯಕವೆನಿಸುವ ಸಾಮಾಜಿಕ ಹಾಗೂ ಆಧ್ಯಾತ್ಮಿಕ ಅಂಶಗಳೂ ಸೇರಿದಂತೆ ಸೂಕ್ತ ವಿಷಯಗಳನ್ನು ಅಳವಡಿಸಿ ಯೋಜನೆಯನ್ನು ತಯಾರಿಸಲಾಗಿದೆ. ಮನೆ ಮತ್ತು ಶಾಲೆಗಳಲ್ಲಿ ದೊರಕದೇ ಇರುವ ಅನೇಕ ಸವಾಲುಗಳನ್ನು, ಈ ಕಾರ್ಯಕ್ರಮ ಯೋಜನೆಯು ಒದಗಿಸುತ್ತದಾದ್ದರಿಂದ ಇದು ಬಾಲಕರಿಗೆ ಆಕರ್ಷಕವಾಗಿರುತ್ತದೆ.

ಈ ರೀತಿಯಲ್ಲಿ ಸಾಕಷ್ಟು ಸವಾಲುಗಳನ್ನೆದುರಿಸುವುದರಿಂದ, ಬಾಲಕರಿಗೆ ಸಾಕಷ್ಟು ಕಲಿಯಲು ಅವಕಾಶಗಳೂ, ಸಾಧಿಸಿದ ತೃಪ್ತಿಯೂ ಸಿಗುತ್ತದೆ. ತಾವು ಇಷ್ಟಪಡುವ ಕಾರ್ಯಕ್ರಮವನ್ನು ಆರಿಸಿಕೊಳ್ಳುವ, ಪರಿಶೋಧಿಸಿ ಕಂಡುಕೊಳ್ಳುವ ಅನುಭವಗಳೂ, ಸಾಹಸಪಟ್ಟು ಸಾಧಿಸಿದ ಆನಂದವೂ ಬಾಲಕರಿಗೆ ಸಿಗುತ್ತದೆ.

ಕ್ರಿಯಾತ್ಮಕವಾಗಿ ಭಾಗವಹಿಸಿ ತಿಳುವಳಿಕೆಯನ್ನು ಪಡೆಯಲು ಅವಕಾಶ ನೀಡುವ ಸ್ಕೌಟಿಂಗನ ಹೊರಾಂಗಣ ಹಾಗೂ ಒಳಾಂಗಣ ಚಟುವಟಿಕೆಗಳು, ಬಾಲಕರ ಸರ್ವಾಂಗೀಣ ಬೆಳವಣಿಗೆಗೆ ಸಹಾಯ ಮಾಡುತ್ತವೆ. ಮುಖ್ಯವಾಗಿ ಅವರ ಸಚ್ಚಾರಿತ್ರ್ಯ (ನಡತೆ) ಮತ್ತು ಉತ್ತಮ ಪೌರತ್ವಕ್ಕೆ ಶಿಕ್ಷಣ ಮಾಧ್ಯಮವಾಗುತ್ತದೆ.

ವಿವಿದ ಹಂತಗಳ ಪ್ರಗತಿಪರ ಪದಕಗಳನ್ನು ಬಾಲಕರ ಶಾಲಾ ಶಿಕ್ಷಣದ ಅವಧಿಗಳಿನುಗುಣವಾಗಿ ಅಳವಡಿಸಿ ಯೋಜಿಸಲಾಗಿದೆ 5ನೆಯ ವಯಸ್ಸಿನಿಂದ 24 ವರ್ಷಗಳು ಕಳೆಯುವವರೆಗೆ ಯುವ ಮಾನವರು (Young Men) ಕಲಿಕೆಯ ಕ್ಷೇತ್ರದಲ್ಲಿರುತ್ತಾರೆ. ಅಲ್ಲಿಂದ ಮುಂದೆ ಸ್ಕೌಟರ್‌ಗಳಾಗಿಯೋ, ಇತರ ಜವಾಬ್ದಾರಿಯುತ ಸ್ಥಾನಗಳನ್ನಲಂಕರಿಸಿಯೋ ಸೇವಾಕ್ಷೇತ್ರಕ್ಕೆ ಕಾಲಿಡುತ್ತಾರೆ.

ಕಲಿಯುತ್ತಾ ತಮ್ಮನ್ನು ತಾವು ಉತ್ತಮಪಡಿಸಿಕೊಳ್ಳುತ್ತಾ ಇರುವುದು ಮಾನವ ಸಹಜವಾದುದು. ನಾವು ಉತ್ತಮಗೊಂಡಂತೆ, ಸಮಾಜಕ್ಕೆ ನಾವು ಇನ್ನೂ ಉತ್ತಮ ತರಹೆಯ ಸೇವೆ ಸಲ್ಲಿಸಲು ಸಾಧ್ಯವಾಗುತ್ತದೆ.

ಈಗ ಬಾಲಕರ ಪ್ರಗತಿಪರ ಯೋಜನೆಯ ವಿವರಗಳನ್ನು ತಿಳಿಯೋಣ :

ಮರಿಗಳ ವಿಭಾಗ

ಬಾಲಕನು 5ನೆಯ ಜನ್ಮದಿನದ ಬಳಿಕ ಹಿಂಡಿಗೆ ಸೇರುತ್ತಾನೆ. ನಿಗದಿತ ಅಂಶಗಳ ಬಗ್ಗೆ 3 ತಿಂಗಳ ಶಿಕ್ಷಣ ಪಡೆದು ಕಬ್ ಮಾಸ್ಟರ್ ಒಪ್ಪಿಗೆಯ ಮೇರೆಗೆ "ಪ್ರವೇಶ್ ಮರಿ" ಆಗುತ್ತಾನೆ. ಪ್ರವೇಶ್ ಮರಿಯು ಕನಿಷ್ಠ 1 ತಿಂಗಳು ಸೇವೆ ಸಲ್ಲಿಸಿ "ಪ್ರಥಮ ಚರಣ್"ಗೆ ಅರ್ಹನಾಗುತ್ತಾನೆ. ಪ್ರಥಮ ಚರಣ್ ಮರಿಯು 2 ಪ್ರವೀಣತಾ ಪದಕಗಳನ್ನು ಸಂಪಾದಿಸಬಹುದು.

ಪ್ರಥಮ ಚರಣ್ ಮರಿಯು ಕನಿಷ್ಠ 3 ತಿಂಗಳು ಸೇವೆ ಸಲ್ಲಿಸಿ "ದ್ವಿತೀಯ ಚರಣ್"ಗೆ ಅರ್ಹನಾಗುತ್ತಾನೆ. ದ್ವಿತೀಯ ಚರಣ್ ಮರಿಯು ಮತ್ತೆ ಎರಡು ಬೇರೆ ಪ್ರವೀಣತಾಪದಕಗಳನ್ನು ಸಂಪಾದಿಸಬಹುದು.

ದ್ವಿತೀಯ ಚರಣ್ ಮರಿಯು ಕನಿಷ್ಠ 6 ತಿಂಗಳು ಸೇವೆ ಸಲ್ಲಿಸಿ "ತೃತೀಯ ಚರಣ್"ಗೆ ಅರ್ಹನಾಗುತ್ತಾನೆ. ತೃತೀಯ ಚರಣ್ ಮರಿಯು ಉಳಿದ ಎಲ್ಲಾ ಪ್ರವೀಣತಾಪದಕಗಳನ್ನೂ ಸಂಪಾದಿಸಬಹುದು.

ತೃತೀಯ ಚರಣ್ ಮರಿಯು ಕನಿಷ್ಠ 9 ತಿಂಗಳು ಸೇವೆ ಸಲ್ಲಿಸಿ "ಚತುರ್ಥ ಚರಣ್"ಗೆ ಅರ್ಹನಾಗುತ್ತಾನೆ. ಮುಂದೆ "ಚಿನ್ನದ ಬಾಣ" ಪಡೆಯಬಹುದು.

ಮರಿಗಳ ವಿಭಾಗದಲ್ಲಿ ಒಟ್ಟು 18 ಪ್ರವೀಣತಾ ಪದಕಗಳಿವೆ.

ಸ್ಕೌಟ್ ವಿಭಾಗ

ಬಾಲಕನು 10ನೇ ಜನ್ಮದಿನದ ಬಳಿಕ, 17 ವರ್ಷ ಪೂರೈಸುವುದರೊಳಗೆ ದಳಕ್ಕೆ ಸ್ಕೌಟಾಗಿ ಸೇರಬಹುದು. ಒಂದು ತಿಂಗಳ ಕಾಲ ಶಿಕ್ಷಣ ಪಡೆದು ಕಾರ್ಯ ನಿರ್ವಹಿಸಿ "ಪ್ರವೇಶ್ ಸ್ಕೌಟ್" ಆಗಬಹುದು. ಪ್ರವೇಶ ಪದಕಕ್ಕೆ 8 ಅಂಶಗಳನ್ನು ತೃಪ್ತಿಕರವಾಗಿ ಪೂರೈಸಬೇಕು.

ಪ್ರವೇಶ್ ಸ್ಕೌಟ್ ಕನಿಷ್ಠ 6 ತಿಂಗಳ ಕಾಲ ಸೇವೆಸಲ್ಲಿಸಿ "ಪ್ರಥಮ ಸೋಪಾನ್" ಪದಕಕ್ಕೆ ಅರ್ಹನಾಗುತ್ತಾನೆ. ಪ್ರಥಮ ಸೋಪಾನ್ ಸ್ಕೌಟ್ ಆಗಲು 14 ಅಂಶಗಳನ್ನು ಯಶಸ್ವಿಯಾಗಿ ಪೂರೈಸಬೇಕು.

ಪ್ರಥಮ ಸೋಪಾನ್ ಸ್ಕೌಟು ಕನಿಷ್ಠ 9 ತಿಂಗಳ ಕಾಲ ಸೇವೆ ಸಲ್ಲಿಸಿ "ದ್ವಿತೀಯ ಸೋಪಾನ್" ಪದಕಕ್ಕೆ ಅರ್ಹನಾಗುತ್ತಾನೆ. ದ್ವಿತೀಯ ಸೋಪಾನ್‌ಗೆ 9 ತಿಂಗಳ ಸೇವೆಯೂ ಸೇರಿದಂತೆ 13 ಪರೀಕ್ಷಾಂಶಗಳಿವೆ. ಅವುಗಳಲ್ಲಿ ಒಂದು ಪ್ರವೀಣತಾ ಪದಕವೂ ಸೇರಿದೆ. ದ್ವಿತೀಯ ಸೋಪಾನ್ ಸ್ಕೌಟ್ ಕನಿಷ್ಠ 9 ತಿಂಗಳ ಸೇವೆ ಸಲ್ಲಿಸಿ "ತೃತೀಯ ಸೋಪಾನ್" ಪದಕಕ್ಕೆ ಅರ್ಹನಾಗುತ್ತಾನೆ. ತೃತೀಯ ಸೋಪಾನ್ ಸ್ಕೌಟ್‌ಗೆ 9 ತಿಂಗಳ ಸೇವೆಯೂ ಸೇರಿದಂತೆ 16 ಪರೀಕ್ಷಾಂಶಗಳಿವೆ. ಅವುಗಳಲ್ಲಿ ಎರಡು/ಮೂರು ಪ್ರವೀಣತಾ ಪದಕಗಳೂ ಇವೆ.

ತೃತೀಯ ಸೋಪಾನ್ ಸ್ಕೌಟ್ ಕನಿಷ್ಠ 6 ತಿಂಗಳ ಕಾಲ ಸೇವೆ ಸಲ್ಲಿಸಿ "ರಾಜ್ಯ ಪುರಸ್ಕಾರ್' ಪದಕವನ್ನು ಪಡೆಯಲು ಅರ್ಹನಾಗುತ್ತಾನೆ. ರಾಜ್ಯ ಪುರಸ್ಕಾರ್ ಪದಕವನ್ನು ಪಡೆಯಬೇಕಾದರೆ ಕನಿಷ್ಠ 13+ ವಯಸ್ಸಾಗಿರಬೇಕು. ರಾಜ್ಯ ಪುರಸ್ಕಾರ್ ಪದಕಕ್ಕೆ ಪರೀಕ್ಷಾಂಶಗಳು ಮೂರೇ ಆದರೂ, ಇಲ್ಲಿನವರೆಗಿನ ಜ್ಞಾನ ಮತ್ತು ಕೌಶಲಗಳ ಪ್ರವೀಣತೆ ಮತ್ತು ನಿಗದಿತ ಮತ್ತು ಐಚ್ಛಿಕ 5 ಪ್ರವೀಣತಾ ಪಟಕಗಳನ್ನು ಪಡೆದಿರಬೇಕು.

ರಾಜ್ಯ ಪುರಸ್ಕಾರ್ ಸ್ಕೌಟ್ ಕನಿಷ್ಠ 1 ವರ್ಷ ಸೇವೆ ಸಲ್ಲಿಸಿ "ರಾಷ್ಟ್ರಪತಿ ಪ್ರಶಸ್ತಿ" ಪದಕಕ್ಕೆ ಅರ್ಹನಾಗುತ್ತಾನೆ. ರಾಷ್ಟ್ರಪತಿ ಪ್ರಶಸ್ತಿ ಪಡೆಯಲು ಕನಿಷ್ಠ 14+ ವಯಸ್ಸಾಗಿರಬೇಕು. ರಾಷ್ಟ್ರಪತಿ ಪ್ರಶಸ್ತಿ ಪದಕಕ್ಕೆ 9 ಪರೀಕ್ಷಾಂಶಗಳಿವೆ. ಇವುಗಳಲ್ಲಿ 3 ಪ್ರವೀಣತಾ ಪದಕಗಳೂ ಸೇರಿವೆ.

ಸ್ಕೌಟ್ ವಿಭಾಗದಲ್ಲಿ ಒಟ್ಟು 96 ಪ್ರವೀಣತಾ ಪದಕಗಳಿವೆ.

ರೋವರ್ ವಿಭಾಗ

ಯುವಕನು 16 + ವಯಸ್ಸಿಗೆ ತಂಡಕ್ಕೆ ಸೇರುತ್ತಾನೆ. ವಿಶೇಷ ಸಂದರ್ಭಗಳಲ್ಲಿ 15 + ಗೂ ಸೇರಬಹುದು. ತಂಡದ ಸಮಿತಿಯು ನಿಗದಿಪಡಿಸಿದಷ್ಟು ಕಾಲ ಶಿಕ್ಷಣ ಪಡೆದು ಪ್ರವೇಶ್ ರೋವರ್ ಆಗುತ್ತಾನೆ.

ಪ್ರವೇಶ್ ರೋವರ್ 1 ವರ್ಷಕಾಲ ಸೇವೆ ಸಲ್ಲಿಸಿ "ಪ್ರವೀಣ್ ರೋವರ್" ಪದಕಕ್ಕೆ ಅರ್ಹನಾಗುತ್ತಾನೆ. ಪ್ರವೀಣ್ ರೋವರ್ 1 ವರ್ಷಕಾಲ ಸೇವೆ ಸಲ್ಲಿಸಿ "ನಿಪುಣ್ ರೋವರ್" ಪದಕಕ್ಕೆ ಅರ್ಹನಾಗುತ್ತಾನೆ. ನಿಪುಣ್ ರೋವರ್ 1 ವರ್ಷ ಕಾಲ ಸೇವೆ ಸಲ್ಲಿಸಿ "ರಾಷ್ಟ್ರಪತಿ ರೋವರ್" ಪ್ರಶಸ್ತಿ ಪದಕಕ್ಕೆ ಅರ್ಹನಾಗುತ್ತಾನೆ.

ರೋವರ್‌ಗಳಾಗಿ, 18 + ಇಂದ 24 ರ ವರೆಗೆ ಮತ್ತೆ ಸೇವಾ ನಿರತ ರೋವರ್ ಆಗಿ 35 ವಯಸ್ಸಿನವರೆಗೆ ಮಾತ್ರ ಮುಂದುವರೆಯಬಹುದು.

ಅಧಿಕೃತ ಸಮವಸ್ತ್ರ ಧಾರಣೆಗೆ ಒತ್ತು ನೀಡದೆ, ರೋವರ್ ಸಾಹಸಿಕ ಕ್ರೀಡೆಯಲ್ಲಿ ಯುವಕರು ಭಾಗವಹಿಸಲು ಅನುಕೂಲಕರವಾದ "ವೆಂಚರ್ ಕ್ಲಬ್" ಕಾರ್ಯಕ್ರಮವಿದೆ. ವಿವರಗಳಿಗೆ ಸಂಸ್ಥೆಯು ಪ್ರಚುರ ಪಡಿಸಿರುವ "ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಯುವಕರು" ಪುಸ್ತಕವನ್ನೋ ಅಥವಾ "ಗುರಿ, ನೀತಿ ನಿಯಮಗಳು ಮತ್ತು ಸಂಘಟನೆ" (ರೋವರ್ ವಿಭಾಗ)ವನ್ನೋ ಪರಾಮರ್ಶಿಸಿ.

ರೋವರ್ ವಿಭಾಗದಲ್ಲಿ ಒಟ್ಟು 15 ಪ್ರವೀಣತಾ ಪದಕಗಳಿವೆ.

ಗಮನಿಸಿ: ಕನ್ನಡದ ಎ.ಪಿ.ಆರ್.ಓ. ಭಾಗ 2 ರಲ್ಲಿ ಈ ಪ್ರಗತಿಪರ ಯೋಜನೆಗೆ ಸಂಬಂಧಪಟ್ಟ ವಿವರಗಳು ಎಂದರೆ, ವಿವಿಧ ಹಂತಗಳು, ಆಯಾ ಹಂತಗಳಲ್ಲಿ ತಿಳಿದಿರಬೇಕಾದ ವಿಷಯಗಳು ಮತ್ತು ಕಲಿತಿರಬೇಕಾದ ಕೌಶಲಗಳು; ಪ್ರತಿಹಂತದಲ್ಲಿ

ಸಂಪಾದಿಸಬೇಕಾದ ಪ್ರವೀಣತಾ ಪದಕಗಳು, ಹಂತದಿಂದ ಹಂತಕ್ಕೆ ಮಧ್ಯಮಕಾಲಾವಧಿ–ಹೀಗೆ ವಿಶದವಾಗಿ, ವಿಭಾಗಗಳಿಗೆ ಬೇರೆ ಬೇರೆಯಾಗಿ ಹೇಳಲಾಗಿದೆ. (ಇಂಗ್ಲೀಷ್‌ನಲ್ಲಿ ಮೂರೂ ವಿಭಾಗಗಳ ನಿಯಮ ಮತ್ತು ವಿವರಗಳು ಒಂದೇ ಪುಸ್ತಕದಲ್ಲಿದೆ. ಕನ್ನಡದಲ್ಲಿ ವಿಭಾಗೀಯವಾಗಿ ಲಭ್ಯವಿದೆ)

ಕರ್ನಾಟಕರಾಜ್ಯದ ರಾಜ್ಯಪಾಲರೂ, ಸಂಸ್ಥೆಯ ಪೋಷಕರೂ ಆಗಿರುವ ಘನತೆವೆತ್ತ ರಾಜ್ಯಪಾಲರು ಮರಿಗಳ ವಿಭಾಗದ "ಚತುರ್ಥ ಚರಣ್ ಪದಕ" ವನ್ನೂ, ಸ್ಕೌಟ್ ವಿಭಾಗದ "ರಾಜ್ಯ ಪುರಸ್ಕಾರ್" ಪದಕವನ್ನೂ, ರೋವರ್ ವಿಭಾಗದ "ನಿಪುಣ್ ಪದಕ"ವನ್ನೂ ರಾಜಭವನದ ಗಾಜಿನ ಮನೆಯಲ್ಲಿ ಒಂದು ವೈಭವೋಪೇತ ಸಮಾರಂಭವನ್ನು ಏರ್ಪಡಿಸಿ ದಯಪಾಲಿಸುತ್ತಾರೆ. ಇದು ನಮ್ಮ ರಾಜ್ಯದ ವಿಶೇಷವಾಗಿದೆ.

ಫೆಬ್ರವರಿ 05 2013ರಲ್ಲಿ ಬೆಂಗಳೂರು ರಾಜಭವನದಲ್ಲಿ ನಡೆದ ಚತುರ್ಥ ಚರಣ್, ಹೀರಕ್ ಪಂಖ್, ರಾಜ್ಯ ಪುರಸ್ಕಾರ ಹಾಗೂ ನಿಪುಣ್ ಪ್ರಶಸ್ತಿ ಪ್ರಧಾನ ಸಮಾರಂಭದ ನೋಟ.

ಲಾರ್ಡ್ ಬೇಡನ್ ಪೊವೆಲ್ ಆಫ್ ಗಿಲ್‌ವೆಲ್
(1857 – 1941)
ಬಾಯ್ ಸ್ಕೌಟ್ ಚಳುವಳಿಯ ಸಂಸ್ಥಾಪಕರು, ವಿಶ್ವಪರಮಪ್ರಧಾನ ಸ್ಕೌಟ್
ಬಿ.ಪಿ. ರವರ ಕಥೆ
22–2–1857 ರಿಂದ 8–1–1941 ರ ವರೆಗೆ

ನೀವು ಸ್ಕೌಟಿಂಗ್‌ನ್ನು ಪೂರ್ಣವಾಗಿ ಅರ್ಥಮಾಡಿಕೊಳ್ಳಬೇಕಾದರೆ, ಬಾಯ್ ಸ್ಕೌಟ್ಸ್ ಚಳುವಳಿಯ ಸಂಸ್ಥಾಪಕರ ಜೀವನದ ಬಗ್ಗೆ ಸ್ವಲ್ಪ ಮಟ್ಟಿಗೆ ತಿಳಿದುಕೊಳ್ಳಲೇ ಬೇಕು. ಇಲ್ಲಿಯುವರೆಗೆ ಜೀವಿಸಿದವರ ಪೈಕಿ ಅವರು ಅತ್ಯಂತ ನೈಜವಾದ 'ಬಾಲಮಾನವ'ರಾಗಿದ್ದರು. ಅವರೇ ಲಾರ್ಡ್ ಬೇಡನ್ ಪೊವೆಲ್ ಆಫ್ ಗಿಲ್‌ವೆಲ್, ಚೀಫ್ ಸ್ಕೌಟ್ ಆಫ್ ದಿ ವರ್ಲ್ಡ್. ಸ್ಕೌಟುಗಳು ಅವರನ್ನು ಪ್ರೀತಿಪೂರ್ವಕವಾಗಿ 'ಬಿ.ಪಿ.' ಎಂದು ಕರೆಯುತ್ತಾರೆ.

ರಾಬರ್ಟ್ ಸ್ಟೀಫನ್‌ಸನ್ ಸ್ಮಿತ್ ಬೇಡನ್ ಪೊವೆಲ್‌ರವರು ಇಂಗ್ಲೆಂಡ್ ದೇಶದ ಲಂಡನ್‌ನಲ್ಲಿ 1857 ರ ಫೆಬ್ರವರಿ 22 ರಂದು ಜನಿಸಿದರು. ಆ ದಿನ ಅಮೇರಿಕನ್ನರು, ತಮ್ಮ ಅಧ್ಯಕ್ಷರಾಗಿದ್ದ ಜಾರ್ಜ್ ವಾಷಿಂಗ್‌ಟನ್‌ರವರ 125ನೆಯ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದರು. 1857 ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಸಂಗ್ರಾಮ ನಡೆದ ಮೊದಲ ವರ್ಷ, ಈ ಶಾಂತಿದೂತರು ಹುಟ್ಟಿದ್ದು, ನಮ್ಮ ಮಟ್ಟಿಗೆ ವಿಶೇಷ. ಅವರ ತಂದೆಯವರಾದ ಹೆಚ್.ಜಿ. ಬೇಡನ್ ಪೊವೆಲ್ ರವರು, ಆಕ್ಸ್‌ಫರ್ಡ್‌ನಲ್ಲಿ ಪ್ರೊಫೆಸರಾಗಿದ್ದರು. ಅವರ ತಾಯಿಯು ಬ್ರಿಟಿಷ್ ಅಡ್ಮಿರಲ್ ಡಬ್ಲ್ಯೂ.ಟಿ. ಸ್ಮಿತ್‌ರವರ ಮಗಳು. ಅವರ ಮುತ್ತಾತನವರಾದ ಜೋಸೆಫ್ ಬ್ರೂಆರ್ ಸ್ಮಿತ್ ರವರು ಅಮೆರಿಕಾದ ನ್ಯೂಜೆರ್ಸಿಗೆ ನೆಲಸು ನಾಡಿಗರಾಗಿ (colonist) ಹೋಗಿದ್ದರು. ಆದರೆ ಅವರು ಇಂಗ್ಲೆಂಡ್‌ಗೆ ವಾಪಸ್ ಬಂದಿದ್ದರು. ಹಾಗೆ ವಾಪಸ್ ಬರುವಾಗ [illegible] ನೌಕೆಯು ಭಂಗವಾಗಿದ್ದಿತು (ship wreck).

ಈ ರೀತಿ ಬೇಡನ್ ಪೊವೆಲ್‌ರವರು ಒಂದು ಕಡೆ ಕ್ರೈಸ್ತಪಾದ್ರಿಗಳ ವಂಶಕ್ಕೆ ಸೇರಿದವರಾದರೆ, ಮತ್ತೊಂದು ಕಡೆ ಹೊಸ ಪ್ರಪಂಚದ ನೆಲಸುನಾಡಿಗರ ಸಾಹಸೀವಂಶಕ್ಕೆ ಸೇರಿದವರು.

ಬಾಲಕ ಬಿ.ಪಿ.

ರಾಬರ್ಟ್ ಇನ್ನೂ 3 ವರ್ಷ ವಯಸ್ಸಾಗಿದ್ದಾಗಲೇ ಅವರ ತಂದೆಯವರು ಕಾಲವಾದರು. ಆಗ ಅವರ ತಾಯಿಯೂ, 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಏಳು ಮಕ್ಕಳೂ ಇದ್ದುವು. ಸಂಸಾರವು ಬಹಳ ಕಷ್ಟಗಳನ್ನು ಎದುರಿಸಬೇಕಾಯಿತು. ಆದರೆ ತಾಯಿಗೆ ಮಕ್ಕಳ ಬಗೆಗಿದ್ದ ಪ್ರೀತಿ ವಾತ್ಸಲ್ಯವೂ, ಮಕ್ಕಳಿಗೆ ತಾಯಿಯ ಬಗೆಗಿದ್ದ ಗೌರವವೂ, ಅವನ್ನು ಮರೆಸಿದುವು. ರಾಬರ್ಟ್ ರವರು, ತಮ್ಮ ನಾಲ್ಕು ಜನ ಸೋದರರೊಡನೆ, ಇಂಗ್ಲೆಂಡ್‌ನ ಅನೇಕ ಭಾಗಗಳಲ್ಲಿ ಹೊರಸಂಚಾರ ಮತ್ತು ಶಿಬಿರವಾಸ ಮಾಡಿ, ಅತ್ಯಂತ ಆಹ್ಲಾದಕರ ಜೀವನವನ್ನು ನಡೆಸಿದರು.

1870 ರಲ್ಲಿ ಬಿ.ಪಿ. ರವರು ಲಂಡನ್ ಚಾರ್ಟರ್ ಹೌಸ್ ಶಾಲೆಗೆ, ವಿದ್ಯಾರ್ಥಿವೇತನದ ಮೇಲೆ ಸೇರಿಕೊಂಡರು. ಅವರು ಓದಿನಲ್ಲಿ ಹೇಳುಕೊಳ್ಳುವಂತಹ ಪ್ರಗತಿಯನ್ನು ಸಾಧಿಸಲಿಲ್ಲವಾದರೂ, ಸದಾಕಾಲ ಉತ್ಸಾಹಭರಿತರಾಗಿಯೂ, ಚಟುವಟಿಕೆಯುಳ್ಳವರಾಗಿಯೂ ಇದ್ದರು. ಶಾಲೆಯ ಒಳಾಂಗಣದಲ್ಲಿ ಏನೇ ನಡೆದರೂ, ಬಿ.ಪಿ. ಅಲ್ಲಿ ಇರಲೇಬೆಕು. ಶಾಲೆಯ "ಪುಟ್ ಬಾಲ್ ಟೀಂ" ನ ಉತ್ತಮ ಗೋಲ್ ಕೀಪರ್ ಎಂದು ಖ್ಯಾತಿಗಳಿಸಿದ್ದರು. ಬಿ.ಪಿ.

ಚಾರ್ಟರ್ ಹೌಸ್ ಶಾಲೆಯ ಬದಿಯ ಅರಣ್ಯದಲ್ಲಿ, ಅವರು ಕಲಿತ ಮರಸು ಬೇಟೆಯ ತಂತ್ರಗಳು ಮುಂದೆ ಇಂಡಿಯಾ ಮತ್ತು ಆಫ್ರಿಕಾಗಳಲ್ಲಿ ಅವರಿಗೆ ಬಹಳ ಉಪಯೋಗಕ್ಕೆ ಬಂದವು.

ಅವರ ನಟನಾಕೌಶಲವು ಜೊತೆಗಾರರೆಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದಿತು. ಯಾವಾಗ ಕರೆದರೂ ಬಂದು ನಟಿಸಿ, ತಮ್ಮ ಅಭಿನಯದಿಂದ ನಗೆಹೊಳೆಯ ಹೊನಲನ್ನೇ ಹರಿಸುತ್ತಿದ್ದರು.

ಸಂಗೀತದಲ್ಲಿಯೂ ಅವರಿಗೆ ಒಲವಿದ್ದಿತು. ಚಿತ್ರಲೇಖನವು ಅವರಿಗೆ ಹುಟ್ಟಿನಿಂದ ಬಂದ ಕೊಡುಗೆ. ಮುಂದೆ ಅವರು ತಮ್ಮ ಲೇಖನಗಳನ್ನು ತಮ್ಮ ಚಿತ್ರಗಳಿಂದಲೇ ಸ್ಪಷ್ಟಪಡಿಸುತ್ತಿದ್ದರು.

ಇಂಡಿಯಾದಲ್ಲಿ ಬಿ.ಪಿ.

19ನೆಯ ವಯಸ್ಸಿನಲ್ಲಿ ಚಾರ್ಟರ್ ಹೌಸ್‌ನಿಂದ ಪದವಿಯನ್ನು ಪಡೆದರು. ಕೂಡಲೇ ಇಂಡಿಯಾದಲ್ಲಿ ಸಬ್ ಲೆಫ್ಟಿನೆಂಟ್ ಹುದ್ದೆಗೆ ಬಂದ ಅವಕಾಶವನ್ನು

ಒಪ್ಪಿಕೊಂಡರು. ಮುಂದೆ ಆ ಅಶ್ವಸೈನ್ಯ ತುಕಡಿಯವರು, ಪ್ರಖ್ಯಾತ ಕ್ರಿಮಿಯಾ ಯುದ್ಧದಲ್ಲಿ, "ಚಾರ್ಜ್ ಆಫ್ ದಿ ಲೈಟ್ ಬ್ರಿಗೇಡ್" ಆಗಿ ಭಾಗವಹಿಸಿದರು.

ಅವರು ಸೈನ್ಯದಲ್ಲಿ 26ನೆಯ ವಯಸ್ಸಿಗೇ ಕ್ಯಾಪ್ಟನ್ ಆದರು. ಕುದುರೆ ಸವಾರಿ ಮಾಡುತ್ತಾ ಈಟಿಯಿಂದ ತಿವಿದು ಕಾಡುಹಂದಿಗಳನ್ನು ಕೊಲ್ಲುವ ಕ್ರೀಡೆಯಲ್ಲಿ (Pig Sticking) ಅವರು ಅತ್ಯಪೇಕ್ಷಣೀಯವಾದ ಪಾರಿತೋಷಕವನ್ನು ಗೆದ್ದುಕೊಂಡರು. ಈ ಕ್ರೀಡೆಯು ಎಷ್ಟು ಅಪಾಯಕರವೆಂದು ಅರ್ಥಮಾಡಿಕೊಳ್ಳಬೇಕಾದರೆ, "ಹುಲಿಯು ನೀರು ಕುಡಿಯುವ ಹಳ್ಳದಲ್ಲಿಯೇ ತಾನೂ ನೀರು ಕುಡಿಯುವ ಪ್ರಾಣಿ ಇದೊಂದೇ" ಎಂದು ಕಾಡುಹಂದಿಯ ಬಗೆಗೆ ಹೇಳುವ ಮಾತನ್ನು ಗಮನಿಸಬೇಕು.

ಇಂಡಿಯಾದಲ್ಲಿ ಬಿ.ಪಿ. ರವರು ಕಾಡುಹಂದಿ ಬೇಟೆಗಾಗಿ ಹೆಸರಾಂತ ಕ್ರೀಡಾ ಪಾರಿತೋಷಕವನ್ನು ಪಡೆದರು. "ಕಾಡುಹಂದಿಯನ್ನು ತಿವಿಯುವುದರಲ್ಲಿ" (Pig Sticking) ಅವರು ಪ್ರಭಾವಶಾಲೀ ವ್ಯಕ್ತಿಯೆಂಬ ಮೆಚ್ಚಿಕೆಯನ್ನು ಪಡೆದಿದ್ದರು.

ಆಫ್ರಿಕಾದಲ್ಲಿ ಯುದ್ಧ ಮಾಡಿದುದು

1887 ರಲ್ಲಿ ಬಿ.ಪಿ. ರವರು ಆಫ್ರಿಕಾಕ್ಕೆ ತೆರಳಿದರು. ಅಲ್ಲಿ ಅವರು ಜೂಲುಗಳ ವಿರುದ್ಧ ಯುದ್ಧ ಮಾಡುವುದನ್ನು ಕಾಣುತ್ತೇವೆ. ಆ ಬಳಿಕ ಅವರು "ಅಷಾಂತಿ"ಯ ಕ್ರೂರ ಬುಡಕಟ್ಟು ಜನಾಂಗದವರೊಡನೆಯೂ, ಅನಾಗರೀಕ ಮೆಟಾಬಿಲಿ ಯೋಧರೊಡನೆಯೂ ಕಾದಾಡಿದರು. ಮೂಲನಿವಾಸಿಗಳು, ಅವರ ಕೆಚ್ಚು, ಸ್ಕೌಟಿಂಗ್ ಕೌಶಲಗಳು ಮತ್ತು ಹೆಜ್ಜೆಯ ಗುರುತುಗಳನ್ನು ಹಿಂಬಾಲಿಸುವ ದಂಗುಬಡಿಸುವಂತಹ ಸಾಮರ್ಥ್ಯ, ಇವುಗಳ ಕಾರಣದಿಂದ ಅವರ ಬಗ್ಗೆ ಎಷ್ಟು ಹೆದರುತ್ತಿದ್ದರೆಂದರೆ, ಅವರನ್ನು "ಇಂಪೀಸ್ಸಾ" (ನಿದ್ದೆಯನ್ನೇ ಮಾಡದ ತೋಳ) ಎಂದು ಕರೆದರು.

ಬೇಡನ್ ಪೊವೆಲ್‌ರವರು ಅನಾಯಾಸವಾಗಿ ಬಡ್ತಿ ಹೊಂದುತ್ತಾ ಹೋದರು. ಅದೆಷ್ಟು ಕ್ರಮಬದ್ಧವಾಗಿತ್ತೆಂದರೆ, ಅವರು ಇದ್ದಕ್ಕಿದ್ದಂತೆ ಪ್ರಖ್ಯಾತರಾಗಿ ಹೋದರು.

1899 ರ ವೇಳೆಗಾಗಲೇ ಬಿ.ಪಿ. ರವರು ಕರ್ನಲ್ ಪದವಿಗೇರಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಗಲಭೆಗಳು ನಡೆಯುತ್ತಲೇ ಇದ್ದುವು. ಟ್ರಾನ್ಸ್‌ವಾಲ್ ಗಣರಾಜ್ಯ ಮತ್ತು ಬ್ರಿಟಿಷ್ ಸರ್ಕಾರಗಳ ನಡುವಣ ಸಂಬಂಧವು ಮುರಿದು ಬೀಳುವುದರಲ್ಲಿತ್ತು. ಬಿ.ಪಿ. ರವರಿಗೆ, "ಮೌಂಟೆಡ್ ರೈಫಲ್"ಗಳ ಎರಡು ಬೆಟಾಲಿಯನ್‌ಗಳನ್ನು ತಯಾರು ಮಾಡಬೇಕೆಂದೂ, ಕೂಡಲೇ ದಕ್ಷಿಣ ಆಫ್ರಿಕಾದ

ಮಧ್ಯೆ ಇರುವ ಮೆಫೆಕಿಂಗ್ ನಗರಕ್ಕೆ ಧಾವಿಸಬೇಕೆಂದೂ ಆದೇಶಪತ್ರ ಬಂದಿತು. ಆ ದಿನಗಳಲ್ಲಿ, "ಯಾರು ಮೆಫೆಕಿಂಗ್ ಅನ್ನು ಅಧೀನದಲ್ಲಿಟ್ಟು ಕೊಳ್ಳುತ್ತಾರೆಯೋ ಅವರು ದಕ್ಷಿಣ ಆಫ್ರಿಕಾವನ್ನು ಆಳುತ್ತಾರೆ." ಎಂಬ ವಾಡಿಕೆಯ ನುಡಿ ಇದ್ದಿತು. ಮುಂದೆ ಅದು ನಿಜವೆಂದು ಸಾಬೀತಾಯಿತು.

ಮೆಫೆಕಿಂಗ್ ದಾಳಿ

ಯುದ್ಧವು ಬಂದಿತು. 1899 ರ ಅಕ್ಟೋಬರ್ 13 ರಿಂದ ಹಿಡಿದು 217 ದಿನಗಳ ಕಾಲ, ಕೆಲವೇ ಸೈನಿಕ ಬಲದಿಂದ, ಸ್ಥಳೀಯ ಬಾಲಕರ ಸಹಾಯದಿಂದ ಅಧಿಕ ಸಂಖ್ಯೆಯ ಶತ್ರುಗಳೊಡನೆ ಹೋರಾಡುತ್ತಾ, 1900 ರ ಮೇ 18 ರಂದು, ಅವರಿಗೆ ಪರಿಹಾರ ರೀತಿಯ ಸಹಾಯ ಬರುವವರೆಗೂ, ಮೆಫೆಕಿಂಗ್, ನಗರವನ್ನು ರಕ್ಷಣೆ ಮಾಡಿದರು.

ಈ ದೀರ್ಘ ಅವಧಿಯಲ್ಲಿ ಗ್ರೇಟ್ ಬ್ರಿಟನ್ ಉಸಿರು ಹಿಡಿದು ಕುಳಿತಿತ್ತು. ಕೊನೆಗೆ 'ಮೆಫೆಕಿಂಗ್ ಬಿಡುಗಡೆಯಾಯಿತು' ಎಂಬ ಸುದ್ದಿ ತಲುಪಿದ್ದೇ ತಡ, ದೇಶಕ್ಕೆ ದೇಶವೇ ಹರ್ಷೋದ್ರೇಕದಿಂದ ಹುಚ್ಚೆದ್ದು ಕುಣಿಯಿತು. ಇಂಗ್ಲಿಷ್ ಶಬ್ದಕೋಶವನ್ನು ನೋಡಿ. ಮೆಫೆಕಿಂಗ್ ಎದುರು ಎರಡು ಪದಗಳನ್ನು ಕಾಣುತ್ತೀರಿ. "ಮೆಫಿಕ್" ಮತ್ತು "ಮೆಫಿಕೇಷನ್" ಈ ಎರಡು ಪದಗಳನ್ನು ಆ ಹುಚ್ಚೆದ್ದು ಕುಣಿದ ದಿನ ಶಬ್ದಕೋಶಕ್ಕೆ ಸೇರಿಸಲಾಯಿತು. ಇದರ ಅರ್ಥ "ಕೋಲಾಹಲದ ರೀತಿಯ ಸಂಭ್ರಮದ ಆಚರಣೆ."

ಬಿ.ಪಿ. ರವರನ್ನೀಗ ಮೇಜರ್ ಜನರಲ್ ಹುದ್ದೆಗೇರಿಸಲಾಯಿತು. ಅವರು ಅವರ ದೇಶದ ಜನರ ದೃಷ್ಟಿಯಲ್ಲಿ "ವೀರಾಧಿವೀರ"ರಾದರು.

ಸ್ಕೌಟಿಂಗ್ ಜನನ

1901 ರಲ್ಲಿ ಅವರು ಬಾಲಕರ ಮತ್ತು ಜನರ "ವೀರಪುರುಷ"ರಾಗಿ ದಕ್ಷಿಣ ಆಫ್ರಿಕಾದಿಂದ ಇಂಗ್ಲೆಂಡಿಗೆ ವಾಪಸ್ಸಾದರು. ಅವರಿಗೆ ಗೌರವದ ಸುರಿಮಳೆ ಆಯಿತು. ತಮ್ಮ ವ್ಯಕ್ತಿಗತ ಜನಪ್ರಿಯತೆಯ ಜೊತೆಗೆ ತಮ್ಮ ಸೈನಿಕರಿಗಾಗಿ ಬರೆದ 'ಏಯ್ಡ್ಸ್ ಟು ಸ್ಕೌಟಿಂಗ್' ಪುಸ್ತಕ ಸಹ ಜನಾದರಣೆ ಹೊಂದಿರುವುದನ್ನು ಕಂಡರು. ಅವರಿಗೆ, ಇದರಿಂದ ಅತಿಶಯ ಆಶ್ಚರ್ಯವುಂಟಾಯಿತು. ಆ ಪುಸ್ತಕವನ್ನು ಬಾಲಕರ ಶಾಲೆಯಲ್ಲಿ ಪಠ್ಯಪುಸ್ತಕವನ್ನಾಗಿ ಉಪಯೋಗಿಸುತ್ತಿರುವುದನ್ನೂ ಗಮನಿಸಿದರು.

ಬಿ.ಪಿ. ರವರು ಇದರಲ್ಲೊಂದು ದೊಡ್ಡ ಸವಾಲನ್ನೇ ಕಂಡುಕೊಂಡರು. ತನ್ನ ದೇಶದ ಬಾಲಕರು ಬಲಶಾಲಿ ಪುರುಷರಾಗಿ ಬೆಳೆಯಲು ಸಹಾಯ ಮಾಡುವ ಅವಕಾಶವಿರುವುದನ್ನು ಮನಗಂಡರು. ಸ್ಕೌಟ್ ಅಭ್ಯಾಸಗಳ ಬಗ್ಗೆ ಹಿರಿಯರಿಗಾಗಿ ಬರೆದ ಪುಸ್ತಕದಿಂದಲೇ ಬಾಲಕರು ಇಷ್ಟು ಪ್ರಭಾವಿತರಾಗಬಹುದಾದರೆ, ಅದು ಅವರಿಗೆ ಸ್ಫೂರ್ತಿದಾಯಕವಾಗಬಹುದಾದರೆ, ಇನ್ನು ಅವರಿಗಾಗಿಯೇ ಒಂದು ಪುಸ್ತಕವನ್ನು ಬರೆದರೆ ಹೇಗೆ? ಎಂದು ಯೋಚಿಸಿದರು. ಇಂಡಿಯಾದಲ್ಲಿನ ಮತ್ತು ಆಫ್ರಿಕಾದಲ್ಲಿನ ಜೂಲುಗಳು ಮತ್ತಿತರ ಅನಾಗರಿಕ ಬುಡಕಟ್ಟು ಜನಾಂಗದವರ ಜೊತೆಯಲ್ಲಿನ ತಮ್ಮ ಅನುಭವಗಳನ್ನು ಅಳವಡಿಸಿಕೊಂಡು ಕಾರ್ಯಪ್ರವೃತ್ತರಾದರು. ಅದಕ್ಕಾಗಿಯೇ ವಿಶೇಷವಾಗಿ, ಪ್ರಾಚೀನ ಕಾಲದಿಂದ ಇಂದಿನ ಕಾಲದವರೆಗಿನ– ಸ್ಪಾರ್ಟನ್ ಬಾಲಕರು, ಪ್ರಾಚೀನ ಬ್ರಿಟನ್, ರೆಡ್ ಇಂಡಿಯನ್ನರು, ಪ್ರಾಚೀನ ಭಾರತ–ಹೀಗೆ ವಿವಿಧ ಸಂಸ್ಕೃತಿಗಳ ಬಾಲಕರ ಶಿಕ್ಷಣಕ್ಕೆ ಸಂಬಂಧಿಸಿದ ದೃಷ್ಟಿಯುಳ್ಳ ಅನೇಕ ಪುಸ್ತಕಗಳನ್ನು ಓದಿದರು. ಪುಸ್ತಕ ಭಂಡಾರವನ್ನೇ ಎಂದರೂ ಸರಿಹೋದೀತು.

ನಿಧಾನವಾಗಿ, ಜಾಗರೂಕತೆಯಿಂದ ಬಿ.ಪಿ. ರವರು "ಸ್ಕೌಟಿಂಗ್"ಗೆ ರೂಪು ಕೊಟ್ಟು ಬೆಳೆಸಿದರು. ಅದು ಕ್ರಿಯಾಶೀಲವೇ? ಅಲ್ಲವೆ? ಎಂಬುದನ್ನು ಖಚಿತ ಪಡಿಸಿಕೊಳ್ಳುವ ಉದ್ದೇಶದಿಂದ 1907 ರ ಬೇಸಗೆಯಲ್ಲಿ, ಇಂಗ್ಲಿಷ್ ಕಡಲ್ಗಾಲುವೆಯ ಬದಿಯಲ್ಲಿರುವ "ಬ್ರೌನ್ ಸೀ" ದ್ವೀಪದಲ್ಲಿ ಇಪ್ಪತ್ತು ಬಾಲಕರ ತಂಡವನ್ನು ಕರೆದೊಯ್ದು, ಪ್ರಪಂಚವು ಹಿಂದೆಂದೂ ಕಾಣದ ಮೊದಲನೆಯ ಬಾಯ್ ಸ್ಕೌಟ್ ಶಿಬಿರವನ್ನು ನಡೆಸಿದರು. ಶಿಬಿರವು ಅತಿಶಯವಾಗಿ ಯಶಸ್ವಿ ಆಯಿತು.

ಸ್ಕೌಟಿಂಗ್ ಫಾರ್ ಬಾಯ್ಸ್

ಆ ಬಳಿಕ 1908 ರ ಮೊದಲ ತಿಂಗಳುಗಳಲ್ಲಿ ಪಕ್ಷಕೊಮ್ಮೆ ಪ್ರಕಟವಾದ ಆರು ಭಾಗಗಳಲ್ಲಿ, ತಾವೇ ಚಿತ್ರಿಸಿದ, ಚಿತ್ರಗಳಿಂದ ಸ್ಪಷ್ಟನೆ ನೀಡಿ, ತಮ್ಮ ಶಿಕ್ಷಣದ ಕೈಪಿಡಿ "ಸ್ಕೌಟಿಂಗ್ ಫಾರ್ ಬಾಯ್ಸ್" ಅನ್ನು ಹೊರತಂದರು. ಆ ಸಮಯದಲ್ಲಿ ಅವರು, ಈ ಪುಸ್ತಕವು ಇಡೀ ವಿಶ್ವದ ಬಾಲಪ್ರಪಂಚವನ್ನೇ ತನ್ನ ಪ್ರಭಾವಕ್ಕೊಳಪಡಿಸಿ ಕೊಳ್ಳುವುದೆಂದಾಗಲೀ, ಸ್ಕೌಟ್ ಚಳುವಳಿಯ ಚಾಲನೆ ಆಗುವುದೆಂದಾಗಲೀ ಕನಸಿ ನಲ್ಲಿಯೂ ಎಣಿಸಿರಲಿಲ್ಲ.

"ಸ್ಕೌಟಿಂಗ್ ಫಾರ್ ಬಾಯ್ಸ್" ಇನ್ನೂ ವೃತ್ತಪತ್ರಿಕೆಗಳ ಮಾರಾಟ ಮಳಿಗೆ (News Stands) ಗಳನ್ನು ಮುಟ್ಟುತ್ತಿದ್ದಂತೆಯೇ ಸ್ಕೌಟ್ ಪೆಟ್ರೋಲುಗಳೂ, ದಳಗಳೂ, ಇಂಗ್ಲೆಂಡ್‌ನಲ್ಲಿ ಮಾತ್ರವಲ್ಲ ಇಡೀ ವಿಶ್ವದ ಅನೇಕ ದೇಶಗಳಲ್ಲಿ ತಾವಾಗಿ ಪ್ರಾರಂಭವಾಗಿ ಬಿಟ್ಟುವು.

ವಿ.ಸೂ. ಭಾರತದ ಮೊದಲ ಸ್ಕೌಟ್ ದಳವು, ಕರ್ನಾಟಕದ ರಾಜಧಾನಿಯಾದ ಬೆಂಗಳೂರಿನಲ್ಲಿ 1909ರಲ್ಲಿ ಪ್ರಾರಂಭವಾಯಿತು.

1923 ರಲ್ಲಿ ಬಿ.ಪಿ. ರವರು ಭಾರತದ ಬಾಲಕರಿಗಾಗಿಯೇ "ಸ್ಕೌಟಿಂಗ್ ಫಾರ್ ಬಾಯ್ಸ್ ಇನ್ ಇಂಡಿಯಾ" ಪುಸ್ತಕವನ್ನು ಅಳವಡಿಸಿ, ಬರೆದು ಪ್ರಕಟಿಸಿದರು.

ಬಿ.ಪಿ. ರವರ ಎರಡನೆಯ ಜೀವನ

ಚಳುವಳಿಯು ಬೆಳೆಯುತ್ತಾ ಹೋಯಿತು. 1910 ರ ವೇಳೆಗೆ, ಅದರ ಬೆಳವಣಿಗೆಯ ಪ್ರಮಾಣವು ಅದಿನ್ನೆಷ್ಟಿತ್ತೆಂದರೆ, ಬಿ.ಪಿ. ರವರು ಅದೇ ತಮ್ಮ ಜೀವನದ ಪರಮ ಸಾಧನೆಯನ್ನಾಗಿ ಭಾವಿಸಿದರು. ಅವರ ದೂರದೃಷ್ಟಿ ಮತ್ತು ನಂಬಿಕೆಗಳು, ಅವರು ಮುಂದೆ ಸಂಭವಿಸಬಹುದಾದ ಸಂದರ್ಭಗಳಲ್ಲಿನ ಆಗು ಹೋಗುಗಳನ್ನು ತುಲನೆ ಮಾಡಲು ಅವಕಾಶವೊದಗಿಸಿದುವು. "ಯುದ್ಧ ಮಾಡುವುದಕ್ಕಾಗಿ ಶಿಕ್ಷಣ ನೀಡುವುದಕ್ಕಿಂತಲೂ, ಮುಂದಿನ ಪೀಳಿಗೆಯು ಉತ್ತಮ ಪೌರರಾಗಿ ಬಾಳಲು ಶಿಕ್ಷಣ ನೀಡುವುದರಿಂದ ಇನ್ನೂ ಹೆಚ್ಚಿನ ದೇಶಸೇವೆ ಸಲ್ಲಿಸಿದಂತಾಗುತ್ತದೆ" ಎಂಬ ಅಂಶವನ್ನು ಮನಗಾಣಲು ಅನುವು ಮಾಡಿಕೊಟ್ಟುವು.

ಆದ್ದರಿಂದ ತಾವಾಗಲೇ ಲೆಫ್ಟಿನೆಂಟ್ ಜನರಲ್ ಆಗಿದ್ದ ಸೈನ್ಯ ಜೀವನವನ್ನು ತ್ಯಜಿಸಿ, ಸ್ಕೌಟಿಂಗ್ ಮೂಲಕ, ಇಡೀ ವಿಶ್ವಕ್ಕೆ ಉಪಯೋಗವಾಗುವ **"ಸೇವಾ ಜೀವನ"** – ಅವರದೇ ಭಾಷೆಯಲ್ಲಿ, ತಮ್ಮ **'ಎರಡನೆಯ ಜೀವನ'**ವನ್ನು– ಪ್ರಾರಂಭಿಸಿದರು.

ಅಖಂಡ ವಿಶ್ವದ ಬಾಲಕರ ಪ್ರೀತಿ ಗೌರವಗಳು ಮತ್ತು ಸಂಸ್ಥೆಯ ಪುರೋಭಿವೃದ್ಧಿಗಳ ಮೂಲಕ, ತಾವು ತಮ್ಮ ಸೇವೆಯ ಪ್ರತಿಫಲವನ್ನು ಪಡೆದುಕೊಂಡರು.

ವಿಶ್ವ ಸೋದರತೆ

1912 ರಲ್ಲಿ ವಿವಿಧ ದೇಶಗಳ ಸ್ಕೌಟುಗಳನ್ನು ಪರಿಚಯ ಮಾಡಿಕೊಳ್ಳುವ ಉದ್ದೇಶದಿಂದ "ವಿಶ್ವ ಪರ್ಯಟನ ಯಾತ್ರೆ"ಯನ್ನು ಕೈಗೊಂಡರು. ಸ್ಕೌಟಿಂಗ್

ವಿಶ್ವ ಸೋದರತೆಯಾಗಿ ರೂಪುಗೊಳ್ಳುವ ದಿಶೆಯಲ್ಲಿ, ಇದು ಮೊದಲ ಹೆಜ್ಜೆ, ಮೊದಲನೆಯ ಪ್ರಪಂಚ ಮಹಾಯುದ್ಧವು ಬಂದು ಈ ಕೆಲಸವು ಸ್ವಲ್ಪಕಾಲ ಕುಂಠಿತ ಗೊಂಡಿತು. ಆದರೆ ವೈರತ್ವವು ಕರುಗುತ್ತಾ ಬಂದಂತೆ ಈ ಕಾರ್ಯವು ಪುನರಾರಂಭ ವಾಯಿತು.

1920 ರಲ್ಲಿ ವಿಶ್ವದ ಎಲ್ಲಾ ಭಾಗಗಳಿಂದಲೂ, ಸ್ಕೌಟುಗಳು ಲಂಡನ್‌ನಲ್ಲಿ ಬಂದು ಸೇರಿದರು. ಅದು ಸ್ಕೌಟುಗಳ ಮೊದಲನೆಯ ಅಂತಾರಾಷ್ಟ್ರೀಯ ಸಭೆಯಾಗಿದ್ದಿತು. ಅದೇ ಮೊದಲನೆಯ ವಿಶ್ವ ಜಾಂಬೋರಿ ಕೂಡ.

ಈ ಜಾಂಬೋರಿಯ ಕೊನೆಯ ರಾತ್ರಿ, ಆಗಸ್ಟ್ 6 ರಂದು, ಬಿ.ಪಿ. ಅವರನ್ನು "ವಿಶ್ವ ಪ್ರಧಾನ ಸ್ಕೌಟ್" (Chief Scout of the World) ಎದು ಘೋಷಿಸಲಾಯಿತು. ನೆರೆದಿದ್ದ ಬಾಲಸಮೂಹದ ಹರ್ಷೋದ್ಗಾರವು ಮುಗಿಲುಮುಟ್ಟಿತು.



ಹಿರಿಯರ ನಾಯಕನೆನಿಸಿದ್ದ ಬಿ.ಪಿ. ರವರ ಮೊದಲ ಜೀವನವು
'ಸ್ಕೌಟಿಂಗ್' ಸರಪಣಿಯ ಮೂಲಕ ಅದಕ್ಕಿಂತಲೂ ಮಹತ್ವದ
ಬಾಲಕರ ನಾಯಕನಾಗಿ ಅವರ ಎರಡನೆಯ ಜೀವನದೊಡನೆ ಬಂಧಿತವಾಗಿದೆ.

ಸ್ಕೌಟ್ ಚಳುವಳಿಯು ಬೆಳೆಯುತ್ತಲೇ ಹೋಯಿತು. ಅದು ತನ್ನ 21ನೆಯ ವಯಸ್ಸನ್ನು ಮುಟ್ಟಿದಾಗ, ವ್ಯಾವಹಾರಿಕ ರೀತಿಯಲ್ಲಿ "ವಯಸ್ಸಿಗೆ ಬಂದಾಗ", ಪ್ರಪಂಚದ ಎಲ್ಲಾ ನಾಗರೀಕ ರಾಷ್ಟ್ರಗಳಲ್ಲೂ, ಸ್ಕೌಟಿಂಗ್ ವ್ಯಾಪಿಸಿತ್ತು. ಅದರ ಸದಸ್ಯತ್ವವು 20 ಲಕ್ಷಕ್ಕೂ ಮೀರಿತ್ತು. ಆ ಶುಭ ಸಂದರ್ಭದಲ್ಲಿ ದೊರೆ ಜಾರ್ಜ್ V ರವರು, ಬಿ.ಪಿ. ರವರಿಗೆ 'ಬ್ಯಾರನ್' ಪದವಿಯನ್ನು ನೀಡಿ ಗೌರವಿಸಿದರು. ಅಂದಿನಿಂದ ಬಿ.ಪಿ. ರವರು "ಲಾರ್ಡ್ ಬೇಡನ್ ಪೊವೆಲ್ ಆಫ್ ಗಿಲ್‌ವೆಲ್" ಆದರು. ಆದರೆ ಸ್ಕೌಟುಗಳಿಗೆ ಮಾತ್ರ ಅವರು **ಶಾಶ್ವತವಾಗಿ ಬಿ.ಪಿ. – "ವಿಶ್ವ ಪರಮ ಪ್ರಧಾನ ಸ್ಕೌಟ್"** (B.P. Chief Scout of the World for Eternity).

ಮೊದಲನೆಯ ವಿಶ್ವ ಜಾಂಬೋರಿಯ ಬಳಿಕ, ಅನುಕ್ರಮವಾಗಿ 1924 ರಲ್ಲಿ ಡೆನ್ಮಾರ್ಕ್; 1929ರಲ್ಲಿ ಇಂಗ್ಲೆಂಡ್; 1933 ರಲ್ಲಿ ಹಂಗೇರಿ; 1937ರಲ್ಲಿ ಹಾಲೆಂಡ್‌ಗಳಲ್ಲಿ ವಿಶ್ವ ಜಾಂಬೋರಿಗಳು ನಡೆದುವು. ಈ ಪ್ರತಿಯೊಂದು ಜಾಂಬೋರೀಯಲ್ಲಿಯೂ, ಬೇಡನ್ ಪೊವೆಲ್‌ರವರು ಪ್ರಮುಖ ವ್ಯಕ್ತಿಯಾಗಿದ್ದರು. ಅವರು ಹೋದೆಡೆಯಲ್ಲೆಲ್ಲಾ "ಅವರ ಬಾಲಕರು" ಅವರಿಗೆ ನೀಡಿದ "ಜಯಕಾರವು" ಗಗನವನ್ನು ಭೇದಿಸುತ್ತಿತ್ತು.

ತಾವು ಸ್ಥಾಪಿಸಿದ ಸ್ಕೌಟ್ ಚಳುವಳಿಯಿಂದ ಬಿ.ಪಿ. ರವರು ಸಂಪೂರ್ಣವಾಗಿ ಆಕರ್ಷಿತರಾದರು. "ಅವರ ಸ್ಕೌಟುಗಳು" ಅವರನ್ನು ವಿಶ್ವದ ಮೂಲೆ ಮೂಲೆಗಳಿಗೂ ಕರೆಸಿಕೊಂಡರು.

ಜಾಂಬೋರೀಗಳು ಸ್ಕೌಟಿಂಗ್‌ನ ವಿಶ್ವಸೋದರತೆಯ ಪ್ರಯತ್ನದಲ್ಲಿ ಒಂದು ಭಾಗ ಮಾತ್ರ. ಸ್ಕೌಟಿಂಗ್‌ನ ಹಿತದೃಷ್ಟಿಯಿಂದ, ಬಿ.ಪಿ. ರವರು, ಪ್ರಪಂಚವನ್ನು

ವ್ಯಾಪಕವಾಗಿ ಸುತ್ತಿದರು. ಅವರು ವಿಶ್ವದ ಅನೇಕ ದೇಶಗಳ, ಅನೇಕ ಸ್ಕೌಟ್ ನಾಯಕರುಗಳೊಡನೆ ಪತ್ರವ್ಯವಹಾರವನ್ನಿಟ್ಟುಕೊಂಡಿದ್ದರು. ಸ್ಕೌಟಿಂಗ್ ವಿಷಯಗಳ ಬಗ್ಗೆ ತಮ್ಮ ಬರವಣಿಗೆಯನ್ನು ಮುಂದುವರೆಸಿದರು. ತಮ್ಮ ಲೇಖನಗಳನ್ನೂ ತಮ್ಮ ಪುಸ್ತಕಗಳನ್ನೂ ತಮ್ಮದೇ ಚಿತ್ರಣಗಳಿಂದ ವಿಶದೀಕರಿಸುತ್ತಿದ್ದರು.

ಬಿ.ಪಿ. ರವರ ಕೊನೆಯ ದಿನಗಳು

ಕೊನೆಗೆ ಅವರಿಗೆ 80 ವರ್ಷ ವಯಸ್ಸಾದ ಮೇಲೆ, ಅವರ ಶಕ್ತಿಯು ಉಡುಗುತ್ತಾ ಬಂದಿತು. ಬೇಡನ್ ಪೊವೆಲ್‌ರವರೇ ಸ್ಥಾಪಿಸಿದ ಗರ್ಲ್ ಗೈಡ್ (ಸ್ಕೌಟ್ಸ್) ಚಳವಳಿಯಲ್ಲಿ, "ವಿಶ್ವಪ್ರಧಾನ"ರಾಗಿದ್ದ (Chief of the World), ಅವರ ಪ್ರಯತ್ನದಲ್ಲಿ ಉತ್ಸಾಹ, ಸಂಭ್ರಮಗಳಿಂದ ಸಹಾಯ ಮಾಡುತ್ತಿದ್ದ, ಅವರ ಪತ್ನಿ ಲೇಡಿ ಬಿ.ಪಿ. ರವರೊಡನೆ, ತಮ್ಮ ಪ್ರೀತಿಪಾತ್ರವಾದ ಆಫ್ರಿಕಾಕ್ಕೆ ಹಿಂದಿರುಗಿದರು.

'ಅಕಾರ್ನ್' (ಓಕ್ ಮರದ ಸಣ್ಣ ಬೀಜ) ಬೃಹತ್ ಪ್ರಮಾಣದ ಮರವಾಗಿ ಬೆಳೆಯುತ್ತದೆ. ಬೇಡನ್ ಪೊವೆಲ್ ರವರು, ಬ್ರೌನ್ ಸೀ ದ್ವೀಪದಲ್ಲಿ ಬಿತ್ತಿದ ಸ್ಕೌಟ್ ಅಕಾರ್ನ್ ಬೀಜವು. ಹೆಮ್ಮರವಾಗಿ, ವಿಶ್ವದ ಎಲ್ಲೆಡೆಗೂ ತನ್ನ ರೆಂಬೆ ಕೊಂಬೆಗಳನ್ನು ಹರಡಿದೆ.

ಅಲ್ಲಿ, ಕೆನ್ಯಾದ ಹಿಮಾಚ್ಛಾದಿತ ಪರ್ವತಗಳ ಹಿನ್ನೆಲೆಯಲ್ಲಿ, ಕಣ್ಣೋಡುವ ವರೆಗೂ ಕಾಡಿನ ದೃಶ್ಯವು ತುಳುಕುವ, ಸುಂದರ ಪ್ರಶಾಂತ ಪ್ರದೇಶದಲ್ಲಿ ನೆಲೆಸಿದರು.

ಅಲ್ಲಿಯೇ ಬಿ.ಪಿ. ರವರು ತಮ್ಮ 84ನೆಯ ಹುಟ್ಟುಹಬ್ಬಕ್ಕೆ, ಇನ್ನೇನು ಒಂದು ತಿಂಗಳಿದೆಯೆನ್ನುವಾಗ 1941 ರ ಜನವರಿ 8 ರಂದು ದೈವಾಧೀನರಾದರು.

ಆಧಾರ – ವಿಲಿಯಂ ಹಿಲ್‌ಕೋರ್ಟ್,
ಡೈರೆಕ್ಟರ್ ಆಫ್ ಸ್ಕೌಟ್ ಕ್ರಾಫ್ಟ್ಸ್, ಬಾಯ್ ಸ್ಕೌಟ್ಸ್ ಆಫ್ ಅಮೆರಿಕಾ
ಅವರ ಬರಹ.

ಸ್ಕೌಟ್ ಸಂಸ್ಥೆಯ ಚರಿತ್ರೆ ಮತ್ತು ಬೆಳವಣಿಗೆ

ಲಾರ್ಡ್ ಬೇಡನ್ ಪೊವೆಲ್‌ರವರು ತಾವು ಸೈನ್ಯಾಧಿಕಾರಿ ಆಗಿದ್ದಾಗ, ಸೈನ್ಯದ ಉಪಯೋಗಕ್ಕಾಗಿ ಬರೆದ "ಎಯ್ಡ್ಸ್ ಟು ಸ್ಕೌಟಿಂಗ್" ಎಂಬ ಪುಸ್ತಕದ ಹಾಗೂ 1899 ರಲ್ಲಿ ನಡೆದ ಮೆಫೆಕಿಂಗ್ ಕದನದಲ್ಲಿ, ಅವರಿಗೆ ಸ್ಥಳೀಯ ಬಾಲಕರಿಂದ ದೊರೆತ ನಿಷ್ಠೆ ಹಾಗೂ ಜವಾಬ್ದಾರಿಯುತ ಸೇವೆ, ಇವುಗಳಿಂದ ಪ್ರಭಾವಿತರಾದ ಬಾಲಕರ ತಂಡಗಳು, ಅಲ್ಲಲ್ಲಿ ನಡೆಸುತ್ತಿದ್ದ ಚಟುವಟಿಕೆಗಳನ್ನು ಕಂಡು ಬಿ.ಪಿ. ಬೆರಗಾದರು. ಬಾಲಕರಿಗಾಗಿಯೇ ಒಂದು ಪುಸ್ತಕ ಬರೆದರೆ ಹೇಗೆ ಎಂಬ ವಿಚಾರ ಅವರಲ್ಲಿ ಹೊಳೆಯಿತು. ಕೂಡಲೇ 1907ರಲ್ಲಿ ಲಂಡನ್ ಬಳಿಯ ಬ್ರೌನ್ ಸೀ ದ್ವೀಪದಲ್ಲಿ ಒಂದು ಪ್ರಾಯೋಗಿಕ ಶಿಬಿರವನ್ನು ನಡೆಸಿದರು. ಸಮಾಜದ ವಿವಿಧ ಸ್ತರಗಳಿಂದ ಆಯ್ದ 20 ಬಾಲಕರಿಗೆ ಶಿಕ್ಷಣ ನೀಡಿದರು. ಆ ಶಿಬಿರದಲ್ಲಿ ಹೇಳಿದ, ಕಾರ್ಯಗತಗೊಳಿಸಿದ ಕಾರ್ಯಕ್ರಮಗಳನ್ನು ಪಾಕ್ಷಿಕ ಪುರವಣಿಯಾಗಿ ಪ್ರಕಟಿಸಿದರು. ಬಳಿಕ 1908 ರ ಪೂರ್ವಾರ್ಧದಲ್ಲಿ ಪುಸ್ತಕರೂಪದಲ್ಲಿ ಹೊರಬಂದ ಲೇಖನ ಮಾಲೆಯೇ "ಬಾಲಕರಿಗಾಗಿ ಸ್ಕೌಟಿಂಗ್" (ಸ್ಕೌಟಿಂಗ್ ಫಾರ್ ಬಾಯ್ಸ್) ಈ ಪುಸ್ತಕದಲ್ಲಿ ಕಂಡುಬಂದ ವಿಚಾರಧಾರೆ, ಕ್ರಿಯಾಶೀಲ ಮನೋಭಾವನೆಗಳು ಹಾಗೂ ಸ್ಕೌಟಿಂಗ್‌ನ ಉದ್ದೇಶಿತ ಕಾರ್ಯಕ್ರಮಗಳು, ವಿಶ್ವಾದ್ಯಂತ ಬಾಲಕರ ಮನಸ್ಸನ್ನು ಸೆರೆಹಿಡಿದು, ತ್ವರಿತ ಗತಿಯಲ್ಲಿ ವ್ಯಾಪಕವಾಗಿ ಹರಡಿತು.

"ಸ್ಕೌಟಿಂಗ್ ಫಾರ್ ಬಾಯ್ಸ್" ಪುಸ್ತಕದ ಮುಂಚಿನ ರೂಪು ಪಾಕ್ಷಿಕ ಪುರವಣಿಯ ಪ್ರತಿಗಳು ಅಂಗಡಿ ಮುಂಗಟ್ಟುಗಳಲ್ಲಿ ಕಾಣಿಸಿಕೊಂಡುದೇ ತಡ, ಬ್ರಿಟಿಷ್ ದ್ವೀಪಗಳಾದ್ಯಂತ ಸ್ಕೌಟ್ ಪಟಾಲಂಗಳು ಸಾವಿರಾರು ಸಂಖ್ಯೆಯಲ್ಲಿ ಪ್ರಾರಂಭವಾದುವು. ಪುಸ್ತಕದ ಆರನೆಯ ಹಾಗೂ ಕೊನೆಯ ಭಾಗವು ಹೊರಬಿದ್ದ 1908 ರ ಮಾರ್ಚ್ ಕೊನೆಯ ವೇಳೆಗೆ, ಸಮುದ್ರದ ಅಲೆಯಂತೆ ಸಂಸ್ಥೆಯು ಇಡೀ ಸಂಯುಕ್ತ ರಾಜ್ಯವನ್ನೂ, ವಿಶ್ವದೆಲ್ಲೆಡೆ ಹರಡಿದ್ದ ಬ್ರಿಟಿಷ್ ವಸಾಹತುಗಳನ್ನೂ ("ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯಾಸ್ತವಿರುವುದೇ ಇಲ್ಲ" ಎಂಬ ಲೋಕೋಕ್ತಿ ಪ್ರಚಲಿತವಿದ್ದ ಕಾಲವೆನ್ನಿ) – ಎಂದರೆ ಇಂಡಿಯಾ, ಕೆನಡಾ, ನ್ಯೂಜಿಲೆಂಡ್, ಇತ್ಯಾದಿ– ಆವರಿಸಿಬಿಟ್ಟಿತು.

ಸಾವಿರಾರು ಸಂಖ್ಯೆಯಲ್ಲಿ ಕೇಳಿಬಂದ ಪ್ರಶ್ನೆಗಳಿಗೆ, ಮಾಹಿತಿ ನೀಡುವ ಉದ್ದೇಶದಿಂದ "ದಿ ಸ್ಕೌಟ್" ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಲಾಯಿತು.

ಇದು ಬ್ರಿಟಿಷ್ ಸಾಮ್ರಾಜ್ಯ ಪ್ರದೇಶವಷ್ಟೇ ಅಲ್ಲದೆ ವಿಶ್ವದ ಇತರ ಪ್ರದೇಶಗಳಲ್ಲಿಯೂ ಸಹ ಬಿ.ಪಿ. ರವರ ಧ್ವನಿವರ್ಧಕ ಸಲಕರಣೆಯಂತೆ ಕೆಲಸ ಮಾಡಿತು.

ಅಮೆರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಸ್ಕೌಟಿಂಗ್ ಪ್ರಾರಂಭವಾದುದೊಂದು ಸೋಜಿಗವೇ ಸರಿ, ವಿಲಿಯಂ ಡೀ ಬಾಯ್ಸ್ ಎಂಬುವರು ಅಲ್ಲಿನ ವಾಣಿಜ್ಯೋದ್ಯಮಿ. ಅವರು ಲಂಡನ್ ನಗರಕ್ಕೆ ಬಂದಿದ್ದರು. ಹಿಮವು ಸುರಿಯುತ್ತಿದ್ದ ಅದೊಂದು ದಿನ, ಅವರು ಮಾರ್ಗಾನ್ವೇಷಿಯಾಗಿ ಬಾಲಕನೊಬ್ಬನ ಸಹಾಯ ಪಡೆದರು. ಪ್ರತಿಯಾಗಿ, ತಮ್ಮ ಮೆಚ್ಚುಗೆ ಸೂಸಿ ಆ ಬಾಲಕನಿಗೆ ಹಣವನ್ನು ನೀಡಲು ಹೋದರು. ಬಾಲಕನಾದರೋ "ಕ್ಷಮಿಸಿ, ನಾನೊಬ್ಬ ಸ್ಕೌಟ್" ಎಂದು ಹೇಳಿ, ಹಣವನ್ನು ಸ್ವೀಕರಿಸದೆ ಹಿಮದಲ್ಲಿ ಮರೆಯಾದನು. ಅದರಿಂದ ಅವರ ಕುತೂಹಲವು ಕೆರಳಿತು. ಲಂಡನ್ನಿನ ಪ್ರಧಾನ ಸ್ಕೌಟ್ ಕಛೇರಿಗೆ ಭೇಟಿ ನೀಡಿದರು. ಸ್ಕೌಟಿಂಗ್ ಬಗ್ಗೆ ಪೂರ್ಣ ಮಾಹಿತಿ ಪಡೆದರು.

ತಮ್ಮ ದೇಶಕ್ಕೆ ಹಿಂದಿರುಗಿದ ಬಳಿಕ, ತಮಗೆ ಅದ್ಭುತವೆನಿಸಿದ "ಸ್ಕೌಟಿಂಗ್" ನ್ನು ಅಮೆರಿಕೆಯಲ್ಲಿ ಪ್ರಾರಂಭಿಸಲು ಕಾರಣರಾದರು. ಅಮೆರಿಕೆಯಲ್ಲಿ, ಸ್ಕೌಟುಗಳ ನಿಸ್ವಾರ್ಥ ಸೇವಾ ಮನೋಭಾವನೆ ಮುಂತಾದ ಕಾರ್ಯಕ್ರಮಗಳು ಜನರ ಮನಸ್ಸನ್ನು ಸೆಳೆಯಿತು, ಅನತಿ ಕಾಲದಲ್ಲಿ ಇಡೀ ಅಮೇರಿಕಾ (USA) ಸ್ಕೌಟಿಂಗ್ ಮಯವಾಯಿತು. ಇಂದಿನ ವಿಶ್ವ ಸ್ಕೌಟ್ ಗಣತಿಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಪ್ರಥಮ ಸ್ಥಾನದಲ್ಲಿದೆ.

ಈ ಮೊದಲೇ ಹೇಳಿದಂತೆ 1907–1908 ರಲ್ಲಿ ಬ್ರಿಟಿಷ್ ದ್ವೀಪಗಳಾದ್ಯಂತ ಹರಡಿದ ಸ್ಕೌಟಿಂಗ್‌ನ ಅಲೆಯು, ಬ್ರಿಟಿಷ್ ವಸಾಹತುಗಳಿಗೂ ತಿರುಗಿತು. ಅಂತಹ ಅಲೆಯು 1909 ರ ಸೆಪ್ಟೆಂಬರ್–ಅಕ್ಟೋಬರ್‌ನಲ್ಲಿ ಬೆಂಗಳೂರನ್ನು (ಕರ್ನಾಟಕ ರಾಜಧಾನಿ–ಅಂದಿನ ಮೈಸೂರು ರಾಜ್ಯದ ರಾಜಧಾನಿ) ಮುಟ್ಟಿತು. ನಿವೃತ್ತ ನೌಕಾಧಿಕಾರಿ ಕ್ಯಾಪ್ಟನ್ ಬೇಕರ್ ಅವರು ಬೆಂಗಳೂರು ದಂಡು ಪ್ರದೇಶದ ಬಿಷಪ್ ಕಾಟನ್ ಶಾಲೆಯ ಆವರಣದಲ್ಲಿ ಮುಕ್ತದಳವೊಂದನ್ನು ಪ್ರಾರಂಭಿಸಿದರು. ಇದು ಭಾರತದ ಪ್ರಥಮ ಸ್ಕೌಟ್ ದಳ.

ಕ್ಯಾಪ್ಟನ್ ಬೇಕರ್ ಅವರು ಮೂರಿ ಯುದ್ಧದಲ್ಲಿ ಖ್ಯಾತಿಗಳಿಸಿದ್ದರು. ನಿವೃತ್ತಿಯ ಬಳಿಕ ಬೆಂಗಳೂರಿನಲ್ಲಿ ನೆಲೆಸಿದರು. ನಗರದ ಶಾಲಾ ಮುಖ್ಯರುಗಳನ್ನೂ, ವಿದ್ಯಾ ಸಂಸ್ಥೆಗಳನ್ನೂ ಸಂದರ್ಶಿಸಿ, ಸ್ಥಳೀಯ ಸಂಸ್ಥೆಯೊಂದನ್ನು ಸಂಘಟಿಸಿದರು.

ನವೆಂಬರ್ 1909 ರಲ್ಲಿ ಈ ಸ್ಥಳೀಯ ಸಂಸ್ಥೆಯನ್ನು ಲಂಡನ್‌ನ ಪ್ರಧಾನ ಕಛೇರಿಯಲ್ಲಿ ಅಧಿಕೃತವಾಗಿ ನೋಂದಾಯಿಸಿದರು. ಮುಂದೆ 1912ರಲ್ಲಿ ಭಾರತದ ಕೇಂದ್ರ ಕಛೇರಿಯನ್ನು ಸ್ಥಾಪಿಸಿದಾಗ, ಮದ್ರಾಸ್‌ನ (ಇಂದಿನ ಚೆನ್ನೈ) ಬ್ರಿಗೇಡಿಯರ್ ಜನರಲ್ ಎಫ್.ಜಿ. ಬಾಂಡ್ ರವರು ಪ್ರಧಾನ ಆಯುಕ್ತರಾಗಿಯೂ, ಬೆಂಗಳೂರಿನ ಕ್ಯಾಪ್ಟನ್ ಬೇಕರ್ ಅವರು ಪ್ರಧಾನ ಕಾರ್ಯದರ್ಶಿಯಾಗಿಯೂ ಕೆಲಸ ಮಾಡಿದರು.

1909 ರಲ್ಲಿ ಬೆಂಗಳೂರಿನಲ್ಲಿ ಮುಕ್ತದಳವೊಂದು ಪ್ರಾರಂಭವಾದ ಒಂದು ವರ್ಷದ ಬಳಿಕ– ಅಂದರೆ ಅಕ್ಟೋಬರ್ 1910ರಲ್ಲಿ ಪುಣೆ ಬಳಿಯ ಕಿರ್ಕಿಯಲ್ಲಿ, ಕ್ಯಾಪ್ಟನ್ ಟಿ. ಟಾಡ್‌ರವರು ಸ್ಕೌಟ್ ದಳವೊಂದನ್ನು ಪ್ರಾರಂಭಿಸಿ ನೋಂದಾಯಿಸಿದರು. ಭಾರತದ ಮೂರನೆಯ ಸ್ಕೌಟ್ ದಳವು ಜಬ್ಬಲ್‌ಪುರದ ಕ್ರೈಸ್ಟ್ ಚರ್ಚ್ ಪ್ರೌಢಶಾಲೆಯಲ್ಲಿ, ಮೇಜರ್ ಪಾಕಿನ್ ಹ್ಯಾಂ ವಾಲ್ಷ್‌ರವರ ನೇತೃತ್ವದಲ್ಲಿ ಪ್ರಾರಂಭ ವಾದುದಾಗಿ ತಿಳಿದುಬರುತ್ತದೆ. ಕರ್ನಲ್ ಜೆ.ಎಸ್. ವಿಲ್ಸನ್ ಮತ್ತು ಆಲ್‌ಫ್ರೇಡ್ ಪಿಕ್‌ಫರ್ಡ್‌ರವರುಗಳು ಕೋಲ್ಕತ್ತಾದಲ್ಲಿ ಸ್ಕೌಟಿಂಗ್ ಬೇರೂರಲು ಶ್ರಮಿಸಿದ ಮುಖ್ಯ ನೇತಾರರು.

ಪ್ರಾರಂಭದ ದಿನಗಳಲ್ಲಿ ಆಂಗ್ಲೋ ಇಂಡಿಯನ್ ಮತ್ತು ಯುರೋಪಿಯನ್ನರಿಗೆ ಮಾತ್ರ ಸೀಮಿತವಾಗಿದ್ದ, ಲಂಡನ್‌ನ ಕೇಂದ್ರ ಕಛೇರಿಯಲ್ಲಿ ನೋಂದಣಿ ಪಡೆಯುತ್ತಿದ್ದ ಈ ಸಂಸ್ಥೆಯನ್ನು ಭಾರತದ ಕೋಟ್ಯಾಂತರ ಬಾಲಕರಿಗೆ ತೆರವು ಮಾಡುವ ಉದ್ದೇಶದಿಂದ 1913–18 ರ ಅವಧಿಯಲ್ಲಿ ದೇಶದ ವಿವಿಧ ಪ್ರದೇಶಗಳಲ್ಲಿ ಸಂಸ್ಥೆಯ ಸಂಘಟನೆಯು ಪ್ರವೃತ್ತವಾಯಿತು.

ಅಂದಿನ ದೇಶೀಯ ಸಂಸ್ಥಾನಗಳ ರಾಜ ಮಹಾರಾಜರುಗಳೂ, ಮಧ್ಯಪ್ರದೇಶದಲ್ಲಿ 1913 ರಲ್ಲಿ ಸಂಸ್ಥೆಯನ್ನು ಸಂಘಟಿಸಿದ ಜಸ್ಟಿಸ್ ವಿವಿಯನ್ ಬೋಸ್‌ರವರೂ; ಮದ್ರಾಸಿನಲ್ಲಿ 1915–16ರಲ್ಲಿ ಇಂಡಿಯನ್ ಬಾಯ್ಸ್ ಸ್ಕೌಟ್ಸ್ ಅಸೋಸಿಯೇಷನ್ ಅನ್ನು ಸಂಘಟಿಸಿದ ಡಾ॥ ಅನಿಬೆಸೆಂಟ್ ಮತ್ತು ಡಾ॥ ಜೆ.ಎಸ್. ಅರುಂಡೇಲ್ ರವರೂ; 1915 ರಲ್ಲಿ ಬಂಗಾಳದಲ್ಲಿ ಸಂಸ್ಥೆಯನ್ನು ಸಂಘಟಿಸಿದ ಕರ್ನಲ್ ಜೆ. ಎಸ್. ವಿಲ್ಸನ್ ಮತ್ತು ಆಲ್‌ಫ್ರೆಡ್ ಪಿಕ್‌ಫರ್ಡ್ ರವರೂ; ಉತ್ತರ ಪ್ರದೇಶದ ಅಲಹಾಬಾದ್‌ನಲ್ಲಿ 1918 ರಲ್ಲಿ ಸೇವಾಸಮಿತಿ ಸ್ಕೌಟ್ ಅಸೋಸಿಯೇಷನ್ನನ್ನು ಸಂಘಟಿಸಿದ ಪಂಡಿತ ಮೋಹನ ಮಾಳವೀಯ, ಹೃದಯನಾಥ ಕುಂಜ್ರು ಮತ್ತು ಪಂಡಿತ ಶ್ರೀ ರಾಮ ಬಾಜಪಾಯಿರವರೂ ಉಲ್ಲೇಖನೀಯರು.

1919 ರ ವೇಳೆಗೆ ಭಾರತದಾದ್ಯಂತ ಸ್ಕೌಟ್ ಸಂಸ್ಥೆಗಳ ಒಂದು ಮಹಾ ಜಾಲವೇ ಏರ್ಪಟ್ಟಿದ್ದಿತು.

ದೇಶೀಯ ಸಂಸ್ಥಾನಗಳಲ್ಲಿ ಆಯಾ ರಾಜ್ಯಗಳ ಮಹಾರಾಜರುಗಳೂ, ಪ್ರಾಂತ್ಯ ಮಟ್ಟದಲ್ಲಿ ಆಯಾ ಗವರ್ನರುಗಳೂ, ಕೇಂದ್ರಮಟ್ಟದಲ್ಲಿ ವೈಸ್‌ರಾಯ್‌ರವರೂ ಚೀಫ್ ಸ್ಕೌಟ್‌ಗಳಾಗಿದ್ದರು. ಸ್ಥಳೀಯ ಗಣ್ಯವ್ಯಕ್ತಿಗಳು ಮತ್ತು ಸರ್ಕಾರದ ಉನ್ನತಾಧಿಕಾರಿಗಳು ಕೂಡಿದ ಕಾರ್ಯಕಾರೀ ಸಮಿತಿಗಳು, ನಿಯಮಿಸಲ್ಪಟ್ಟ ಆಯುಕ್ತರುಗಳ ನೇತೃತ್ವ, ಸಲಹೆ ಮತ್ತು ಸಹಕಾರಗಳೊಂದಿಗೆ ಈ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದುವು. ಸಂಸ್ಥಾನಗಳು ಮತ್ತು ಪ್ರಾಂತ್ಯಗಳು ಇಂಡಿಯಾದ ಮುಖ್ಯ ಕೇಂದ್ರ ಕಛೇರಿಗೂ, ಅದು ಲಂಡನ್‌ನ ಅಂತಾರಾಷ್ಟ್ರೀಯ ಪ್ರಧಾನ ಕಛೇರಿಗೂ ಸಂಯೋಜಿತವಾಗಿ ಕೆಲಸ ಮಾಡುತ್ತಿದ್ದುವು.

1921 ಜನವರಿಯಲ್ಲಿ, ಆಗಿನ ವೈಸ್‌ರಾಯ್ ಲಾರ್ಡ್ ಚೆಲ್ಮ್ಸ್‌ಫರ್ಡ್‌ರವರ ಆಹ್ವಾನವನ್ನು ಮನ್ನಿಸಿ, ಲಾರ್ಡ್ ಮತ್ತು ಲೇಡಿ ಬೇಡನ್ ಪೊವೆಲ್ ರವರು, ಮುಂಬೈನಲ್ಲಿ (ಆಗಿನ ಬಾಂಬೆ) ಬಂದಿಳಿದರು. ಅವರುಗಳು ಭೇಟಿ ನೀಡಿದ ಎಲ್ಲಾ ಸ್ಥಳಗಳಲ್ಲಿಯೂ ರ್‍ಯಾಲಿಗಳು ಸಂಘಟಿತವಾಗಿದ್ದುವು. ಭಾರತದ ಬಾಲ ಸಮೂಹದಲ್ಲಿ, ಅವರುಗಳು ಉನ್ನತ ಮಟ್ಟದ ಶಿಸ್ತು, ಮೌಲ್ಯ, ಆದರ್ಶಗಳನ್ನು ಗುರುತಿಸಿ, ತಮ್ಮ ತೃಪ್ತಿ ಹಾಗೂ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಅಲಹಾಬಾದ್, ಜಬ್ಬಲ್‌ಪುರ, ಲಕ್ನೋ, ರಾಂಚಿ, ಮದ್ರಾಸು ಮುಂತಾದ ಪ್ರಮುಖ ಸ್ಥಳಗಳಲ್ಲಿ ಸ್ಕೌಟುಗಳ ಸಂಯುಕ್ತ ರ್‍ಯಾಲಿಗಳು ನಡೆದುವು.

9-2-1921 ರಲ್ಲಿ, ಮದ್ರಾಸ್‌ನಲ್ಲಿ ಡಾ॥ ಆನೀಬೆಸೆಂಟ್ ರವರು ಒಂದು ಸಮ್ಮೇಳನವನ್ನು ಸಂಘಟಿಸಿದರು. ಈ ಸಮ್ಮೇಳನದಲ್ಲಿ ಭಾರತದ ಎಲ್ಲಾ ಸ್ಕೌಟ್ ಸಂಸ್ಥೆಗಳು ಒಗ್ಗೂಡುವ ಪ್ರಯತ್ನವು ನಡೆದು, ಒಂದು ಒಡಂಬಡಿಕೆಗೆ ಬರಲಾಯಿತು. ಈ ಒಕ್ಕೂಟದಲ್ಲಿ ಸೌತ್ ಇಂಡಿಯನ್ ಬಾಯ್ ಸ್ಕೌಟ್ಸ್ ಅಸೋಸಿಯೇಷನ್, ಬಾಯ್ ಸ್ಕೌಟ್ಸ್ ಅಸೋಸಿಯೇಷನ್ ಮತ್ತು ಇಂಡಿಯನ್ ಬಾಯ್ ಸ್ಕೌಟ್ಸ್ ಅಸೋಸಿಯೇಷನ್ ಒಂದಾದುವು. ಸೇವಾ ಸಮಿತಿ ಸ್ಕೌಟ್ ಅಸೋಸಿಯೇಷನ್ ಬೇರೆಯಾಗಿಯೇ ಉಳಿಯಿತು.

ಸಂಸ್ಥೆಯು ಅನೇಕ ರೀತಿಯ ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡು ಉನ್ನತ ಮಟ್ಟದ ಸೇವೆಯನ್ನು ಸಲ್ಲಿಸುತ್ತಿತ್ತಾದರೂ, "ಪರದೇಶಿಯ ಮೂಲದ್ದು,

ಪ್ರತಿಜ್ಞೆಯಲ್ಲಿ ಇಂಗ್ಲೆಂಡ್ ಚಕ್ರವರ್ತಿಗೆ ನಿಷ್ಠೆಯನ್ನು ತೋರುತ್ತದೆ" ಎಂಬ ಆಪಾದನೆಗೆ ಒಳಗಾಗಿದ್ದಿತು. ರಾಷ್ಟ್ರೀಯ ಭಾವನೆಯು ಉತ್ಕಟವಾಗಿ ಹೊಮ್ಮಿ ಹರಿಯುತ್ತಿದ್ದ, ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ, ಸಂಸ್ಥೆಯ ಪ್ರಭಾವವು ಅಷ್ಟಾಗಿ ಕಾಣಬರಲಿಲ್ಲವೆನ್ನಬಹುದು.

1937ರಲ್ಲಿ, ದೆಹಲಿಯಲ್ಲಿ ಆಲ್ ಇಂಡಿಯಾ ಬಾಯ್ ಸ್ಕೌಟ್ಸ್ ಜಾಂಬೋರಿ ನಡೆಯಿತು. ಲಾರ್ಡ್ ಮತ್ತು ಲೇಡಿ ಬಿ.ಪಿ. ಅವರುಗಳು ಆಹ್ವಾನಿತರಾಗಿ ಬಂದಿದ್ದರು. ಜಾಂಬೊರಿಯ ಬಳಿಕ ಅವರು ದೇಶದ ನಾನಾ ಭಾಗಗಳಿಗೆ ಭೇಟಿಕೊಟ್ಟರು. ಬೆಂಗಳೂರಿಗೂ ಬಂದಿದ್ದರೆಂದು; ಬೆಂಗಳೂರು ಶ್ರೀ ಚಾಮುಂಡಿ ಮುಕ್ತದಳದಲ್ಲಿ ಆಗ ರೋವರ್ ಸ್ಕೌಟ್ ಲೀಡರ್ ಆಗಿದ್ದ ದಿ॥ ಟಿ. ರಾಜೈಂಗಾರ್ ಅವರ ಮೂಲಕ ತಿಳಿದುಬಂದಿತು.

ಜಾಂಬೋರೀಯ ಬಳಿಕ ಮತ್ತೆ ದೇಶದ ಸಂಸ್ಥೆಗಳನ್ನು ಒಗ್ಗೂಡಿಸುವ ಪ್ರಯತ್ನ ನಡೆದು, ಪ್ರತಿಜ್ಞೆಯ ವಿಷಯದಲ್ಲಿ ಒಮ್ಮತಕ್ಕೆ ಬರಲಾಗದೆ, ಪ್ರಯತ್ನವು ವಿಫಲವಾಯಿತು.

1938ರಲ್ಲಿ, ದೇಶದ ರಾಷ್ಟ್ರೀಯತೆಯ ಉದ್ರಿಕ್ತ ಪರಿಸ್ಥಿತಿ ಇದ್ದಿತು. ಹಾಗಾಗಿ ಅನೇಕ ನಾಯಕರುಗಳು ಬಾಯ್ ಸ್ಕೌಟ್ಸ್ ಅಸೋಸಿಯೇಷನನ್ನು ತೊರೆದರು. ಸೇವಾ ಸಮಿತಿ ಸ್ಕೌಟ್ಸ್ ಅಸೋಸಿಯೇಷನ್ ಮತ್ತು ಬೊಂಬಾಯಿನ ಇಂಡಿಯನ್ ನ್ಯಾಷನಲ್ ಸ್ಕೌಟ್ಸ್ ಅಸೋಸಿಯೇಷನ್‌ಗಳನ್ನು ಒಗ್ಗೂಡಿ, "ಹಿಂದೂಸ್ಥಾನ್ ಸ್ಕೌಟ್ಸ್ ಅಸೋಸಿಯೇಷನ್" ಎಂಬ ಹೊಸ ಸಂಸ್ಥೆಯನ್ನೇ ಕಟ್ಟಿದರು.

1947 ರಲ್ಲಿ ಲೇಡಿ ಮೌಂಟ್‌ಬೇಟನ್‌ರವರ ಸಲಹೆ, ಆಶಯಗಳನ್ವಯ ಮತ್ತೆ ವಿಲೀನತೆಯ ಪ್ರಯತ್ನ ಪ್ರಾರಂಭವಾಯಿತು. 9–5–1947 ರಂದು ಆಲ್ ಇಂಡಿಯಾ ಬಾಯ್ ಸ್ಕೌಟ್ಸ್ ಅಸೋಸಿಯೇಷನ್, ಹಿಂದೂಸ್ಥಾನ್ ಸ್ಕೌಟ್ಸ್ ಅಸೋಸಿಯೇಷನ್ ಮತ್ತು ಗರ್ಲ್ ಗೈಡ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಈ ಸಂಸ್ಥೆಗಳ ಜಂಟಿ ಸಭೆಯು ನಡೆಯಿತು.

ಆಗ ಕೇಂದ್ರ ವಿದ್ಯಾಮಂತ್ರಿಗಳಾಗಿದ್ದ ಶ್ರೀ ಮೌಲಾನಾ ಅಬುಲ್ ಕಲಾಂ ಆಜಾದ್‌ರವರು ಅಧ್ಯಕ್ಷತೆ ವಹಿಸಿದ್ದರು. ಹಾರ್ದಿಕವಾದ ಚರ್ಚೆ ಮತ್ತು ಸಂಧಾನಗಳ ಬಳಿಕ ಒಮ್ಮತಕ್ಕೆ ಬರಲಾಯಿತು. ವಿಲೀನತಾ ಸಮಿತಿಯ ರಚನೆಯಾಯಿತು. ಶ್ರೀ ಮಂಗಲದಾಸ್ ಪಕ್ವಾಸಾ ಅವರು ಅಧ್ಯಕ್ಷರು (ಇವರು ಮುಂದೆ ಕರ್ನಾಟಕದ

ರಾಜ್ಯಪಾಲರಾಗಿದ್ದರು). ಸದಸ್ಯರುಗಳಲ್ಲಿ ವಿದ್ಯಾ ಇಲಾಖಾ ಕಾರ್ಯದರ್ಶಿಗಳಾಗಿದ್ದ ಶ್ರೀ ತಾರಾಚಂದ್, ಹಿಂದುಸ್ಥಾನ್ ಸ್ಕೌಟ್ ಅಸೋಸಿಯೇಷನ್ನಿನ ಪಂಡಿತ ಹೃದಯನಾಥ ಕುಂಜ್ರು, ಬಾಯ್ ಸ್ಕೌಟ್ಸ್ ಅಸೋಸಿಯೇಷನ್ನಿನ ಜಸ್ಟೀಸ್ ವಿವಿಯನ್ ಬೋಸ್ ಮತ್ತು ಆಲ್ ಇಂಡಿಯಾ ಗರ್ಲ್ ಗೈಡ್ಸ್ ಅಸೋಸಿಯೇಷನ್ನಿನ ಶೀಮತಿ ಹೆಚ್. ಸಿ. ಕ್ಯಾಪ್ಟನ್ ಇವರುಗಳು ಮುಖ್ಯರು. ತುಮಕೂರು ಜಿಲ್ಲಾ ಸ್ಕೌಟ್ ಕಮೀಷನರೂ, ಆಗಿನ ರಾಜ್ಯ ಸಭಾ ಸದಸ್ಯರೂ ಆಗಿದ್ದ ದಿ॥ ಬಿ.ಸಿ. ನಂಜುಂಡಯ್ಯನವರೂ ಸದಸ್ಯರಾಗಿದ್ದುದು ನಮಗೊಂದು ವಿಶೇಷ. ಸಂಸ್ಥೆಯ ಹೆಸರಿನ ವಿಷಯದಲ್ಲಿ ಚರ್ಚೆ ನಡೆದಾಗ ಇಂಡಿಯನ್, ಹಿಂದೂಸ್ಥಾನ್, ನ್ಯಾಷನಲ್, ಹಿಂಡ್, ಇಂಡ್, ಮುಂತಾದ ಹೆಸರುಗಳ ಚರ್ಚೆ ನಡೆದು, ತಮ್ಮ (ಬಿ.ಸಿ. ನಂಜುಂಡಯ್ಯನವರ) ಪ್ರಸ್ತಾವನೆ "ಭಾರತ್" ಅನ್ನು ಮುಂದಿಟ್ಟು ಅನುಮೋದನೆ ಪಡೆದ ವಿಷಯವನ್ನು ತುಮಕೂರಿನಲ್ಲಿ ಅವರು ಸಡಗರದಿಂದ ತಿಳಿಸಿದುದು, ಲೇಖಕರಿಗೆ ನೆನಪಿದ್ದು, ಈ ಅಂಶವು ಕರ್ನಾಟಕದ ರಾಜ್ಯ ಭಾರತ್ ಸ್ಕೌಟ್ಸ್ ಗೈಡ್ಸ್, ಸಂಸ್ಥೆಗೆ ಹೆಮ್ಮೆಯ ವಿಷಯವಾಗಿದೆ.

ಮುಂದೆ ಕೂಲಂಕಷವಾದ ಪರಿಶೀಲನೆ, ಹಾರ್ದಿಕ ಚರ್ಚೆ, ಸಂಧಾನ, ಪ್ರತಿ ಸಂಧಾನಗಳ ಬಳಿಕ ಒಮ್ಮತಕ್ಕೆ ಬರಲಾಯಿತು. ಅಂತಿಮ ವಿಲೀನತಾ ಸಭೆಯು, ಬೆಂಗಳೂರಿನ ರಾಜ್ಯ ಕಛೇರಿಯಲ್ಲಿ 1950ರಲ್ಲಿ ನಡೆಯಿತು. ಆ ಸಭೆಯ ತೀರ್ಮಾನ ದನ್ವಯ 7–11–1950 ರಂದು "ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್" ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಅಲ್ಲಿಂದ ಮುಂದೆ 15–8–1951 ರಂದು ಬಾಲಕೀಯರಿಗೇ ಪ್ರತ್ಯೇಕವಾಗಿದ್ದ, ಗರ್ಲ್ ಗೈಡ್ ಅಸೋಸಿಯೇಷನ್ ಸಹ ವಿಲೀನಗೊಂಡು, ಮೂರು ದಶಕಗಳ ಸತತ ಪ್ರಯತ್ನವು ಸಫಲವಾಗಿ ಸಾಕಾರಗೊಂಡಿತು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ, ಸ್ಕೌಟ್ ಶಾಖೆಯು, ಜಿನೀವಾದ 'ವೋಸಂ' ನೊಡನೆಯೂ, ಗರ್ಲ್ ಗೈಡ್ ಶಾಖೆಯು ಲಂಡನ್‌ನ 'ವ್ಯಾಗ್ಸ್' ನೊಡನೆಯೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಂಯೋಜಿತವಾಗಿವೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಶ್ವ ಸಂಘಟನೆಯಿಂದ, ಅಧಿಕೃತ ಮನ್ನಣೆ ಪಡೆದ ನಾಡಿನ ಏಕೈಕ ಸಂಸ್ಥೆ "ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್".

ಇಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ 30,00,000 ಹೆಚ್ಚು ಸದಸ್ಯರಿದ್ದು ವಿಶ್ವಗಣತಿಯಲ್ಲಿ 4 ನೆಯ ಸ್ಥಾನ ಪಡೆದಿದೆ.

ಭಾರತ್ ಸ್ಕೌಟಿಂಗ್ ಚರಿತ್ರೆಯಲ್ಲಿ ಕರ್ನಾಟಕದಲ್ಲಿ ಹೆಗ್ಗಳಿಕೆ–ಮೈಲಿಗಲ್ಲುಗಳು

1909 ಭಾರತದ ಮೊದಲನೆಯ ಸ್ಕೌಟ್ ದಳ, ಅದೂ ಮುಕ್ತದಳ ಬೆಂಗಳೂರಿನಲ್ಲಿ.

1912 ಅಸ್ತಿತ್ವಕ್ಕೆ ಬಂದ ಭಾರತದ ಕೇಂದ್ರ ಕಛೇರಿಯಲ್ಲಿ, ಬೆಂಗಳೂರಿನ ಕ್ಯಾಪ್ಟನ್ ಬೇಕರ್ ಅವರು ಮೊದಲನೆಯ ಪ್ರಧಾನ ಕಾರ್ಯದರ್ಶಿ.

1916–18 ಶ್ರೀಮನ್ಮಹಾರಾಜರು, ಮಹಾರಾಣಿಯವರ ಘೋಷಣೆ ಮತ್ತು ಶ್ರೀಮದ್ಯುವರಾಜರ ನಾಯಕತ್ವದಲ್ಲಿ, ರಾಜ್ಯದ ದಕ್ಷಿಣಭಾಗದ ಹೆಚ್ಚು ಭೂಭಾಗವನ್ನು ಹೊಂದಿದ್ದ ಮೈಸೂರು ಸಂಸ್ಥಾನದಲ್ಲಿ ಬಾಯ್ ಸ್ಕೌಟ್ಸ್ ಆಫ್ ಮೈಸೂರ್ ಮತ್ತು ಮೈಸೂರು ಗರ್ಲ್ ಗೈಡ್ ಸಂಸ್ಥೆಗಳು ವ್ಯವಸ್ಥಿತವಾದುವು.

ಉನ್ನತ ಮಟ್ಟದ ಪ್ರಾವೀಣ್ಯತೆ ಮತ್ತು ಪ್ರೌಢಿಮೆಗಳಿಗೆ ಈ ಸಂಸ್ಥೆಗಳು ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದ್ದುವು.

ರಾಜ್ಯದ ಇತರ ಭೂಭಾಗಗಳಲ್ಲಿ ವಿಶೇಷವಾಗಿ ಧಾರವಾಡ, ಮಂಗಳೂರು, ಬೆಳಗಾಂ, ಮಡಕೇರಿ ಮುಂತಾದ ಸ್ಥಳಗಳಲ್ಲಿ ಆಗಿನ ಆಯಾ ಸಂಸ್ಥಾನ, ಪ್ರಾಂತ್ಯಗಳಲ್ಲಿ ಪ್ರಚಲಿತವಿದ್ದಂತೆ ಸ್ಕೌಟಿಂಗ್, ಗೈಡಿಂಗ್, ಸುಸ್ಥಿತಿಯಲ್ಲಿದ್ದುವು.

1916–18 ಯಾವುದೇ ಭೇದಭಾವವಿಲ್ಲದೆ, ಭಾರತದ ಎಲ್ಲಾ ಬಾಲಕರಿಗೂ ಅನ್ವಯಿಸುವಂತೆ ಸ್ಕೌಟಿಂಗ್/ಗೈಡಿಂಗ್ ಪ್ರಾರಂಭಿಸಿದ ದೇಶೀಯ ಸಂಸ್ಥಾನಗಳಲ್ಲಿ ಮೈಸೂರು (ದಕ್ಷಿಣ ಕರ್ನಾಟಕ ಭೂಭಾಗ) ಮೊದಲನೆಯದು.

1918 ದೇಶದಲ್ಲೇ ಅತಿ ಹಳೆಯದೆನಿಸಿ, ಕಾರ್ಯಶೀಲವಾಗಿ ಕೆಲಸ ಮಾಡುತ್ತಾ, ತನ್ನ 94ನೆಯ ವರ್ಷದಲ್ಲಿ ನಡೆದಿರುವ ಮುಕ್ತದಳ, ಬೆಂಗಳೂರು, ಮಲ್ಲೇಶ್ವರಂನ ಶ್ರೀ ಚಾಮುಂಡಿ ಸ್ಕೌಟ್ ಗ್ರೂಪ್ ಅನ್ನು, ಕರ್ನಾಟಕದ ಬೇಡನ್ ಪೊವೆಲ್ ಎಂದೇ ಪ್ರಖ್ಯಾತರಾಗಿದ್ದ ದಿ॥ ಎಂ. ಹೆಚ್. ರಾಮಚಂದ್ರರಾಯರು ಪ್ರಾರಂಭಿಸಿದರು.

ಈ ಗುಂಪಿಗೆ ತನ್ನದೇ ಆದ ಸುಸಜ್ಜಿತ ಸಭಾಭವನ, ಆಟದ ಮೈದಾನ ಎಂ.ಹೆಚ್.ಆರ್. ವಿದ್ಯಾವನ ಎಂಬ ಹೆಸರಿನ ಉದ್ಯಾನ. ಬೆಂಗಳೂರು ಉತ್ತರ ಜಿಲ್ಲೆಗೊಂದು ಭವನ ಹಾಗೂ ನಗರದ ಹೊರವಲಯದಲ್ಲಿ ಒಂದು ಶಿಬಿರ ಕೇಂದ್ರ ಇರುವುದೊಂದು

ವೈಶಿಷ್ಟ್ಯ. ಗುಂಪಿನ ಮುಂಭಾಗದ ಉತ್ತರ ದಕ್ಷಿಣವಾಗಿರುವ 1 ಕಿ.ಮೀ. ರಸ್ತೆಯನ್ನು (ವೆಸ್ಟ್ ಪಾರ್ಕ್ ರೋಡ್) ಚಾಮುಂಡಿ ಸ್ಕೌಟ್ ರಸ್ತೆ ಎಂದೇ ಹೆಸರಿಸಲಾಗಿದೆ.

1918 ಭಾರತದ ಮೊಟ್ಟ ಮೊದಲನೆಯ ಸ್ಕೌಟ್ ಮಾಸ್ಟರುಗಳ ತರಬೇತಿ ಶಿಬಿರವು ಮದ್ರಾಸ್‌ನಲ್ಲಿ ನಡೆಯಿತು. ಪ್ರಸಿದ್ಧ ಚರಿತ್ರಕಾರರಾಗಿದ್ದ ಎಫ್. ಜಿ. ಪಿಯರ್ಸ್ ಅವರು ಶಿಬಿರನಾಯಕರಾಗಿದ್ದರು. ಬಾಯ್ ಸ್ಕೌಟ್ಸ್ ಆಫ್ ಮೈಸೂರ್‌ನ ನಿರ್ದೇಶಕರಾಗಿದ್ದ ಶ್ರೀ ಸಂಜೀವ ಕಾಮತ್ ಅವರು ವಿಶೇಷ ಆಹ್ವಾನದ ಮೇರೆಗೆ ಅಧ್ಯಾಪಕವರ್ಗದಲ್ಲಿ ಇದ್ದರು.

1920 ವಿಶ್ವ ಜಾಂಬೋರಿಗಳಲ್ಲಿ ಕನ್ನಡ ಸುಗಂಧ ಹರಡಿದವರು: ಲಂಡನ್‌ನ ಆರೋಪಾರ್ಕ್, ಕೋಪನ್ ಹೆಗನ್ ಮುಂತಾದ ಕಡೆಗಳಲ್ಲಿ ನಡೆದ ಜಾಂಬೋರಿಗಳಲ್ಲಿ ಕನ್ನಡದ ಗಂಡಭೇರುಂಡ ಬಾವುಟ ಹಾರಿಸಿ, ಅಂದಿನ ನಾಡಗೀತೆ "ಕಾಯೌ ಶ್ರೀ ಗೌರೀ..." ಯನ್ನು ಹಾಡಿ; ಅಭಿನಯ ಗೀತೆ "ರಾಗಿ ಮುದ್ದೆ" ಯನ್ನು ಇಡೀ ಜಾಂಬೋರಿಯ ಸಮೂಹದಿಂದ ಹಾಡಿಸಿ ಸವಿಕನ್ನಡವನ್ನು ಮೆರೆಯಿಸಿದವರು, ಡಾ॥ ಕೆ.ಎನ್.ವಿ. ಶಾಸ್ತ್ರಿ, ಡಾ॥ ಬಾದಾಮಿ ಮುಂತಾದ ಮಹನೀಯರುಗಳು.

1921 ಬೆಂಗಳೂರು ಬಳಿಯ ನಂದಿಯಲ್ಲಿ "ಆಲ್ ಇಂಡಿಯಾ ಫಸ್ಟ್ ಏಯ್ಡ್ ಮೇಸ್" ಸ್ಪರ್ಧೆಗಳು ನಡೆದುವು.

1927 ಬಾಯ್ ಸ್ಕೌಟ್ಸ್ ಆಫ್ ಮೈಸೂರ್ ವತಿಯಿಂದ, ಸಮಗ್ರ ಭಾರತದ ಸ್ಕೌಟ್ ಚಟುವಟಿಕೆಗಳ ವಿವರವಾದ ವರದಿಯನ್ನೊಳಗೊಂಡ "ಸ್ಕೌಟ್ ಇಯರ್ ಬುಕ್" ಅನ್ನು ಪ್ರಕಟಿಸಲಾಯಿತು.

1931 ಭಾರತದ ಮೊಟ್ಟಮೊದಲನೆಯ ರೋವರ್ ವುಡ್ ಬ್ಯಾಡ್ಜ್ ಶಿಬಿರವು ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಸಾರಕ್ಕಿ ಬಂಡೆಯಲ್ಲಿ ನಡೆಯಿತು.

1937 ಆಲ್ ಇಂಡಿಯಾ ಜಾಂಬೋರಿಯು ದೆಹಲಿಯಲ್ಲಿ ನಡೆಯಿತು. ಲಾರ್ಡ್ ಮತ್ತು ಲೇಡಿ ಬೇಡನ್ ಪೊವೆಲ್ ರವರು ಆಹ್ವಾನಿತರಾಗಿ ಬಂದಿದ್ದರು. ಜಾಂಬೋರಿಯ ಬಳಿಕ ಅವರುಗಳು ಪ್ರಥಮಬಾರಿಗೆ ಬೆಂಗಳೂರಿಗೆ ಭೇಟಿ ನೀಡಿದರೆಂದು ತಾವೂ ಅವರೊಡನೆ ಸಂಭಾಷಿಸಿದುದಾಗಿಯೂ ಶ್ರೀ ಚಾಮುಂಡಿ ಸ್ಕೌಟ್ ದಳದ ರೋವರ್ ಲೀಡರ್ ಆಗಿದ್ದ ದಿ॥ ಟಿ. ರಾಜೈಂಗಾರ್ ಅವರು ಹೇಳಿದ ಸವಿ ನೆನಪು ಇನ್ನೂ ಉಳಿದಿದೆ.

1939 ದೇಶದಲ್ಲೇ ಪ್ರಪ್ರಥಮವಾಗಿ ವಿಸ್ತಾರವಾದ, ಸುಸಜ್ಜಿತವಾದ, ಶಾಶ್ವತವಾದ ಶಿಕ್ಷಣಕೇಂದ್ರವನ್ನು (ಕೇಂದ್ರ ಶಿಕ್ಷಣ ಶಿಬಿರ–ಸಿ.ಟಿ.ಸಿ.) ದೊಡ್ಡಬಳ್ಳಾಪುರದ ಬಳಿ ಸ್ಥಾಪಿಸಲಾಯಿತು. ಅದೇ ಇಂದಿನ ಡಾ॥ ಆನೀಬೆಸೆಂಟ್ ಪಾರ್ಕ್.

2ನೇ ಮಹಾಯುದ್ಧದ ಅವಧಿ. ಕಾಗದಕ್ಕಾಗಿ ಕೊರತೆ. ಮುದ್ರಣಕಾರರ ಕೊರತೆ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಂಗಕ್ಕೆ ಧುಮುಕಿದ್ದು ಭಾರತ ಕೇಂದ್ರ ಕಛೇರಿಯ ನೆರವಿಗೆ ನಿಂತದ್ದು ಕರ್ನಾಟಕ (ಅಂದಿನ ಮೈಸೂರು) ಭದ್ರಾವತಿ ಮೈಸೂರು ಪೇಪರ್ ಮಿಲ್ಸ್ ಕಾಗದ; ಮಂಗಳೂರು ವೆಸ್ಲಿಯನ್ ಮಿಷನ್ ಪ್ರೆಸ್ ಮುದ್ರಣ, ಭಾರತದ ಪ್ರಥಮ ಆವೃತ್ತಿಯಾಗಿ "ಸ್ಕೌಟಿಂಗ್ ಫಾರ್ ಬಾಯ್ಸ್ ಇನ್ ಇಂಡಿಯಾ" ಪುಸ್ತಕದ ಆಂಗ್ಲ ಪ್ರತಿಗಳ ಪ್ರಕಟಣೆ. ಮೌಲ್ಯ ಗೊತ್ತೆ? ಒಂದು ರೂಪಾಯಿಗೆ ಒಂದು ಪುಸ್ತಕ.

ಬಾಯ್ ಸ್ಕೌಟ್ಸ್ ಆಫ್ ಮೈಸೂರ್‌ನ ತುಮಕೂರು ಜಿಲ್ಲಾ ಸಮಿತಿಯ ವತಿಯಿಂದ, ಭಾರತದ ಎಲ್ಲಾ ಸ್ಕೌಟ್ ಸಂಸ್ಥೆಗಳೂ ಒಂದಾಗಿ ಬಾಳಬೇಕು ಎಂಬ ಮಹದಾಕಾಂಕ್ಷೆಯನ್ನು ಮುಂದಿಟ್ಟು, ದೇಶದ ಅಂದಿನ ಸ್ಕೌಟಿಂಗ್ ಪರಿಸ್ಥಿತಿಯನ್ನು ನಿರ್ದಾಕ್ಷಿಣ್ಯವಾಗಿ ವಿಶ್ಲೇಷಿಸಿ, ಕೂಲಂಕಷವಾಗಿ ಚರ್ಚಿಸಿ, ವಿಮರ್ಶಿಸಿ, "ಸ್ಕೌಟಿಂಗ್ ಇನ್ ಇಂಡಿಯ" ಪುಸ್ತಕವನ್ನು ಪ್ರಕಟಿಸಿ, ನಾಡಿನ ಗೌರವವನ್ನು ಬೆಳಗಿದವರು ಶ್ರೀ ಸಿ. ಸುಬ್ಬರಾವ್ ಅವರು.

1949–95 ಮೈಸೂರು ಜಯಾ ಸ್ಕೌಟ್ಸ್ ಮುಕ್ತದಳದ ಶ್ರೀ ಆರ್.ಜಿ. ಪದಕಿಯವರು ಯೂತ್ ಹಾಸ್ಟಲ್ಸ್ ಅಸೋಸಿಯೇಷನ್‌ನ ರಾಷ್ಟ್ರೀಯ ಕಾರ್ಯದರ್ಶಿಗಳಾಗಿ, ಭಾರತ್ ಸ್ಕೌಟ್ಸ್ ಗೈಡ್ಸ್‌ನ 'ಇಫ್ ಸಾಗ್' (ಮಾಜಿ ಸ್ಕೌಟ್ ಗೈಡ್ ಸೋದರತೆ)ನ ಜಂಟಿ ರಾಷ್ಟ್ರ ಕಾರ್ಯದರ್ಶಿಗಳಾಗಿದ್ದರು.

1950 ಭಾರತದ ಸ್ಕೌಟ್ ಸಂಸ್ಥೆಗಳ ಅಂತಿಮ ವಿಲೀನತಾ ಸಭೆಯು ಬೆಂಗಳೂರಿನಲ್ಲಿ ನಡೆದು, "ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್" ಸಂಸ್ಥೆಯು ಅಸ್ತಿತ್ವಕ್ಕೆ ಬಂದಿತು. ಅದೇ ವರ್ಷ ಬಾಯ್ ಸ್ಕೌಟ್ಸ್ ಆಫ್ ಮೈಸೂರ್ ಮತ್ತು 1951 ರಲ್ಲಿ ಗರ್ಲ್ ಗೈಡ್ಸ್ ಸಂಸ್ಥೆಗಳು ಅದರಲ್ಲಿ ವಿಲೀನಗೊಂಡವು.

1953–56 ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೊದಲ ನಾಲ್ಕಾರು ಹಿಮಾಲಯ ವುಡ್‌ಬ್ಯಾಡ್ಜ್ ಶಿಬಿರಗಳು, ಮೂರೂ ವಿಭಾಗಗಳಲ್ಲಿ ಡಾ॥ ಆನೀಬೆಸೆಂಟ್ ಪಾರ್ಕ್‌ನಲ್ಲಿ ನಡೆದವು.

"ಹಿಮಾಲಯ ವುಡ್‌ಬ್ಯಾಡ್ಜ್" ಯೋಜನೆ ಅಸ್ತಿತ್ವಕ್ಕೆ ಬಂದ ಮೇಲೆ ಅದರ ನಂ. 1 ಪ್ರಮಾಣಪತ್ರವನ್ನು ಪಡೆದ ಸ್ಕೌಟರು, ಕರ್ನಾಟಕದವರು ಈ ಪುಸ್ತಕದ ಲೇಖಕರು.

1956 ಭಾಷಾವಾರು ಪ್ರಾಂತ್ಯ ರಚನೆಯಾದಾಗ "ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್" ಆಗಿ ನಾಮಾಂತರವಾಯಿತು. ಮೈಸೂರು ರಾಜ್ಯವು ಕರ್ನಾಟಕ ರಾಜ್ಯವಾಗಿ ಕನ್ನಡನಾಡಿನ ಇತರ ರಾಜ್ಯಗಳ ಭಾಗಗಳು ಅದರೊಡನೆಯ ವಿಲೀನವಾದಂತೆ, ಸಂಸ್ಥೆಯ ಕಾರ್ಯ ವ್ಯಾಪ್ತಿಯೂ ವಿಶಾಲಗೊಂಡಿತು.

ಈಗಲೂ ಸಹ ರಾಜ್ಯವು ತನ್ನ ದಕ್ಷತೆಯ ವೈಶಿಷ್ಟ್ಯತೆಯನ್ನು ಕಾಪಾಡಿಕೊಂಡು ಬೆಳೆಯುತ್ತಲೇ ಬಂದಿದೆ.

1960 ಲೇಡಿ ಬೇಡನ್ ಪೊವೆಲ್ ಅವರು ತಮ್ಮ ಇಳಿವಯಸ್ಸನ್ನೂ ಲೆಕ್ಕಿಸದೆ, ಬೆಂಗಳೂರಿನ ಬಾಪೂಜಿ ನಗರ (ಇಂದಿನ ಸದಾಶಿವ ನಗರ)ದಲ್ಲಿ ನಡೆದ ಮೂರನೆಯ ರಾಷ್ಟ್ರಿಯ ಜಾಂಬೋರಿಯಲ್ಲಿ ಭಾಗವಹಿಸಿ ದರು.

1964 ರಾಜ್ಯದ ರಾಜ್ಯ ಆಯುಕ್ತ (ಸ್ಕೌಟ್ಸ್) ಆಗಿದ್ದ ಕರ್ನಲ್ ವಿ.ಕೆ. ಸುಂದರಂ ಅವರು ಪಚಮಡಿಯಲ್ಲಿ ರಾಷ್ಟ್ರೀಯ ಶಿಕ್ಷಣ ಕಮಿಷನರ್ ಆಗಿ ಸೇವೆ ಸಲ್ಲಿಸಿದರು.

1966 ಪಚಮಢಿಯಲ್ಲಿ ರಾಷ್ಟ್ರೀಯ ಶಿಕ್ಷಣ ಆಯುಕ್ತರು ಆಗಿದ್ದ ಶ್ರೀ ಟಿ.ವಿ. ನೀಲಕಂಠಂ ಅವರು ರಾಜ್ಯದ ಸಂಘಟನಾ ಆಯುಕ್ತರಾಗಿ ಕೆಲಸ ಮಾಡಿದರು.

1965–70 ದೇಶದಲ್ಲೇ ಅತಿ ಸುಂದರವಾದ ಸ್ಕೌಟ್–ಗೈಡ್ ಕೇಂದ್ರವೆನಿಸಿದ, ವಿಶಾಲವಾದ, ಸುಸಜ್ಜಿತವಾದ, ಗುಡ್ಡಗಾಡು, ಸರೋವರಗಳಿಂದ ಕೂಡಿದ ರಮ್ಯ ಪ್ರದೇಶವಾದ, ಶಿಬಿರ ಕೇಂದ್ರವನ್ನು ತಮ್ಮ ಹುಟ್ಟೂರು ಕೊಂಡಜ್ಜಿಯಲ್ಲಿ, ನಮ್ಮ ಪ್ರಧಾನ ಆಯುಕ್ತರಾಗಿದ್ದ ದಿ॥ ಕೊಂಡಜ್ಜಿ ಬಸಪ್ಪನವರು ಸ್ಥಾಪಿಸಿದರು.

ನಮ್ಮ ಪ್ರಧಾನ ಆಯುಕ್ತರಾಗಿದ್ದ ದಿ॥ ಪ್ರೊ॥ ಶಿವಶಂಕರ್ ಅವರು ರಾಷ್ಟ್ರೀಯ ಸ್ತರದಲ್ಲಿ ಚೀಫ್ ಕಮಿಷನರ್ (ಸ್ಕೌಟ್ಸ್) ಆಗಿದ್ದರು.

1986 10ನೆಯ ರಾಷ್ಟ್ರೀಯ ಜಾಂಬೋರಿಯು ವಿಶಾಲವೂ, ರಮ್ಯವೂ ಆದ ಬೆಂಗಳೂರು ಅರಮನೆ ಆವರಣದಲ್ಲಿ ನಡೆಯಿತು. ಅಂದಿನ ಪ್ರಧಾನಿ ದಿ॥ ರಾಜೀವ್ ಗಾಂಧಿಯವರು ಜಾಂಬೋರಿಯ ಕಾರ್ಯಕಲಾಪಗಳನ್ನು ವೀಕ್ಷಿಸಿ ಸಂಸ್ಥೆಯ ಕಾರ್ಯಕ್ರಮಗಳನ್ನೂ ಧ್ಯೇಯೋದ್ದೇಶಗಳನ್ನು ಅರಿತವರಾಗಿ, ಸಂಸ್ಥೆಯ ಏಳಿಗೆಗಾಗಿ ಕೇಂದ್ರ

ಸರ್ಕಾರದ ವತಿಯಿಂದ ಒಂದುಕೋಟಿ ರೂಪಾಯಿಗಳ ಅನುದಾನ (ಆರ್ಥಿಕ ಸವಲತ್ತು) ನೀಡಿದರು. ಇದರಿಂದ ಸಂಸ್ಥೆಯ ಪುರೋಭಿವೃದ್ಧಿಗೆ ನಾಂದಿ ಹಾಡಿದರು.

1992 ರಾಜ್ಯದ ಪ್ರಧಾನ ಆಯುಕ್ತರಾಗಿ, ರಾಜ್ಯದಲ್ಲಿ ನಡೆದ ಎರಡು ಜಾಂಬೋರೀಗಳಿಗೆ ಸ್ಫೂರ್ತಿದಾಯಕರಾದ ದಿ॥ ದೀನದಯಾಳು ನಾಯ್ದುರವರು ಭಾರತದಲ್ಲಿ ಸಂಸ್ಥೆಯ ಸರ್ವೋಚ್ಚ ಪದವಿಯಾದ "ನ್ಯಾಷನಲ್ ಕಮಿಷನರ್" ಪದವಿಯನ್ನು ಅಲಂಕರಿಸಿದ್ದರು.

1987–94 ನಮ್ಮ ರಾಜ್ಯ ಆಯುಕ್ತ (ಸ್ಕೌಟ್ಸ್) ಆದ ಶ್ರೀ ಟಿ.ಎಸ್. ಲೂಕಾಸ್ ರವರು ದಕ್ಷಿಣ ಪ್ರಾದೇಶಿಕ ಕಛೇರಿಯ ಸಹಾಯಕ ನಿರ್ದೇಶಕರಾಗಿ, ರಾಷ್ಟ್ರ ಪ್ರಶಿಕ್ಷಣ ಕೇಂದ್ರ ಪಚಮಢಿಯಲ್ಲಿ ಉಪ ಆಯುಕ್ತರು (ಲೀಡರ್ ಟ್ರೈನಿಂಗ್) ಆಗಿ ರಾಷ್ಟ್ರ ಕಛೇರಿಯಲ್ಲಿ ಜಂಟಿ ನಿರ್ದೇಶಕರು (ಸ್ಕೌಟ್ಸ್) ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರಾಗಿ ಕೆಲಸ ಮಾಡಿರುತ್ತಾರೆ.

1989–1995 ರಾಜ್ಯ ಮಾಸಪತ್ರಿಕೆ ಉಪಸಂಪಾದಕರಾದ ಶ್ರೀ ಚಂದ್ರಶೇಖರನ್ ಅವರು ಪಚಮಢಿಯ ರಾಷ್ಟ್ರ ಪ್ರಶಿಕ್ಷಣ ಕೇಂದ್ರದ ಕ್ಷೇತ್ರಪಾಲರಾಗಿ. ಅಲಹಾಬಾದ್‌ನಲ್ಲಿ ಪಶ್ಚಿಮ ಪ್ರಾದೇಶಿಕ ಸಂಘಟನಾಧಿಕಾರಿಯಾಗಿ, ಪಾಟ್ನಾದ ಪೂರ್ವ ಪ್ರಾದೇಶಿಕ ಕಛೇರಿಯ ಸಹಾಯಕ ನಿರ್ದೇಶಕರಾಗಿ, ರಾಷ್ಟ್ರ ಕಛೇರಿಯ ಪ್ರಕಟನಾ ವಿಭಾಗದಲ್ಲಿ ಸಹಾಯಕರಾಗಿ ಸೇವೆ ಸಲ್ಲಿಸಿರುತ್ತಾರೆ.

ರಾಜ್ಯ ಸಂಘಟನಾಧಿಕಾರಿ (ಸ್ಕೌಟ್ಸ್) ಆಗಿದ್ದ ಶ್ರೀ ಆದಿಕೇಶವುಲು ಅವರು ರಾಷ್ಟ್ರಕಛೇರಿಯ ಕಾರ್ಯ ನಿರ್ವಾಹಕ ನಿರ್ದೇಶಕರಾಗಿ ಕೆಲಸ ಮಾಡಿದರು.

2000 ಈಚೆಗೆ ರಾಜ್ಯ ಸಂಘಟನಾ ಆಯುಕ್ತೆ (ಗೈಡ್ಸ್) ಕು॥ ಸರೋಜರವರು, ಕೇಂದ್ರ ಕಛೇರಿ, ದೆಹಲಿಯಲ್ಲಿ ಜಂಟಿ ನಿರ್ದೇಶಕರು (ಗೈಡ್ಸ್) ಆಗಿ ಕೆಲಕಾಲ ನಿರ್ದೇಶಕರಾಗಿ ಕೆಲಸ ನಿರ್ವಹಿಸಿರುತ್ತಾರೆ.

ರಾಷ್ಟ್ರಪತಿ ಸ್ಕೌಟ್ ಆಗಿ ಮೆರೆದ, ರಾಜ್ಯ ಗೈಡ್ ಆಯುಕ್ತೆ ಶ್ರೀಮತಿ ಜಾನಕಿ ವೇಣುಗೋಪಾಲ್ ಅವರ ಮಗ ಶ್ರೀ ಶ್ರೀನಾಥ್ ಅವರು, ವೋಸಂ, ಕಛೇರಿ ಜಿನೀವಾದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ರಾಜ್ಯ ಕಾರ್ಯದರ್ಶಿಗಳಾಗಿರುವ ಶ್ರೀ ಎಂ.ಎ. ಖಾಲಿದ್ ರವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಏಷಿಯಾ ಫೆಸಿಪಿಕ್ ಪ್ರಾದೇಶಿಕ ಕಛೇರಿಯಲ್ಲಿ ಕನ್ಸಲ್‌ಟೆಂಟ್ ಆಗಿ, 2012 ಎ.ಪಿ.ಆರ್. ಅತ್ಯುನ್ನತ ಪ್ರಶಸ್ತಿ ದೊರಕಿರುವುದು ಪ್ರಶಂಸನೀಯ ವಿಷಯ.

2003 ಬೆಸಂಟ್ ಪಾರ್ಕ್‌ನಲ್ಲಿ 22 ರಾಷ್ಟ್ರಗಳಿಂದ 400ಕ್ಕೂ ಹೆಚ್ಚು ಜನರು ಪ್ರತಿನಿಧಿಸಿದ್ದ ಎಪಿಆರ್ ಯೂತ್ ಫೋರಂ ನಡೆಯಿತು.

2007 ಬ್ರೌನ್‌ಸೀ ದ್ವೀಪ ಶಿಬಿರದ ಶತಮಾನ ಸ್ಮರಣ-ಅಣುಕು ಶಿಬಿರ, ಮಂಗಳೂರು ಬಳಿ.

2009 ರಾಷ್ಟ್ರಮಟ್ಟದ ರಾಜ್ಯ ಪ್ರಧಾನ ಆಯುಕ್ತರುಗಳು, ಆಯುಕ್ತರುಗಳು ಮತ್ತು ಕಾರ್ಯದರ್ಶಿಗಳ ರಾಷ್ಟ್ರೀಯ ಸಮ್ಮೇಳನವು ಬೆಂಗಳೂರಿನಲ್ಲಿ ನಡೆಯಿತು.

2010-13 ATAS ಸಮ್ಮೇಳನ

APR ಪ್ರಾದೇಶಿಕ ಸಮ್ಮೇಳನ

26ನೆಯ ರಾಜ್ಯಮಟ್ಟದ ಸ್ಕೌಟ್-ಗೈಡ್ ಜಾಂಬೋರೇಟ್

ಈ ಹೆಗ್ಗಳಿಕೆಯು, ರಾಜ್ಯದ ಸಾಧನೆಯ ಔನ್ನತ್ಯವನ್ನು, ರಾಷ್ಟ್ರೀಯ ಅಂತರಾಷ್ಟ್ರೀಯ ನೀಲಾಕಾಶದಲ್ಲಿ ಬೆಳಗುತ್ತಿದೆ.

ಸ್ಮರಣೆ : ತಮ್ಮ ಧೀಮಂತ ವ್ಯಕ್ತಿತ್ವ, ಸರಳ ಜೀವನ, ಆದರ್ಶಯುತ ಬಾಳ್ವೆ ಹಾಗೂ ಉನ್ನತ ಮಟ್ಟದ ನಾಯಕತ್ವಗಳಿಂದ ಸಂಸ್ಥೆಯನ್ನು ಭದ್ರ ಬುನಾದಿಯ ಮೇಲೆ ಕಟ್ಟಿ ಬೆಳೆಸಿದ

ಜಸ್ಟೀಸ್ ಕೆ. ಶಂಕರನಾರಾಯಣರಾವ್	ಶ್ರೀರಾಮಾಚಾರ್
ಮೇಜರ್ ವೈ.ವಿ.ಕೆ. ಮೂರ್ತಿ	ಡಾ॥ ಗಿರಿಧರರಾವ್
ಪ್ರೊ॥ ಪಿ. ಶಿವಶಂಕರ್	ಶ್ರೀ ಸಂಜೀವಕಾಮತ್
ಡಾ॥ ಕೆ.ಎನ್.ವಿ. ಶಾಸ್ತ್ರಿ	
ಶ್ರೀ ಬಿ.ಸಿ. ನಂಜುಂಡಯ್ಯ	ಶ್ರೀ ಸಿ. ಸುಬ್ಬರಾವ್
ಶ್ರೀ ಬಿ.ಟಿ. ಚಾರ್	ಶ್ರೀ ಕೆ. ಶ್ರೀಕಂಠಯ್ಯ
ಶ್ರೀ ವಿ.ಪಿ. ದಿನದಯಾಳು ನಾಯ್ಡು	ಶ್ರೀ ಮೀರ್ ಇಕ್ಬಾಲ್ ಹುಸೇನ್
ಶ್ರೀ ಕೊಂಡಜ್ಜಿ ಬಸಪ್ಪ	ಡಾ॥ ಎಸ್.ಬಿ. ಕೌಶಿಕ್

ಇವರುಗಳೇ ಮುಂತಾದ ಅನೇಕ ಮಹನೀಯರುಗಳು, ಕನ್ನಡ ನೆಲಕ್ಕೆ ಮಾತ್ರ ಸೀಮಿತವಾಗದೆ, ರಾಷ್ಟ್ರಮಟ್ಟದಲ್ಲೂ, ಅಂತಾರಾಷ್ಟ್ರೀಯ ಮಟ್ಟದಲ್ಲೂ ಖ್ಯಾತಿಗಳಿಸಿ, ನಾಡಿಗೆ ಅಪಾರವಾದ ಗೌರವವನ್ನು ತಂದಿರುತ್ತಾರೆ.

ಸ್ಕೌಟರುಗಳ ತರಬೇತಿ

ಬಾಲಕರಿಗೆ ತರಬೇತಿ ನೀಡಲು ಅಥವಾ ತರಬೇತಿ ನೀಡುವವರಿಗೆ ಸಹಾಯ ಮಾಡಲು ಸ್ಕೌಟರುಗಳಾಗಲಿರುವವರು (ಕಬ್ ಮಾಸ್ಟರು, ಸಹಾಯಕ ಕಬ್ ಮಾಸ್ಟರು; ಸ್ಕೌಟ್ ಮಾಸ್ಟರು, ಸಹಾಯಕ ಸ್ಕೌಟ್ ಮಾಸ್ಟರು; ರೋವರ್ ಲೀಡರು, ಸಹಾಯಕ ರೋವರ್ ಲೀಡರು) ಮತ್ತು ಇತರೇ ಪದಾಧಿಕಾರಿಗಳು ಮತ್ತು ಯುವಕರು, ಈ ತರಬೇತಿಯನ್ನು ಪಡೆಯಬೇಕಾಗುತ್ತದೆ.

ಸ್ಕೌಟರುಗಳ ತರಬೇತಿಯು ನಾಲ್ಕು ಹಂತಗಳಲ್ಲಿ ನಡೆಯುತ್ತದೆ

ಹಂತ 1 : **ಪರಿಚಯ ಶಿಬಿರ** – ಅವಧಿ 8 ಗಂಟೆಗಳು (1 ದಿನ) ಸ್ಕೌಟಿಂಗ್ ಬಗ್ಗೆ ಕುತೂಹಲವಿರುವ ಯಾರಾದರೂ ಈ ಶಿಬಿರದಲ್ಲಿ ಭಾಗವಹಿಸ ಬಹುದು. ತರಬೇತಿ ನೀಡುವ ಸ್ಥಳ; ತರಬೇತಿ ಪಡೆಯುವವರ ಸಂಖ್ಯೆ ಇವುಗಳ ಬಗ್ಗೆ ಯಾವುದೇ ನಿರ್ದಿಷ್ಟತೆ ಇರುವುದಿಲ್ಲ. ಮಾಹಿತಿ ಪಡೆದ ಬಳಿಕ, ಭಾಗವಹಿಸಿದವರು ತಾವು ಪಡೆದ ತರಬೇತಿಯನ್ನು ಸದುಪಯೋಗ ಮಾಡಿಕೊಳ್ಳುವ ಬಗ್ಗೆ ಚಿಂತಿಸಿ ನಿರ್ಧರಿಸಲು ಸಹಾಯವಾಗುತ್ತದೆ.

ಹಂತ 2 : **ಮೂಲ ತರಬೇತಿ ಶಿಬಿರ** – ಅವಧಿ7 ದಿನಗಳು, ವಸತಿ ಸಹಿತ ವಾದುದು. ಘಟಕವನ್ನು ಪ್ರಾರಂಭಿಸಿ ನಡೆಸಿಕೊಂಡು ಹೋಗುವ ಬಗ್ಗೆ ಮಾಹಿತಿ ಸಿಗುತ್ತದೆ. ಮರಿಗಳ ವಿಭಾಗದಲ್ಲಿ ದ್ವಿತೀಯ ಚರಣ್ ವರೆಗೆ; ಸ್ಕೌಟ್ ವಿಭಾಗದಲ್ಲಿ ದ್ವಿತೀಯಸೋಪಾನ್‌ವರೆಗೆ; ರೋವರ್ ವಿಭಾಗದಲ್ಲಿ ಪ್ರವೀಣ್ ವರೆಗೆ ತಿಳಿದಿರಬೇಕಾದ ವಿಷಯಗಳು ಹಾಗೂ ಕೌಶಲಗಳ ಬಗ್ಗೆ ಪ್ರಾಯೋಗಿಕವಾಗಿ ಕಲಿಸಲಾಗುತ್ತದೆ.

ಹಂತ 3 : **ಮುಂದುವರಿದ ತರಬೇತಿ ಶಿಬಿರ** – ಮೂಲ ತರಬೇತಿ ಪಡೆದ ಬಳಿಕ, ಒಂದು ವರ್ಷಕಾಲ ಕ್ರಿಯಾತ್ಮಕವಾಗಿ ದಳವನ್ನು ನಡೆಸಿರಬೇಕು/ ನಡೆಸಲು ಸಹಾಯಕರಾಗಿರಬೇಕು. ಕನಿಷ್ಠ ಆರು ತಿಂಗಳ ಅನುಭವ ಪಡೆದ ಬಳಿಕ ಈ ಶಿಬಿರಕ್ಕೆ ಬರಬಹುದು. ಈ ಶಿಬಿರದ ಅವಧಿ ಸಹ 7 ದಿನಗಳು. ವಸತಿ ಸಹಿತವಾದುದು. (ಸನಿವಾಸ ಶಿಬಿರ). ಘಟಕವನ್ನು ನಡೆಸಿಕೊಂಡು ಹೋಗುವ ಬಗ್ಗೆ ಮತ್ತಷ್ಟು ಮಾಹಿತಿ ಸಿಗುತ್ತದೆ. ಪ್ರಾಯೋಗಿಕ ತರಬೇತಿಗೆ

ಹೆಚ್ಚು ಪ್ರಾಧಾನ್ಯತೆ ನೀಡಲಾಗುತ್ತದೆ. ಈ ವರೆಗೆ ಕಲಿತ ವಿಷಯಗಳು, ಕೌಶಲಗಳ ಪುನರಾವರ್ತನೆ ಜೊತೆಗೆ ಮರಿಗಳ ವಿಭಾಗದಲ್ಲಿ ತೃತೀಯ ಚರಣ್; ಸ್ಕೌಟ್ ವಿಭಾಗದಲ್ಲಿ ತೃತೀಯ ಸೋಪಾನ್; ರೋವರ್ ವಿಭಾಗದಲ್ಲಿ ನಿಪುಣ್ ವರೆಗೆ ಪ್ರಾಯೋಗಿಕವಾಗಿ ಕೌಶಲಗಳನ್ನು ಕಲಿಸಲಾಗುತ್ತದೆ.

ಹಂತ 4 : **ಹಿಮಾಲಯ ವುಡ್ ಬ್ಯಾಡ್ಜ್ ಶಿಬಿರ** – ಮುಂದುವರೆದ ತರಬೇತಿ ಪಡೆದ ಬಳಿಕ ಒಂದು ವರ್ಷಕಾಲ ಕ್ರಿಯಾತ್ಮಕವಾಗಿ ಘಟಕವನ್ನು ಮುನ್ನಡೆಸಿರಬೇಕು. ಈ ರೀತಿ ಕನಿಷ್ಠ ಆರು ತಿಂಗಳುಗಳ ಅನುಭವ ಪಡೆದ ಬಳಿಕ ಅಧ್ಯಯನ ಮತ್ತು ಪ್ರಯೋಗ ಆಧಾರಿತ ಪ್ರಶ್ನಮಾಲೆಗೆ ಉತ್ತರಿಸಿ, ಪ್ರಮಾಣ ಪತ್ರ ಪಡೆದಿರಬೇಕು. ಈ ಶಿಬಿರವು 8 ದಿನಗಳ ವಸತಿ ಸಹಿತವಾದ ಶಿಬಿರ. ಯಾವುದೇ ವಿಷಯದಲ್ಲಿ ಪ್ರಾವೀಣ್ಯತೆಯ ಬಗ್ಗೆ ಹೆಚ್ಚು ಗಮನ ಕೊಡಲಾಗುತ್ತದೆ; ಪ್ರಾಯೋಗಿಕ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಲಾಗುತ್ತದೆ; ಗುಣಮಟ್ಟದ ಬಗ್ಗೆ ಒತ್ತಿ ಹೇಳಲಾಗುತ್ತದೆ. ಮರಿಗಳ ವಿಭಾಗದಲ್ಲಿ ಚತುರ್ಥ ಚರಣ್, ಸ್ಕೌಟ್ ಮತ್ತು ರೋವರ್ ವಿಭಾಗಗಳಲ್ಲಿ ರಾಷ್ಟ್ರಪತಿ ಪ್ರಶಸ್ತಿ ವರೆಗೆ, ಅವಶ್ಯಕವಾದ ಮಾಹಿತಿ ಮತ್ತು ಕೌಶಲಗಳನ್ನು ಪ್ರಾಯೋಗಿಕವಾಗಿ ಹೇಳಿಕೊಡಲಾಗುತ್ತದೆ.

ಹಿಮಾಲಯ ವುಡ್ ಬ್ಯಾಡ್ಜ್ (ವೃಕ್ಷಮಣಿಗಳು) ಶಿಬಿರದಲ್ಲಿ ಭಾಗವಹಿಸಲು ಬಯಸುವ ಸ್ಕೌಟ್ ಮಾಸ್ಟರುಗಳು, ಪ್ರಧಾನ ಮಂತ್ರಿ ಪಾರಿತೋಷಕ ಸ್ಪರ್ಧೆಗಾಗಿ ತಮ್ಮ ದಳವನ್ನು ನೋಂದಾಯಿಸಿರಬೇಕು. ಇದೇ ರೀತಿಯಲ್ಲಿ ಮರಿಗಳು, ರೋವರ್ ವಿಭಾಗಗಳಲ್ಲೂ ನಿರ್ಬಂಧವಿದ್ದು ಭಾಗವಹಿಸಲಿಚ್ಛಿಸುವ ಸ್ಕೌಟರ್ಗಳು ಅದನ್ನು ತಿಳಿದು ಪೂರೈಸಬೇಕಾಗುತ್ತದೆ.



The Wood - badge and the Pachmarhi Scraf
ವೃಕ್ಷಮಣಿಗಳೂ, ಪಚಮಢಿ ಕಂಠವಸ್ತ್ರವೂ

"ವೃಕ್ಷಮಣಿಧಾರಿ"ಗಳೆಂದರೆ ತಮ್ಮ ವಿಭಾಗದಲ್ಲಿ ನುರಿತ ಅನುಭವೀ ವ್ಯಕ್ತಿಗಳೆಂದೂ, ಗುಣಮಟ್ಟ ಮತ್ತು ಗೋಪ್ಯತೆಗಳನ್ನು ಕಾಪಾಡುವವರೆಂದೂ; ಬಾಲಕರಿಗೆ ಶಿಕ್ಷಣ ನೀಡುವುದರಲ್ಲಿ ಗರಿಮೆಯ ವ್ಯಕ್ತಿಗಳೆಂದೂ ಹೇಳುವುದು ವಾಡಿಕೆ. ಈ ಹೇಳಿಕೆಯನ್ನು ಸಮರ್ಥಿಸುವ ಶಿಕ್ಷಣವು ಹಿ.ವೃ. ಮಣಿಗಳ ತರಬೇತಿ ಶಿಬಿರದಲ್ಲಿ ಸಿಗುತ್ತದೆ. ಉತ್ತಮನಾದ ಸ್ಕೌಟರ್ ಆಗಬೇಕಾದರೆ, "ವೃಕ್ಷಮಣಿ"ಗಳನ್ನು ಅವಶ್ಯಕವಾಗಿ ಸಂಪಾದಿಸಬೇಕು.

"ವೃಕ್ಷಮಣಿ"ಗಳನ್ನು ಪಡೆದ ಬಳಿಕ, ಸ್ಕೌಟಿಂಗ್‌ನಲ್ಲಿ ಮತ್ತಷ್ಟು ಪರಿಣಿತರಾಗಿ, ಅನುಭವ ಪಡೆದು, ಶ್ರದ್ಧಾಸಕ್ತಿಗಳಿಂದ ಇನ್ನೂ ಹೆಚ್ಚಿನ ಸೇವೆ ಸಲ್ಲಿಸಲು ಬಯಸುವಿರಾದರೆ, ಇತರ ಶಿಕ್ಷಕರುಗಳಿಗೆ ತರಬೇತಿ ನೀಡುವ ಕಾರ್ಯಕ್ಕೆ ಸನ್ನದ್ಧರಾಗಬಹುದು. ಆ ಕ್ಷೇತ್ರದಲ್ಲಿ, ರಾಷ್ಟ್ರ ಪ್ರಶಿಕ್ಷಣ ಕೇಂದ್ರ, ಪಚಮಢಿಯಲ್ಲಿ ಸೂಕ್ತ ತರಬೇತಿ ಪಡೆದು (ALT) ಸಹಾಯಕ ನಾಯಕ ತರಬೇತುದಾರರಾಗಬಹುದು. ALT ತರಬೇತಿ ಪಡೆಯುವ ಮುನ್ನ pre ALT ಶಿಬಿರದಲ್ಲಿ ಭಾಗವಹಿಸಿ ಪ್ರಮಾಣ ಪತ್ರ ಪಡೆಯಬೇಕು.

ಸಹಾಯಕ ನಾಯಕ ತರಬೇತುದಾರರು ಮೂಲ ತರಬೇತಿ ಮತ್ತು ಮುಂದುವರೆದ ತರಬೇತಿ ನೀಡಲು ಅರ್ಹರು. ಸಹಾಯಕ ನಾಯಕ ತರಬೇತುದಾರರು. ಎರಡು ವೃಕ್ಷಮಣಿಗಳ ಬದಲು ಮೂರು ವೃಕ್ಷಮಣಿಗಳನ್ನು ಧರಿಸಲರ್ಹರು. ಮತ್ತೂ ಮುಂದುವರೆಯ ಬಯಸುವಿ ರಾದರೆ ಮತ್ತೆ ಇನ್ನೂ ಹೆಚ್ಚಿನ ತರಬೇತಿ ಪಡೆದು (LT) ನಾಯಕ ತರಬೇತುದಾರರಾಗಬಹುದು. ನಾಯಕ ತರಬೇತುದಾರರು ನಾಲ್ಕು ವೃಕ್ಷಮಣಿಗಳನ್ನು ಧರಿಸಲರ್ಹರು. ನಾಯಕ ತರಬೇತುದಾರರು ಹಿಮಾಲಯ ವೃಕ್ಷಮಣಿ ತರಬೇತಿಯೂ ಸೇರಿದಂತೆ ಯಾವುದೇ ತರಬೇತಿ ಶಿಬಿರ ನಡೆಸಲರ್ಹರು.

ಹಿಮಾಲಯಾ ವೃಕ್ಷಮಣಿಧಾರಕರಾಗಿ ಸತತವಾಗಿ 25 ವರ್ಷಗಳಿಗೂ ಮೇಲ್ಪಟ್ಟು ಸೇವೆ ಸಲ್ಲಿಸಿದವರಿಗೆ "ಸ್ವರ್ಣಮಣಿ"ಗಳ ಮೆಚ್ಚುಗೆ ದೊರಕಬಹುದು.

ತರಬೇತುದಾರರಾಗಿ ನಾವೆಷ್ಟು ಆಳವಾದ ಅಧ್ಯಯನ ನಡೆಸುತ್ತೇವೆ, ಪ್ರಾಯೋಗಿಕ ಕೆಲಸ ಮಾಡುತ್ತೇವೆ, ಅಷ್ಟೂ ಉತ್ತಮ ರೀತಿಯ ಪ್ರತಿಫಲ ಸಿಗುತ್ತದೆ.

ಬೇರುಗಳು ಹೇಗೆ ಆಳವಾಗಿ ಭೂಮಿಯನ್ನು ಒಳಹೊಕ್ಕು ಸಾರವನ್ನೆಳೆದು ಮರದ ಮೇಲಿನ ಹಣ್ಣುಗಳಿಗೆ ರವಾನಿಸಿ ಆ ಫಲವನ್ನು ರುಚಿಕರವಾಗಿಸುತ್ತವೆಯೋ ಹಾಗೆ ನಮ್ಮ ಆಳವಾದ ಅಧ್ಯಯನ, ಮನನ, ಆಚರಣೆಗಳು ನಮ್ಮ ಕೆಲಸದಲ್ಲಿ ಪ್ರತಿಫಲಿಸುತ್ತವೆ. ನಾವು ಬಾಲಕರಿಗೆ ನೀಡುವ ಶಿಕ್ಷಣದ ಪ್ರಭಾವದಿಂದ, "ಉತ್ತಮ ನಾಗರೀಕ" ರೆಂಬ ಫಲವನ್ನು ನಾವು ಸಮಾಜಕ್ಕೆ ನೀಡಲು ಸಾಧ್ಯವಾಗುತ್ತದೆ.

> **ಬೆಳಕಿನಡೆಗೆ ಪಯಣ; ಉನ್ನತಿಯ ಹಾದಿ; ಜ್ಞಾನವಿತರಣೆ;**
> **ಆದರ್ಶ ಜೀವನ ಇದುವೆ ವೃಕ್ಷಮಣಿಧಾರಕನ ಗುರಿ,**
> **ಗುರಿಸಾಧನೆಯಲ್ಲಿಯೇ ಅವನ ಜೀವನ ಪಾವನ.**

ಸಂಸ್ಥೆಯ ವ್ಯವಸ್ಥಿತ ರಚನೆ

ಯಾವುದೇ ಒಂದು ಸಂಸ್ಥೆಯು ಕ್ರಿಯಾಶೀಲವಾಗಿ ಕೆಲಸಕಾರ್ಯಗಳನ್ನು ನಡೆಸಿಕೊಂಡು ಹೋಗಬೇಕಾದರೆ ಅದರ ಆಡಳಿತಾಂಗವೂ, ಕಾರ್ಯಾಂಗವೂ ಬಲವಾಗಿರಬೇಕು. ಅದರಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರೂ ನಿಷ್ಠೆಯಿಂದಲೂ, ಪ್ರಾಮಾಣಿಕತೆಯಿಂದಲೂ, ಅರ್ಪಣಾ ಮನೋಭಾವದಿಂದಲೂ ಕೆಲಸ ಮಾಡಬೇಕಾಗುತ್ತದೆ. ಸ್ಕೌಟ್ ಸಂಸ್ಥೆಯು ಈಗ್ಗೆ 100 ವರ್ಷಗಳಿಗೂ ಮೀರಿ ಕ್ರಿಯಾಶೀಲವಾಗಿ ಕೆಲಸ ಮಾಡುತ್ತಾ, ಬೆಳೆಯುತ್ತಾ ಬಂದಿದೆಯೆಂದರೆ, ಸಂಸ್ಥೆಯ ವಿಷಯದಲ್ಲಿ ಮೇಲೆ ಹೇಳಿದ ಅಂಶಗಳು ತಾವಾಗಿ ಸ್ಫುಟವಾಗುತ್ತದೆ.

ಈ ಸಂಸ್ಥೆಯ ವಿವಿಧ ಸ್ತರಗಳಲ್ಲಿನ ವ್ಯವಸ್ಥೆಯನ್ನು ಸ್ಥೂಲವಾಗಿ ಪರಿಶೀಲಿಸೋಣ:

ಅಂತಾರಾಷ್ಟ್ರೀಯ

ಎಲ್ಲಾ ಸದಸ್ಯರಾಷ್ಟ್ರಗಳೂ, ಸಮಾನಸ್ತರದಲ್ಲಿ ಪ್ರತಿನಿಧಿತವಾಗಿರುವ ಮಹಾ ಸಭೆ ಇರುತ್ತದೆ. ಇದನ್ನು "ವಿಶ್ವ ಸಮಾವೇಶ" (ವರ್ಲ್ಡ್ ಕಾನ್‌ಫರೆನ್ಸ್) ಎನ್ನುತ್ತಾರೆ. ಇದು ಮೂರು ವರ್ಷಕ್ಕೊಮ್ಮೆ ಸಭೆ ಸೇರುತ್ತದೆ. ಇದು ಸರ್ವಸದಸ್ಯರ ಸಭೆ ಇದ್ದಂತೆ.

ಈ ಸದಸ್ಯರುಗಳ ಪೈಕಿ 12 ಜನರನ್ನುಳ್ಳ ಒಂದು ಸಮಿತಿ ರಚಿಸುತ್ತಾರೆ. ಇದನ್ನು 'ವಿಶ್ವಸಮಿತಿ' (ವರ್ಲ್ಡ್ ಕಮಿಟಿ) ಎನ್ನುತ್ತಾರೆ. ಇದು ಮೂರು ವರ್ಷಕ್ಕೊಮ್ಮೆ ಸಭೆ ಸೇರಿ ಕಾರ್ಯ ಕಲಾಪಗಳನ್ನು ನಡೆಸುತ್ತದೆ. ಇದು ಕಾರ್ಯಕಾರೀ ಸಮಿತಿ ಇದ್ದಂತೆ. ಈ ಸಮಿತಿಯ 1/3 ಭಾಗ ಸದಸ್ಯರು 3 ವರ್ಷಕ್ಕೊಮ್ಮೆ ನಿವೃತ್ತಿ ಹೊಂದುತ್ತಾರೆ. ಮತ್ತು ಆ ಜಾಗಕ್ಕೆ ಹೊಸಬರು ಆಯ್ಕೆಯಾಗುತ್ತಾರೆ. ವಿವಿಧ ಕಾರ್ಯಕ್ರಮಗಳ ಬಗ್ಗೆ ಉಪಸಮಿತಿಗಳಿರುತ್ತವೆ.

"ವಿಶ್ವ ಸಮಿತಿ" ಮತ್ತು "ವಿಶ್ವ ಸಮಾವೇಶ"ಗಳಲ್ಲಿ ತೆಗೆದುಕೊಂಡ ತೀರ್ಮಾನ ಗಳನ್ನು ಕಾರ್ಯಗತಮಾಡಲು, ವಿಶ್ವ ಆಡಳಿತ ಕಛೇರಿ (ವರ್ಲ್ಡ್ ಬ್ಯೂರೋ) ಇದೆ. ಇದರ ಮುಖ್ಯ ಕಛೇರಿ ಜಿನೀವಾದಲ್ಲಿದೆ. ಮುಖ್ಯ ಕಛೇರಿಗೆ ಪೂರಕವಾಗಿ ಕೆಲಸ ಮಾಡಲು ಆರು ಪ್ರಾದೇಶಿಕ ಕಛೇರಿಗಳಿವೆ:

1. ಏಷಿಯಾ ಪೆಸಿಫಿಕ್ ಪ್ರದೇಶ (ಭಾರತವೂ ಸೇರಿದಂತೆ 23 ಸದಸ್ಯ ರಾಷ್ಟ್ರಗಳು.

2. ಅರಬ್ ಪ್ರದೇಶ

3. ಆಫ್ರಿಕನ್ ಪ್ರದೇಶ

4. ಯೂರೋಪಿಯನ್ ಪ್ರದೇಶ

5. ಯುರೇಷಿಯಾ ಪ್ರದೇಶ

6. ಅಂತರ ಅಮೆರಿಕನ್ ಪ್ರದೇಶ

ಈ ಆರೂ ಕಛೇರಿಗಳಲ್ಲಿ, ಪ್ರತಿಯೊಂದರಲ್ಲಿಯೂ, ಒಟ್ಟು 31 ವೃತ್ತಿಪರ ಅಧಿಕಾರಿಗಳೂ, ಅನೇಕ ಸ್ವಯಂ ಸೇವಕರೂ ಕೆಲಸ ಮಾಡುತ್ತಾರೆ.

ವಿಶ್ವದ ಎಲ್ಲಾ ರಾಷ್ಟ್ರಗಳೂ– (ಕಮ್ಯೂನಿಸ್ಟ್ ರಾಷ್ಟ್ರಗಳ ವಿನಾ) ಒಟ್ಟು 217 ರಾಷ್ಟ್ರಗಳು–ವಿಶ್ವ ಸ್ಕೌಟ್ ಸಂಸ್ಥೆಗಳ ಒಕ್ಕೂಟ (ವೋಸಂ)ದ ಸದಸ್ಯರಾಗಿದ್ದು, ಇತ್ತೀಚಿನ ಗಣತಿಯ ಪ್ರಕಾರ 450 ದಶಲಕ್ಷಕ್ಕೂ ಹೆಚ್ಚು ಸದಸ್ಯರಿದ್ದಾರೆ.

ಜಿನೀವಾದಲ್ಲಿರುವ ವೋಸಂನ ಕಛೇರಿಯಲ್ಲಿ ನಮ್ಮ ರಾಜ್ಯದ ಶ್ರೀ ಶ್ರೀನಾಥ್ ಕೆಲಸಮಾಡುತ್ತಿರುವುದೂ, ಏಷಿಯಾ ಪೆಸಿಫಿಕ್ ಪ್ರದೇಶ ಕಛೇರಿ(ಫಿಲಿಪೈನ್ಸ್) ಯಲ್ಲಿ ನಮ್ಮ ರಾಜ್ಯ ಕಾರ್ಯದರ್ಶಿಯವರಾದ ಶ್ರೀ ಎಂ. ಎ. ಖಾಲಿದ್ ರವರು ಟಾಸ್ಕ್ ಫೋರ್ಸ್‌ನ ಕನ್ಸಲ್ಟೆಂಟ್, ಆಗಿರುವುದು ಕನ್ನಡಿಗರಾಗಿ ನಾವು ಹೆಮ್ಮೆ ಪಡಬೇಕಾದ ವಿಷಯವಾಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
(ರಾಷ್ಟ್ರೀಯ ಮಟ್ಟದಲ್ಲಿ)

- ರಾಷ್ಟ್ರೀಯ ಪರಿಷತ್ತು
  - ಪ್ರಧಾನ ಪೋಷಕರು
    ಘನತೆವೆತ್ತ ರಾಷ್ಟ್ರಪತಿಗಳು
    - ಪೋಷಕರು
      ಘನತೆವೆತ್ತ ಉಪ ರಾಷ್ಟ್ರಪತಿಗಳು
      - ಅಧ್ಯಕ್ಷರು
        - ಉಪಾಧ್ಯಕ್ಷರು
        - ಉಪಾಧ್ಯಕ್ಷರು
        - ಉಪಾಧ್ಯಕ್ಷರು
        - ಉಪಾಧ್ಯಕ್ಷರು
        - ಉಪಾಧ್ಯಕ್ಷರು
        - ಉಪಾಧ್ಯಕ್ಷರು
        - ರಾಷ್ಟ್ರೀಯ ಆಯುಕ್ತರು
          - ಪ್ರಧಾನ ಆಯುಕ್ತರು (ಸ್ಕೌಟ್ಸ್)
            - ಅಂತಾರಾಷ್ಟ್ರೀಯ ಆಯುಕ್ತರು (ಸ್ಕೌಟ್ಸ್)
            - ಉಪ ಪ್ರಧಾನ ಆಯುಕ್ತರು (ಸ್ಕೌಟ್ಸ್)
          - ಪ್ರಧಾನ ಆಯುಕ್ತರು (ಗೈಡ್ಸ್)
            - ಅಂತಾರಾಷ್ಟ್ರೀಯ ಆಯುಕ್ತರು (ಗೈಡ್ಸ್)
            - ಉಪ ಪ್ರಧಾನ ಆಯುಕ್ತರು (ಗೈಡ್ಸ್)
          - ಕೋಶಾಧಿಕಾರಿ



ಗಮನಿಕೆ: ಐದು ಪ್ರಾದೇಶಿಕ ಕಛೇರಿಗಳು ಇವೆ.
ಉತ್ತರ, ಪೂರ್ವ (ದೆಹಲಿಯಲ್ಲಿ)
ಪಶ್ಚಿಮ (ಪಚಮಢಿಯಲ್ಲಿ)
ದಕ್ಷಿಣ (ಬೆಂಗಳೂರಿನಲ್ಲಿ)
ಈಶಾನ್ಯ (ಗೌಹತಿಯಲ್ಲಿ)

ಪ್ರತಿಪ್ರಾದೇಶಿಕ ಕಛೇರಿಗೂ ಒಬ್ಬ ಸಹಾಯಕ ನಿರ್ದೇಶಕ–ನಿರ್ವಹಣೆಗಾಗಿ ಅವರಿಗೆ ಸಹಾಯಕರಾಗಿ ಪ್ರಾದೇಶಿಕ ಸಂಘಟನಾಧಿಕಾರಿಗಳು ಸ್ಕೌಟ್ಸ್‌ಗೊಬ್ಬರು, ಗೈಡ್ಸ್‌ಗೊಬ್ಬರು– ಈ ಎಲ್ಲಾ ಸ್ತರಗಳಲ್ಲಿ ಇನ್ನೂ ಕಛೇರಿ ಸಿಬ್ಬಂದಿ ಇರುತ್ತದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

(ರಾಜ್ಯ ಮಟ್ಟದಲ್ಲಿ)

ರಾಜ್ಯ ಪರಿಷತ್ತು

ಪೋಷಕರು
ಘನತೆವೆತ್ತ ರಾಜ್ಯಪಾಲರು

ಅಧ್ಯಕ್ಷರು

ಉಪಾಧ್ಯಕ್ಷರು ಉಪಾಧ್ಯಕ್ಷರು ಉಪಾಧ್ಯಕ್ಷರು ರಾಜ್ಯ ಪ್ರಧಾನ ಆಯುಕ್ತರು ಉಪಾಧ್ಯಕ್ಷರು ಉಪಾಧ್ಯಕ್ಷರು ಉಪಾಧ್ಯಕ್ಷರು

ಕಾರ್ಯಕಾರೀ ಸಮಿತಿ

- ರಾಜ್ಯ ಆಯುಕ್ತರು (ಸ್ಕೌಟ್ಸ್)
  - ಸಹಾಯಕ ರಾಜ್ಯ ಆಯುಕ್ತರು (ಸ್ಕೌಟ್ಸ್)
  - ರಾಜ್ಯ ಸ್ಥಾನಿಕ ಆಯುಕ್ತರು (ಸ್ಕೌಟ್ಸ್)
- ಕೋಶಾಧಿಕಾರಿ
  - ರಾಜ್ಯ ಕಾರ್ಯದರ್ಶಿ
- ರಾಜ್ಯ ಆಯುಕ್ತರು (ಗೈಡ್ಸ್)
  - ಸಹಾಯಕ ರಾಜ್ಯ ಆಯುಕ್ತರು (ಗೈಡ್ಸ್)
  - ರಾಜ್ಯ ಸ್ಥಾನಿಕ ಆಯುಕ್ತರು (ಗೈಡ್ಸ್)

- ರಾಜ್ಯ ಸಂಘಟನಾ ಆಯುಕ್ತರು (ಸ್ಕೌಟ್ಸ್)
  - ರಾಜ್ಯ ತರಬೇತಿ ಆಯುಕ್ತರು (ಸ್ಕೌಟ್ಸ್)
  - ತರಬೇತುದಾರರು
  - ಸಹಾಯಕ ತರಬೇತುದಾರರು
  - ಸಹಾಯಕ ರಾಜ್ಯ ಸಂಘಟನಾ ಆಯುಕ್ತರುಗಳು (ಸ್ಕೌಟ್ಸ್)
- ಜಂಟಿ ರಾಜ್ಯ ಕಾರ್ಯದರ್ಶಿ (ಸ್ಕೌಟ್ಸ್)
  - ಜಂಟಿ ರಾಜ್ಯಕಾರ್ಯದರ್ಶಿ (ಗೈಡ್ಸ್)
  - ಕಛೇರಿ ನಿರ್ವಾಹಕರು
  - ಲೆಕ್ಕಾಧಿಕಾರಿಗಳು
- ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್)
  - ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್)
  - ತರಬೇತುದಾರರು
  - ಸಹಾಯಕ ತರಬೇತುದಾರರು
  - ಸಹಾಯಕ ರಾಜ್ಯ ಸಂಘಟನಾ ಆಯುಕ್ತರುಗಳು (ಗೈಡ್ಸ್)

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
(ಜಿಲ್ಲಾ ಮಟ್ಟದಲ್ಲಿ)



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
(ಸ್ಥಳೀಯ ಮಟ್ಟದಲ್ಲಿ)



ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್

(ಪೂರ್ಣ ಘಟಕಮಟ್ಟದಲ್ಲಿ)

ಗ್ರೂಪ್ ಲೀಡರು

ಕಬ್ ಮಾಸ್ಟರ್	ಸ್ಕೌಟ್ ಮಾಸ್ಟರ್	ರೋವರ್ ಲೀಡರು
ಸಹಾಯಕ ಕಬ್ ಮಾಸ್ಟರ್	ಸಹಾಯಕ ಸ್ಕೌಟ್ ಮಾಸ್ಟರ್	ಸಹಾಯಕ ಗ್ರೂಪ ಲೀಡರ್
ಷಟ್ಕ	ಅಷ್ಟಕ	ಚೌಕ/ಪಂಚಕ
ಆರಾಳಿ	ಪೆ. ಲೀ	ರೋ. ಮೇಟ್
ಸಹಾಯಕ	ಸ. ಪೆ. ಲೀ.	ಸಹಾಯಕ
	ಗುಂಪು ಸಮಿತಿ	
	ಅಧ್ಯಕ್ಷರು	
	ಉಪಾಧ್ಯಕ್ಷರು	
	ಸದಸ್ಯರು	
	ಕಾರ್ಯಕಾರಿಣಿ ಮತ್ತು ಉಪಸಮಿತಿಗಳು	

ಗಮನಿಕೆ: ಸಂಸ್ಥೆಯ ವಿವಿಧ ಮಟ್ಟಗಳ ವ್ಯವಸ್ಥೆಯ ಬಗ್ಗೆ ಹೆಚ್ಚು ವಿವರಗಳಿಗಾಗಿ ಭಾಗ–1 ನಿಯಮಾವಳಿ ಪುಸ್ತಕವನ್ನು ಪರಾಮರ್ಶಿಸಿ ಸಂಬಂಧಪಟ್ಟವರೊಡನೆ ಚರ್ಚೆಮಾಡಿ ಹೆಚ್ಚು ತಿಳುವಳಿಕೆ ಪಡೆಯಿರಿ.

ಸ್ಕೌಟಿಂಗ್ ಮತ್ತು
ಸಮಾಜದ ನಡುವಣ ಪರಸ್ಪರ ಬಾಂಧವ್ಯ

ಬಾಲಕರು ಮುಂದೆ ಉತ್ತಮ ನಾಗರೀಕರಾಗಿ ಬಾಳಲು ತರಬೇತಿ ನೀಡುವುದು ಸ್ಕೌಟಿಂಗ್‌ನ ಉದ್ದೇಶ

1. **ಈ ಉದ್ದೇಶವನ್ನು ಸಾಧಿಸಬೇಕಾದರೆ, ಬಾಲಕರಲ್ಲಿ**
   - ದೈವದ ಬಗ್ಗೆ ಒಲವು, ದೇಶಾಭಿಮಾನ, ಗೌರವಪ್ರಜ್ಞೆ ಮತ್ತು ಸ್ವಾಭಿಮಾನಗಳನ್ನು ಮೂಡಿಸಬೇಕು.
   - ದಯಾರ್ದ್ರತೆ, ಕಷ್ಟಜೀವಿಗಳ ಬಗ್ಗೆ ಅನುಕಂಪ, ನಮ್ರತೆಯ ವರ್ತನೆ ಇವುಗಳನ್ನು ಕಲಿಸಬೇಕು.
   - ಸದಾ ನಿರ್ಮಲವಾದ ಮನಸ್ಸು ಮತ್ತು ಆರೋಗ್ಯದಿಂದ ಕೂಡಿದ ದೃಢವಾದ ದೇಹ ಇವುಗಳ ಬೆಳವಣಿಗೆಗೆ ಸಹಾಯ ಮಾಡಬೇಕು.
   - ಮಿತವ್ಯಯತೆಗೆ ಉತ್ತೇಜನ ನೀಡಬೇಕು.
   - ನಗುನಗುತ್ತಾ ವ್ಯವಹರಿಸಲು ಕಲಿಸಬೇಕು.
   - ಒಟ್ಟಿನಲ್ಲಿ ಬಾಲಕರ ಬಹುಮುಖ ಬೆಳವಣಿಗೆ ಮತ್ತು ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗಬೇಕು.
2. **ಸ್ಕೌಟಿಂಗ್ ಇತರ ಯಾವುದೇ ಸಾಮಾಜಿಕ ಸಂಸ್ಥೆಯನ್ನು ದ್ವೇಷಿಸುವುದಿಲ್ಲ. ಎಲ್ಲರೊಡನೆ ಮಧುರವಾದ ಬಾಂಧವ್ಯವನ್ನು ಹೊಂದಿರುತ್ತದೆ.**
   - ಬಾಲಕರು ದೇಶಾಭಿಮಾನಿಗಳಾಗಿರಲೂ; ತಮಗೂ ತಾವು ನೆಲೆಸಿರುವ ಸಮಾಜಕ್ಕೂ ಉಪಯುಕ್ತವಾದ ಹವ್ಯಾಸಗಳನ್ನೂ ಕಾರ್ಯಕ್ರಮಗಳನ್ನೂ ವೃತ್ತಿಯನ್ನೂ ರೂಢಿಸಿಕೊಳ್ಳಲು, ಮುಂದುವರೆಸಲು ಅವಕಾಶಗಳನ್ನು ಕಲ್ಪಿಸುತ್ತದೆ.
3. **ಈ ರೀತಿಯಲ್ಲಿ**
   - ಉತ್ತಮ ನಾಗರೀಕರು ಹೆಚ್ಚಿದಂತೆ, ಸಮಾಜದಲ್ಲಿ ಮತಸಾಮರಸ್ಯ ಪರಸ್ಪರ ನೆರವು, ಉತ್ತಮ ಬಾಂಧವ್ಯಗಳು ನೆಲೆಯೂರಿ, ಸಮಾಜವು ನೆಮ್ಮದಿಯಿಂದ ಬಾಳುತ್ತದೆ. ಸುಖೀರಾಜ್ಯದ ಕನಸು ನನಸಾಗುತ್ತದೆ.

4. **ಸಮಾಜದ**

- ಅಂತರ್ಭಾಗವಾಗಿ ಸ್ಕೌಟಿಂಗ್‌ನ ಕಾರ್ಯಕ್ರಮಗಳು ಬೆಳಗಬೇಕು. ಸ್ಕೌಟಿಂಗ್-ಸಮಾಜ ಇವುಗಳ ನಡುವಿನ ಸಂಬಂಧವು ಅವಿನಾಭಾವವಾದುದು. ಪರಸ್ಪರವಾಗಿ ಆಗುಹೋಗುಗಳಿಗೆ ಸ್ಪಂದಿಸುತ್ತಾ, ಮಧುರ ಬಾಂಧವ್ಯವನ್ನು ಬೆಳೆಸಿಕೊಂಡು ಮುಂದುವರೆಯಬೇಕು.

5. **ಸ್ಕೌಟಿಂಗ್**

- ಊರ್ಜಿತವಾಗಬೇಕಾದರೆ ಬಾಲಕರು. ಬಾಲಕರು ಎಂದೊಡನೆ ತಾಯಿ ತಂದೆಯರು; ವಿವಿಧ ಚಟುವಟಿಕೆಗಳಿಗೆ ವಿವಿಧ ಸ್ಥಳಗಳು; ಕಾರ್ಯಕ್ರಮಗಳನ್ನು ನೋಡಿ ಮೆಚ್ಚುವ, ಬೆಂಬಲ ನೀಡುವ ಜನರು ಬೇಕು. ಶಾಲಾ ಕಾಲೇಜುಗಳು, ಸಂಘಸಂಸ್ಥೆಗಳು, ಪರಿಸರ ಇತ್ಯಾದಿಗಳ ಸ್ಪಂದನೆ, ನೆರವು (ಹಣ ಕಾಸೂ ಸೇರಿದಂತೆ) ಸಹಕಾರ ಮತ್ತು ಮಾನ್ಯತೆ ಇರಬೇಕು.
- ಹೀಗೆ ನಡೆದು ಬಂದ ಕೆಲಸ ಕಾರ್ಯಗಳು ಸಮಾಜದ ದೃಷ್ಟಿಗೆ ಬರುವಂತೆ ಮಾಡುವ ಮಾಧ್ಯಮ ಬಲಗೊಳ್ಳಬೇಕು.

6. **ಹಾಗಾದರೆ**

- ನಾವೇನು ಮಾಡುವುದು ? ಸ್ಕೌಟರುಗಳು, ಪದಾಧಿಕಾರಿಗಳು, ತಾಯ್ತಂದೆಯರು, ಸಂಘಸಂಸ್ಥೆಗಳು, ಸರ್ಕಾರ ಇತ್ಯಾದಿ ವಿವಿಧ ರೀತಿಯಲ್ಲಿ, ವಿವಿಧ ಸ್ತರಗಳಲ್ಲಿ ವಿಧ ವಿಧವಾದ ಕೆಲಸ ಕಾರ್ಯಗಳು, ಸ್ಕೌಟರುಗಳು, ನಾಯಕರುಗಳು ಈ ಅಂಶಗಳ ಬಗ್ಗೆ ಚರ್ಚಿಸಿ ಒಮ್ಮತಕ್ಕೆ ಬನ್ನಿ, ನಿರ್ಧಾರಕ್ಕೆ ಬನ್ನಿ, ಕಾರ್ಯಗತ ಮಾಡಿ.

ಮಧುರ ಬಾಂಧವ್ಯ – ಮಧುರ ಬಾಳ್ವೆ – ಮಧುರ ಸಮಾಜ
ಅದುವೇ ನಮ್ಮ ಗುರಿ.

ಸ್ಕೌಟಿಂಗ್‌ನಲ್ಲಿ ಹಿರಿಯರಾದ ನಮ್ಮ ಪಾತ್ರ

ಸ್ಕೌಟಿಂಗ್‌ನ ಪರಿಚಯವಾಯಿತು. ಇದನ್ನು ಅರ್ಥಮಾಡಿಕೊಂಡು, ಅರಿವನ್ನು ಮೂಡಿಸಿಕೊಂಡು, ಸಮಾಜ ಋಣದ ಭಾಗವಾಗಿ, ಸ್ಕೌಟಿಂಗ್ ಮೂಲಕ ನಾವೇನು ಮಾಡಬಹುದೆಂಬ ಬಗ್ಗೆ, ಸ್ಥೂಲವಾಗಿ ಕೆಲವು ಅಂಶಗಳನ್ನಿಲ್ಲಿ ಕೊಡಲಾಗಿದೆ. ನಿರ್ವಹಿಸುವ ಪಾತ್ರದ ಅವಶ್ಯಕತೆಗೆ ತಕ್ಕಂತೆ, ಏನು ಮಾಡಬೇಕೆಂದು ಯೋಚಿಸಿ ಕಾರ್ಯರಂಗಕ್ಕಿಳಿಯಬೇಕು. ಮೊದಲನೆಯದಾಗಿ "ಲವಣದಷ್ಟು ಶ್ರವಣ, ಮೇರುವಿನಷ್ಟು ಮನನ, ಆಕಾಶದಷ್ಟು ಆಚರಣೆ" ನಮ್ಮದಾಗಬೇಕು. ನಮ್ಮ ನಡೆನುಡಿಗಳು ಆದರ್ಶಯುತವಾಗಿರಬೇಕು.

ಸ್ಕೌಟ್ ನಿಯಮ, ಪ್ರತಿಜ್ಞೆಗಳ ಅನುಕರಣೆಯು ಬಹಳ ಮುಖ್ಯವಾದುದು. ಅವುಗಳಲ್ಲಿ ಅಡಕವಾಗಿರುವ ಭಾವನೆಗಳು ಹಿಂಡಿನ ಜೀವನದಲ್ಲಿ ಮೊಳಕೆಯೊಡೆಯಬೇಕು. ದಳದ ಪಟಾಲಂಗಳಲ್ಲಿ ಬಲಗೊಳ್ಳಬೇಕು. ರೋವರ್ ತಂಡಗಳಲ್ಲಿ ಪರಿಪಕ್ವಗೊಳ್ಳಬೇಕು. ಬಾಲಕರಲ್ಲಿನ ಈ ಬೆಳವಣಿಗೆಗೆ ಪೂರಕವಾಗಿ ಹಿರಿಯರಾದ (ಹಿರಿಯ ಸದಸ್ಯರು, ಪದಾಧಿಕಾರಿಗಳು, ಸ್ಕೌಟರುಗಳು, ಆಯುಕ್ತರುಗಳು ಇತ್ಯಾದಿ) ನಮ್ಮಲ್ಲಿ ವ್ಯಕ್ತವಾಗಬೇಕು. ನುಡಿಯಂತೆ ನಡೆ ಇರಬೇಕು.

ವಿಶ್ವ ಭ್ರಾತೃತ್ವವು, ನೆರೆಹೊರೆಯಲ್ಲಿ, ಘಟಕಗಳಲ್ಲಿ, ಮನೆಗಳಲ್ಲಿ, ಮೊಳಕೆಯೊಡೆದು, ಬಲಗೊಂಡು, ಪರಿಪಕ್ವವಾಗಬೇಕು. ಅಭಿವೃದ್ಧಿಯಾಗಬೇಕು. "ಎದುರಿಗಿರುವ ಅಣ್ಣ ತಮ್ಮಂದಿರನ್ನು ಪ್ರೀತಿಸಲಾರದವನು, ಕಣ್ಣಿಗೆ ಕಾಣದ ದೇವರನ್ನು ನಂಬುತ್ತಾನಾದರೂ, ಹೇಗೆ? ಪ್ರತಿಯೊಬ್ಬರಲ್ಲೂ, ದೇವರನ್ನು ಕಾಣಬಹುದಾದರೆ, ದ್ವೇಷ ಮಾಡುವ ಪ್ರಮೇಯವೇ ಬರುವುದಿಲ್ಲ. ಉಪನಿಷತ್ತುಗಳಲ್ಲಿ ಹೇಳುವಂತೆ ಜಗತ್ತೆಲ್ಲವೂ ಒಂದೇ ಕುಟುಂಬ-(ಮಹೇಶ್ವರನೇ ತಂದೆ, ಪಾರ್ವತಿದೇವಿ ತಾಯಿ, ಸಕಲ ಜೀವರಾಶಿಯೂ ಬಂಧುಗಳು, ಜಗತ್ತೊಂದು ಕುಟುಂಬ). ಎಲ್ಲರೂ ಆ ಮಹೇಶ್ವರನ ಮನೆಯವರು, ಅವನ ಒಕ್ಕಲು. ಕಲಹಕ್ಕೆ ಎಡೆಯಿಲ್ಲ. ಆಗ ಎಲ್ಲವೂ ಸುಸೂತ್ರ.

ಹಿರಿಯರಲ್ಲಿ ಮುಂಗೋಪ, ಚುಚ್ಚುಮಾತನಾಡುವ ಗುಣ, ಅಹಂಕಾರ, ಅನಾಚಾರಗಳಿರಬಾರದು. ಜಾಗೃತರಾಗಿ, ನಡವಳಿಕೆಯನ್ನು ಸುಧಾರಿಸಿಕೊಂಡು, ಕಿರಿಯರಿಗೆ ಆದರ್ಶಪ್ರಾಯರಾಗಬೇಕು.

ಹಿರಿಯರ ನಡವಳಿಕೆಯಲ್ಲಿ ಆವೇಶಪರ ಭಾವನೆಗಳಿಗೆ ಜಾಗವಿಲ್ಲ. ಅನಾವಶ್ಯಕ ಇತರರ ಹವ್ಯಾಸಗಳಲ್ಲಿ ತಲೆದೂರಿಸಬಾರದು.

ಭಾರತದಲ್ಲಿ ಉತ್ತಮ ನಾಗರೀಕನೆನಿಸಿಕೊಳ್ಳುವವನ ಗುಣ ವಿಶೇಷಗಳು ಬ್ರಿಟನ್ ಅಥವಾ ಅಮೆರಿಕಾ ಅಥವಾ ಇತರೇ ರಾಷ್ಟ್ರಗಳ ನಾಗರೀಕರಿಗಿಂತಲೂ ಭಿನ್ನವಾದುದು. ಪರಸ್ಪರ ಹೋಲಿಕೆ ಸಲ್ಲುವುದಿಲ್ಲ. ಶಾಂತಿಪ್ರಿಯ ಭಾರತೀಯನಿಗೆ, ಭಾರತೀಯನೇ ಸಾಟಿ.

ಸ್ಕೌಟಿಂಗ್ ತನ್ನ ಸದಸ್ಯರಿಂದ ಕೋರುವುದು, ಮುಖ್ಯವಾಗಿ ಸ್ವಪ್ರೇರಿತರಾಗಿ, ಸ್ಕೌಟ್ ನಿಯಮ ಮತ್ತು ಪ್ರತಿಜ್ಞೆಗಳಂತೆ ನಡೆದುಕೊಳ್ಳುವುದು. ಹಿರಿಯರ ಬುದ್ಧಿಶಕ್ತಿ ತಿಳುವಳಿಕೆ ಮತ್ತು ಆಚರಣೆಗಳು ಆದರ್ಶಯುತವಾಗಿದ್ದರೆ, ಸ್ಕೌಟ್ ನಿಯಮ, ಪ್ರತಿಜ್ಞೆಗಳಲ್ಲಿ ನಿಹಿತವಾಗಿರುವ ಅಂಶಗಳ ಪ್ರಭಾವವು ಅಷ್ಟು ಫಲಕಾರಿಯಾಗಿರುತ್ತದೆ.

ಸೋದರತೆಯ ಭಾವನೆಯಿಂದ ಮಾತ್ರ ಮೈತ್ರಿಯು ಸಾಧ್ಯ. ಪರಸ್ಪರ ಅರ್ಥಮಾಡಿಕೊಂಡು, ಜಗತ್ತಿನ ರಾಷ್ಟ್ರಗಳ ಶಾಂತಿ ಸೌಹಾರ್ದತೆಗಳಿಂದ ಬಾಳಲೆಂಬುದು, ಆ ದಿಕ್ಕಿನಲ್ಲಿ ಸಹಾಯಕವಾಗಿರುವುದು ಸ್ಕೌಟಿಂಗ್‌ನ ಉದ್ದೇಶವಾಗಿದೆ.

ಬಿ.ಪಿ. ರವರ ಮಾತಿನಲ್ಲಿ ಹೇಳುವುದಾದರೆ, ಸೇವೆಯು ಪರಮ ಧರ್ಮ, ಸೇವೆಯು ಆತ್ಮ ತೃಪ್ತಿಗೇ, ಹೊರತು, ಹೆಸರು ಪ್ರತಿಷ್ಠೆಗಳ ಮರೀಚಿಕೆಯನ್ನು ಹಿಂಬಾಲಿಸುವುದಲ್ಲ. ಸೇವೆಯಿಂದ ಇತರರಿಗೆ ಆನಂದವು ದೊರಕಬೇಕು. ಅವರ ಆನಂದದಲ್ಲಿ ನಮ್ಮ ಆನಂದವನ್ನು ಕಂಡುಕೊಳ್ಳಬೇಕು. ಇದು ಮೊದಲ ಹೆಜ್ಜೆ

"ಮಕ್ಕಳ ಶ್ರೇಯೋಭಿವೃದ್ಧಿ ನಮ್ಮ ಗುರಿ, ನಾಡಿನ ಭಾವೀ ಪ್ರಜೆಗಳ ರೂವಾರಿಗಳು ನಾವು" ಎಂತಹ ಉದಾತ್ತ ಭಾವನೆ. ಅದಕ್ಕೆ ತಕ್ಕಂತೆ ನಮ್ಮ ನಡೆನುಡಿ. ಇದು ಎರಡನೆಯ ಹೆಜ್ಜೆ.

ಮೂರನೆಯ ಹೆಜ್ಜೆಯಾಗಿ ನಮ್ಮ ಈ ಸಂಕಲ್ಪ, ನಡೆನುಡಿಗಳು ನಮ್ಮ ಕೆಲಸದಲ್ಲಿ ಪ್ರತಿಬಿಂಬಿತವಾಗಬೇಕು. ನಾವು ಮಾಡಬಹುದಾದ ಅಂತಹ ಕೆಲಸಗಳಲ್ಲಿ ಕೆಲವನ್ನು ಈ ಕೆಳಗೆ ಕೊಡಲಾಗಿದೆ.

ಸ್ಕೌಟರುಗಳಾಗಿ ಸೇವೆ ಸಲ್ಲಿಸಲಿಚ್ಛಿಸುವವರು.

– 18 ವಯಸ್ಸಿಗೆ ಮೇಲ್ಪಟ್ಟಿರಬೇಕು.

– ಕನಿಷ್ಠ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.

- ಸ್ಕೌಟಿಂಗ್ ಬಗ್ಗೆ ಒಲವಿರಬೇಕು.
- ಮಕ್ಕಳ ಪುರೋಭಿವೃದ್ಧಿಯ ಬಗ್ಗೆ ಕಾಳಜಿಯಿರಬೇಕು.
- ಸೂಕ್ತ ವಿಭಾಗವನ್ನಾವರಿಸಿಕೊಂಡು,
  ತರಬೇತಿ ಪಡೆದು ಕಾರ್ಯಶೀಲರಾಗಬೇಕು.

ಬೆಂಬಲಿಗರಾಗಿ ಸೇವೆ ಸಲ್ಲಿಸಲಿಚ್ಛಿಸುವವರು

- ಉದಾ: ಮುಖ್ಯೋಪಾಧ್ಯಾಯರು, ಉದ್ಯಮಿಗಳು, ಕ್ಷೇತ್ರಶಿಕ್ಷಣಾಧಿಕಾರಿಗಳು, ಪದಕ ಪರೀಕ್ಷಕರು, ಪದಕ ಬೋಧಕರು ಇತ್ಯಾದಿ.
- ಸೂಕ್ತ ಅಭ್ಯರ್ಥಿಗಳನ್ನು (ದಳಗಳಿಲ್ಲದ ಕಡೆ) ಗುರುತಿಸಿ, ತರಬೇತಿಗೆ ಕಳುಹಿಸುವುದು, ಆರ್ಥಿಕ, ಸಾಮಾಜಿಕ, ಮತ್ತು ಇತರೆ ಕ್ಷೇತ್ರಗಳಲ್ಲಿ ಬೆಂಬಲ ನೀಡುವುದು.
- ಇವರುಗಳಿಗೂ ಯುಕ್ತವಾದ ತರಬೇತಿ ಇರುತ್ತದೆ.

ಕಾರ್ಯದರ್ಶಿ, ಆಯುಕ್ತರು ಇತ್ಯಾದಿ ಪದಾಧಿಕಾರಿಗಳಾಗಿ ಸೇವೆ

- ಸೂಕ್ತ ತರಬೇತಿ ಪಡೆದು, ತಿಳುವಳಿಕೆ ಪಡೆಯುವುದು,
- ದಳ ಸಭೆಗಳ ಪರಿಶೀಲನೆ, ಮಾರ್ಗದರ್ಶನ
- ಮಕ್ಕಳ ಹಾಗೂ ದಳನಾಯಕರುಗಳ ಪ್ರಗತಿಯ ಬಗ್ಗೆ ಅಸಕ್ತಿ ತೋರುವುದು, ಬೆಂಬಲ ನೀಡುವುದು.
- ಸಂಸ್ಥೆಯ ವಿವಿಧ ಸ್ತರಗಳ ಕಾರ್ಯಕಲಾಪಗಳಿಗೆ ಮಕ್ಕಳು / ನಾಯಕರ ನಿಯೋಜನೆ, ಸಹಕಾರ, ಬೆಂಬಲ

ಶಾಂತಿಗೃಹ, ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಹಾಗೂ ಶಿಬಿರ ಕೇಂದ್ರ

ಗೈಡ್ ವಿಭಾಗದ ರಾಜ್ಯ ಕಛೇರಿ, ಅರಮನೆ ರಸ್ತೆ

ಬೆಂಗಳೂರು-560 001. ದೂರವಾಣಿ: 22267470



ಈ ಕೇಂದ್ರದಲ್ಲಿ ಶಿಬಿರ ಹೂಡಲು ಸ್ವಾಗತಿಸುವ
ಗರ್ಲ್‌ಗೈಡ್ ವಿಭಾಗದ ರಾಜ್ಯ ಕಛೇರಿ.

30 ವರ್ಷಗಳ ಚರಿತ್ರೆಯುಳ್ಳ ಈ ಕೇಂದ್ರವು, ಬೆಂಗಳೂರು ಮಹಾನಗರ ಮಧ್ಯದಲ್ಲಿ, ಪ್ರಖ್ಯಾತ ವಿಧಾನಸೌಧದ ಬಳಿ, ಅದರ ನೈಋತ್ಯ ಮೂಲೆಯಲ್ಲಿ, ಅರಮನೆ ರಸ್ತೆಯಲ್ಲಿ, ಮಹಾರಾಣೀಸ್ ಕಾಲೇಜ್ ಪಕ್ಕದಲ್ಲಿ ಶೋಭಿಸುತ್ತಿದೆ. ಕೇಂದ್ರವು $3^1/_2$ ಎಕರೆ ವಿಸ್ತೀರ್ಣವಿದೆ. ರಾಜ್ಯ ಗೈಡ್ಸ್ ಕೇಂದ್ರ ಕಛೇರಿ, ವಿಶಾಲವಾದ ಸಭಾಂಗಣ, ಪಟಾಲಂಗಳು ಸ್ವತಂತ್ರವಾಗಿ ಶಿಬಿರ ಹೂಡಲು ಪುಟ್ಟ ಪುಟ್ಟ ಕ್ಯಾಬಿನ್‌ಗಳು, ನೆರಳು ಮತ್ತು ಮನೋಲ್ಲಾಸ ನೀಡುವ ವೃಕ್ಷರಾಶಿ ಹೀಗೆ ಅನೇಕ ಸೌಕರ್ಯಗಳನ್ನು ಹೊಂದಿದೆ. ನಗರ ಮಧ್ಯದಲ್ಲಿದ್ದರೂ, ಗ್ರಾಮೀಣ ಪ್ರದೇಶದ ಪ್ರಶಾಂತತೆಯನ್ನು ಇಲ್ಲಿ ಕಾಣಬಹುದು.

ಕಾಲಕ್ಕೆ ತಕ್ಕ, ಆಧುನಿಕ ಸೌಕರ್ಯಗಳನ್ನೊದಗಿಸುವ ಕಾಮಗಾರಿ ಇನ್ನೂ ನಡೆಯುತ್ತಿದೆ.

ಕೊಂಡಜ್ಜಿ ಬಸಪ್ಪ ಸ್ಕೌಟ್ಸ್-ಗೈಡ್ಸ್, ರಾಜ್ಯ ತರಬೇತಿ ಹಾಗೂ ಶಿಬಿರ ಕೇಂದ್ರ

ಕೊಂಡಜ್ಜಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ

ದೂರವಾಣಿ: 08192-281821



ಕೈಬೀಸಿ ಕರೆಯುವ, ಕಣ್ತಣಿಯುವ ಪ್ರವೇಶದ್ವಾರದ ಬಳಿಯ ಸುಂದರ ನೋಟ

ದೇಶದಲ್ಲೇ ಸುಂದರವಾದ, ಗುಡ್ಡಗಾಡು, ವಿಶಾಲವಾದ ಕೆರೆ ಹಾಗೂ ವನರಾಶಿಯಿಂದ ಕಂಗೊಳಿಸುತ್ತಿರುವ ಪ್ರಕೃತಿರಮ್ಯ ಪ್ರದೇಶವಿದು.

ಎಲ್ಲಾ ವಿಧದ ಸ್ಕೌಟ್ ಗೈಡ್ ಚಟುವಟಿಕೆಗಳಿಗೂ, ಹೇಳಿ ಮಾಡಿಸಿದಂತಿರುವ ಹೊರಾಂಗಣ, ಜಲಾಂಗಣ, ಗಿಡಮರಗಳು, ಗುಡ್ಡಗಾಡು ಹಾಗೂ ಮೈದಾನಗಳಿಂದ ಈ ಕೇಂದ್ರವು ಶೋಭಿಸುತ್ತಿದೆ.

ವಿವಿಧ ರೀತಿಯ ವಸತಿ ಸೌಕರ್ಯವನ್ನು ಹೊಂದಿರುವ ಈ ಕೇಂದ್ರದಲ್ಲಿ ಏಕಕಾಲದಲ್ಲಿ 500ಕ್ಕೂ ಹೆಚ್ಚು ಜನರು (ಬಾಲಕ ಬಾಲಕಿಯರು) ಶಿಬಿರವಾಸವನ್ನು ಸವಿಯಲು ವ್ಯವಸ್ಥೆಯಿದೆ.

ಈ ಕೇಂದ್ರಕ್ಕೆ ಸುಮಾರು 50 ವರ್ಷಗಳ ಚರಿತ್ರೆಯಿದೆ. ಅಲ್ಲದೆ ಐತಿಹಾಸಿಕವಾಗಿ ಪ್ರಸಿದ್ಧ ಸ್ಥಳವೂ ಆಗಿದೆ.

100 ಎಕರೆ ವಿಸ್ತೀರ್ಣವಿರುವ ಈ ಸುಂದರ ಪ್ರದೇಶವು ಬೆಂಗಳೂರಿನಿಂದ 275 ಕಿ.ಮೀ.; ದಾವಣಗೆರೆ ಜಿಲ್ಲಾ ಕೇಂದ್ರ ಹಾಗೂ ಹರಿಹರ ತಾಲ್ಲೂಕು ಕೇಂದ್ರಗಳಿಂದ 12 ಕಿ.ಮೀ. ಮತ್ತು ಕೊಂಡಜ್ಜಿ ಗ್ರಾಮದಿಂದ 2 ಕಿ.ಮೀ. ದೂರದಲ್ಲಿದೆ.

ಸಾಹಸಿಗರಿಗೂ, ಪ್ರಕೃತಿ ವೀಕ್ಷಕರಿಗೂ, ಸ್ಕೌಟ್ ಗೈಡ್‌ಗಳಿಗೂ ಸದಾ ಸ್ವಾಗತವನ್ನು ಬಯಸುವ ಸುಂದರ ನೆಲೆ ಈ ಕೇಂದ್ರ.